## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ, ಉಡುಪಿ ಜಿಲ್ಲೆ, ಉಡುಪಿ

## ಸೆಷನ್ಸ್ ಕೇಸ್ ನಂಬ್ರ: 11/2024

**ಇವರೊಳಗೆ:**

ಸರಕಾರದ ಪರವಾಗಿ ...... ಫಿರ್ಯಾದಿದಾರರು
ಪೊಲೀಸ್ ನಿರೀಕ್ಷಕರು, ಮಣಿಪಾಲ ಪೊಲೀಸ್ ಠಾಣೆ

- ವಿರುದ್ಧ -

...... ಆರೋಪಿತರು

ಆರೋಪಿಯ ಹೆಸರು : Rajashekhar Reddy

ತಂದೆಯ ಹೆಸರು : B.J. Ishwarappa

ಪ್ರಾಯ : 53 years

ಉದ್ಯೋಗ : Driver

ವಾಸಸ್ಥಳ : Manur, Kota

### ದಂಡ ಪ್ರಕ್ರಿಯಾ ಸಂಹಿತೆ ಕಲಂ-313 ರ ರೀತ್ಯಾ ಮಾಡುವ ಆರೋಪಿಯ ವಿಚಾರಣೆ

ಪ್ರಶ್ನೆ: 1 ನೀವು ಅಭಿಯೋಜನೆ ಸಾಕ್ಷಿದಾರರು ನ್ಯಾಯಾಲಯದ ಮುಂದೆ ನುಡಿದಿರುವಂತಹ ಸಾಕ್ಷ್ಯವನ್ನು ಕೇಳಿದ್ದೀರಾ ?

ಉತ್ತರ: ಹೌದು

ಪ್ರಶ್ನೆ: 2 ಪ್ರಾಸಾ-1 ಲೋಹಿತ್ ಪೂಜಾರಿ, ಪ್ರಾಸಾ -2 ಶಶಿಕುಮಾರ್, ಪ್ರಾಸಾ -3 ಸಚಿನ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮೃತ ಭರತ್ ಮತ್ತು ಯತೀಶ್ ತಮ್ಮ ಸ್ನೇಹಿತರು. ನೀವು 1 ರಿಂದ 9 ನೇ ಆರೋಪಿತರಾದ ನೀವು ಗೊತ್ತು, ನೀವು 9 ನೇ ಆರೋಪಿ ಹಿಂದೂ ಜಾಗರಣ ವೇದಿಕೆಯ ಸಂಘಟಕನಾಗಿದ್ದು, ಚಾಸಾ-5 ರಿಂದ 10 ಸದಸ್ಯರಾಗಿದ್ದರು. ನಿಮ್ಮ ಜೊತೆ ವೈಮನಸ್ಸು ಉಂಟಾಗಿ ಸದರಿ ವೇದಿಕೆಯಿಂದ ಎಲ್ಲರೂ ಹೊರಬಂದು ಭಗತ್ ಸಿಂಗ್ ಕ್ರಾಂತಿಕಾರಿ ಬಳಗ, ಕಲ್ಮಾಡಿ ಎಂಬ ಯುವಕ ಸಂಘ ಮಾಡಿರುತ್ತಾರೆ. ಮೃತ

ಭರತ್ ಈತನು ಕಲ್ಲಾಡಿ ಯುವಕ ಸಂಘದ ಅಧ್ಯಕ್ಷನಾಗಿದ್ದು ಸ್ಪರ್ಶ ಎನ್ನುವ ಕಾರ್ಯಕ್ರಮವನ್ನು ತಮ್ಮ ಸಂಘಟನೆಯಿಂದ ಮಾಡಿದ್ದು, ನಿನಾದ ಎನ್ನುವ ಕಾರ್ಯಕ್ರಮವನ್ನು ನೀನು 9 ನೇ ಆರೋಪಿ ಮಾಡಿದ್ದು ಇದರಿಂದ ತಮ್ಮೊಳಗೆ ಅಸಮಾಧಾನ ಉಂಟಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ 3 ಫ್ರಾಸಾ -1 ರಿಂದ 3 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಫ್ರಾಸಾ-1, ಪ್ರದೀಪ್ ಮತ್ತು ಕಿರಣ್ ಎನ್ನುವವರಿಗೆ ಹಣವನ್ನು ಕೊಟ್ಟಿದ್ದು, ಸದರಿ ಹಣವನ್ನು ಫ್ರಾಸಾ -1 ಈತನಿಗೆ ಮರಳಿ ಕೊಡಬೇಡ ಎಂದು ನೀವು 9 ನೇ ಆರೋಪಿ ಹೇಳಿದ್ದು, ಈ ಹಿನ್ನಲೆಯಲ್ಲಿ ಪ್ರದೀಪ ಫ್ರಾಸಾ -1 ಈತನ ಮೇಲೆ ದೂರು ಕೊಟ್ಟಿದ್ದನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ 4 ಫ್ರಾಸಾ-1 ಮತ್ತು ಫ್ರಾಸಾ-4 ಸುಜಾತ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಜುಲೈ 2018 ರಲ್ಲಿ 1 ನೇ ಆರೋಪಿಯ ಮನೆಯ ಪಕ್ಕದಲ್ಲಿ ತಾವು ಜಾಗ ಖರೀದಿ ಮಾಡಿದ್ದು, ತಮ್ಮ ಜಾಗದ ಪಕ್ಕದಲ್ಲಿ 1 ನೇ ಆರೋಪಿ ಟಾಯ್ಲೆಟ್ ಹೊಂಡ ತೆಗೆದಿದ್ದನು, ತಮ್ಮ ಜಾಗದಲ್ಲಿ ಬಾವಿ ಇರುವುದರಿಂದ ಟಾಯ್ಲೆಟ್ ಹೊಂಡ ತೆಗೆಯುವುದರಿಂದ ಬಾವಿಯ ನೀರು ಕಲುಷಿತ ಆಗುತ್ತದೆ ಎಂದು ತಕರಾರು ಮಾಡಿದ್ದಕ್ಕೆ 1 ನೇ ಆರೋಪಿ ಫ್ರಾಸಾ-1 ಇವರಿಗೆ ಬೆದರಿಕೆ ಹಾಕಿದ್ದನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ 5 ಫ್ರಾಸಾ-1 ಮತ್ತು ಫ್ರಾಸಾ-4 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿಃ 25-01-2019 ರಂದು ಸ್ಥಳಕ್ಕೆ ಆರೋಗ್ಯ ಇಲಾಖೆಯವರು ಮತ್ತು ಪಂಚಾಯಿತಿಯವರು ಬಂದು ಟಾಯ್ಲೆಟ್ ಹೊಂಡ ನಿರ್ಮಿಸುವುದು ಬೇಡಾ ಎಂದು ಹೇಳಿದರು. ಆ ಸಮಯದಲ್ಲಿ

ನೀವು 1, 5 ಮತ್ತು 6 ನೇ ಆರೋಪಿತರು ಹಾಗೂ 4 ನೇ ಅರೋಪಿಯ ತಾಯಿ ಸ್ಥಳದಲ್ಲಿ ಇದಿದ್ದಾಗಿ ಆಗ ನೀವು 1 ನೇ ಆರೋಪಿ ಫ್ರಾಸಾ-1 ಇವರಿಗೆ ಅದೇ ಟಾಯ್ಲೆಟ್ ಹೊಂಡದಲ್ಲಿ ಹಾಕಿ ಮುಚ್ಚುತ್ತೇನೆ ಎಂದು ಬೆದರಿಸಿದನು, 5 ಮತ್ತು 6 ನೇ ಆರೋಪಿತರಿಗೆ, ಫ್ರಾಸಾ-1, ಭರತ್ ಮತ್ತು ಯತೀಶನನ್ನು ಎತ್ತಿಬಿಡುವಂತೆ ಹೇಳಿದನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಹೌದು ಬಂದಿದ್ದರು, ಬೆದರಿಕೆ ಹಾಕಿಲ್ಲ

ಪ್ರಶ್ನೆ: 6 ಫ್ರಾಸಾ-1 ರಿಂದ 4 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 26.01.2019 ರಂದು ರಾತ್ರಿ 10.45 ರ ಸಮಯದಲ್ಲಿ 1 ನೇ ಆರೋಪಿಯ ಮನೆಯ ಕಡೆಯಿಂದ ಫ್ರಾಸಾ-1 ಈತನ ಮನೆಗೆ, 1 ರಿಂದ 8 ನೇ ಆರೋಪಿತರು ತಲವಾರು, ರಾಡು ಹಿಡಿದುಕೊಂಡು ಬಂದರು, 1 ನೇ ಆರೋಪಿ ಮೃತ ಭರತ್‌ಗೆ ನೀನು ಕೋಟಾದಲ್ಲಿ ದೊಡ್ಡ ರೌಡಿಯಾ ಎಂದು ಹೇಳಿ ತಲವಾರಿನಿಂದ ಆತನ ಕುತ್ತಿಗೆಗೆ, 2 ನೇ ಆರೋಪಿ ತಲವಾರಿನಿಂದ ಆತನ ತಲೆಗೆ, 3 ನೇ ಆರೋಪಿ ತಲವಾರಿನಿಂದ ಆತನ ಕೈಗೆ ಮತ್ತು 4 ನೇ ಆರೋಪಿ ರಾಡ್ ನಿಂದ ಆತನ ತಲೆಗೆ ಹೊಡೆದಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: ಸುಳ್ಳು

ಪ್ರಶ್ನೆ: 7 ಫ್ರಾಸಾ-1 ರಿಂದ 3 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ 1 ನೇ ಆರೋಪಿ ಮೃತ ಯತೀಶ್‌ನಿಗೆ ತಲವಾರಿನಿಂದ ಆತನ ತಲೆಗೆ ಮತ್ತು ಕಾಲಿಗೆ, 2 ನೇ ಆರೋಪಿ ತಲವಾರಿನಿಂದ ಆತನ ತಲೆಗೆ , 3 ನೇ ಆರೋಪಿ ತಲವಾರಿನಿಂದ ಆತನ ತಲೆಗೆ ಮತ್ತು 4 ನೇ ಆರೋಪಿ ರಾಡ್ ನಿಂದ ಆತನ ತಲೆಗೆ ಹೊಡೆದಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: ಸುಳ್ಳು

ಪ್ರಶ್ನೆ:8 ಫ್ರಾಸಾ-1 ರಿಂದ 3 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನೀವು 5 ಮತ್ತು 8 ನೇ ಆರೋಪಿತರು ಚಾಸಾ-8 ಶಶಿಕುಮಾರ್ ಈತನಿಗೆ ರಾಡ್ ನಿಂದ, ನೀವು 6 ಮತ್ತು 7 ನೇ ಆರೋಪಿತರು ಚಾಸಾ-9 ಈತನಿಗೆ ರಾಡ್ ನಿಂದ ಹೊಡೆದಿರುತ್ತೀರಿ, ನೀವು 1,7 ಮತ್ತು 8 ನೇ ಅರೋಪಿತರು ಹತ್ತಿರ ಬರಬೇಡಿ, ತಮ್ಮನ್ನು ಕೊಲ್ಲುತ್ತೇವೆ ಎಂದು ಹೇಳಿದರು. ನೀನು 1 ನೇ ಆರೋಪಿ ತಲವಾರಿನಿಂದ ಹೊಡೆಯಲು ಬಂದಾಗ ಫ್ರಾಸಾ-1 ತಪ್ಪಿಸಿಕೊಂಡು ಬಿದ್ದನು, ಇದರಿಂದ ಆತನಿಗೆ ಗಾಯಗಳಾಗಿರುತ್ತದೆ. 3 ನೇ ಅರೋಪಿ ಫ್ರಾಸಾ-1 ಈತನಿಗೆ ಊರಲ್ಲಿ ಇರಬಾರದು, ಊರು ಬಿಟ್ಟು ಹೋಗಬೇಕು ಎಂದು ಬೆದರಿಕೆ ಹಾಕಿದ್ದನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:9 ಫ್ರಾಸಾ-1 ರಿಂದ 3 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಫ್ರಾಸಾ-1 ಭರತ್ ಈತನನ್ನು ಅಟೋದಲ್ಲಿ ಬ್ರಹ್ಮಾವರ ಆಸ್ಪತ್ರೆಗೆ ಕರೆದುಕೊಂಡು ಹೋದನು,ಅಲ್ಲಿ ವೈದ್ಯರು ಭರತ್ ಮೃತಪಟ್ಟಿದ್ದಾನೆ ಎಂದು ತಿಳಿಸಿದರು. ಪ್ರಸಾದ್ ಮತ್ತು ಉಮೇಶ ಯತೀಶನನ್ನು ಮಣಿಪಾಲ ಆಸ್ಪತ್ರೆಗೆ ಕರೆದು ಹೋದರು, ನಂತರ ಯತೀಶ ಮೃತಪಟ್ಟಿದ್ದಾನೆ ಎಂದು ಗೊತ್ತಾಯಿತು. ಸದರಿ ಘಟನೆ ನಡೆದಾಗ ರಾತ್ರಿ 10-45 ಗಂಟೆ ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 10 ಫ್ರಾಸಾ-1 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಘಟನೆಯ ಕುರಿತು ತಾನು ಕೆಎಂಸಿ ಆಸ್ಪತ್ರೆಯಲ್ಲಿ ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ. ದೂರು ಸಲ್ಲಿಸಿದ ನಂತರ ತಾನು ಪೊಲೀಸರಿಗೆ ಮೂರು ಬಾರಿ ತನ್ನ ಮುಂದುವರಿದ ಹೇಳಿಕೆ ಮತ್ತು ನ್ಯಾಯಾಲಯದಲ್ಲಿ ನ್ಯಾಯಾಧೀಶರಮುಂದೆ ಅ.ಪ್ರ. ಸಂಹಿತೆ ಕಲಂ 164 ರ ಅಡಿಯಲ್ಲಿ ತನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ: 11 ಫ್ರಾಸಾ-1 ರಿಂದ 3 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಘಟನೆ ನಡೆದ ನಂತರ ದಿನಾಂಕ 19-02-2019 ರಂದು ಹಿರಿಯಡ್ಕ ಜೈಲಿನಲ್ಲಿ ತಹಶೀಲ್ದಾರ್ ಆರೋಪಿತರ ಗುರುತು ಹಚ್ಚುವ ಕವಾಯತು ನಡೆಸಿದ್ದು ಅಲ್ಲಿ ತಾನು ನೀವು 5, 6, 7 ಮತ್ತು 8 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 12 ಫ್ರಾಸಾ-2 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ 4 ನೇ ಆರೋಪಿ ತನ್ನ ಎಡಭುಜಕ್ಕೆ ರಾಡ್ ನಿಂದ, 8 ನೇ ಆರೋಪಿ ರಾಡ್ ನಿಂದ ತನ್ನ ತಲೆಗೆ ಹೊಡೆದನು. ಚಾಸಾ-1 ಈತನನ್ನು ಎಳೆದಾಡಿದರು, 1 ನೇ ಆರೋಪಿ ಚಾಸಾ-1 ಈತನಿಗೆ ತಲವಾರು ಬೀಸಿದಾಗ ಆತ ತಪ್ಪಿಸಿಕೊಂಡನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 13 ಫ್ರಾಸಾ-2 ಮತ್ತು 3 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಘಟನೆಯ ಕುರಿತು ಪೊಲೀಸರು ತನ್ನನ್ನು ವಿಚಾರಣೆ ಮಾಡಿರುತ್ತಾರೆ ಹಾಗೂ ನ್ಯಾಯಾಧೀಶರ ಮುಂದೆ ಅ.ಪ್ರ.ಸಂಹಿತೆ ಕಲಂ 164 ಅಡಿಯಲ್ಲಿ ತನ್ನ ಹೇಳಿಕೆಯನ್ನು ನೀಡಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 14 ಫ್ರಾಸಾ-4 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 25-01-2019 ರಂದು ಪಂಚಾಯಿತಿಯ ಅಧ್ಯಕ್ಷ, ಪಿಡಿಓ ಟಾಯ್ಲೆಟ್ ಪಿಟ್ ನ ಸ್ಥಳ ನೋಡಲು ಬಂದಿದ್ದರು, ಆ ಸಮಯದಲ್ಲಿ ನೀವು 1,5 ಮತ್ತು 6 ನೇ

ಆರೋಪಿತರು ಇದ್ದು ಅವರ ಕೈಗಳಲ್ಲಿ ರಾಡ್ ಇತ್ತು, 1 ನೇ ಆರೋಪಿ ತನ್ನ ಗಂಡನಿಗೆ ಟಾಯ್ಲೆಟ್ ಪಿಟ್ ಕೆಲಸ ಮಾಡಲು ಬಿಡದಿದ್ದರೆ ಅದೇ ಹೊಂಡದಲ್ಲಿ ಹಾಕಿ ಮುಚ್ಚುತ್ತೇನೆಂದು ಹೇಳಿರುತ್ತಾನೆ ಹಾಗೂ ತನ್ನ ಗಂಡನನ್ನು ಹೊಡೆದರೆ ಭರತ್ ಮತ್ತು ಯತೀಶ್ ಬರುತ್ತಾರೆ ಅವರನ್ನೂ ಹೊಡೆದು ಹಾಕಬಹುದು ಎಂದು ಹೇಳಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 15 ಫ್ರಾಸಾ-4 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಭರತ್‌ನಿಗೆ ನೀವು ಆರೋಪಿತರು ಹೊಡೆಯುವುದನ್ನು ತಪ್ಪಿಸಲು ಯತೀಶ್ ಹೋದಾಗ ನೀವು 1 ಮತ್ತು 3 ನೇ ಆರೋಪಿತರು ತಲವಾರಿನಿಂದ ಯತೀಶನ ತಲೆಗೆ, 2 ನೇ ಆರೋಪಿ ತಲವಾರಿನಿಂದ ಆತನ ಕೈಗೆ ಮತ್ತು 4 ನೇ ಆರೋಪಿ ರಾಡ್ ನಿಂದ ಆತನ ತಲೆಗೆ ಹೊಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 16 ಫ್ರಾಸಾ-4 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನೀವು 5 ಮತ್ತು 6 ನೇ ಆರೋಪಿತರು ರಾಡ್ ಬೀಸಿದ್ದು ಇದರಿಂದ ಚಾಸಾ-8 ಶಶಿ ಈತನಿಗೆ ತಲೆಗೆ, ಚಾಸಾ-9 ಸಚಿನ್ ಈತನಿಗೆ ಕಾಲಿಗೆ ಪೆಟ್ಟಾಗಿರುತ್ತದೆ. 1 ನೇ ಆರೋಪಿ ತನ್ನ ಗಂಡ ಚಾಸಾ-1 ಈತನಿಗೆ ತಲವಾರು ಬೀಸಲು ಬಂದಾಗ ತನ್ನ ಗಂಡ ಕೆಳಗಡೆ ಬಿದ್ದರು, ತಾನು ಅವರನ್ನು ಮನೆಯ ಒಳಗಡೆ ಕರೆದುಕೊಂಡು ಹೋದೆನು. 3 ನೇ ಆರೋಪಿ ನೀವು ಊರು ಬಿಟ್ಟು ಹೋಗಿ ಇಲ್ಲದಿದ್ದರೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 17 ಫ್ರಾಸಾ-4 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಸಿಟ್‌ಔಟ್ ನಲ್ಲಿ ಮೃತ ಯತೀಶನ ದೇಹ, ಭರತ್ ನ ಬಾಡಿ ಅಂಗಳದ ತುಳಸಿಕಟ್ಟೆ ಹತ್ತಿರ ಬಿದ್ದಿತ್ತು. ತನ್ನ ಗಂಡ ಮತ್ತು ಉಮೇಶ ಸೇರಿ ಅಟೋದಲ್ಲಿ ಹಾಕಿಕೊಂಡು ಅಸ್ಪತ್ರೆಗೆ ಹೋದರು, ನಂತರ ಯತೀಶ ಮತ್ತು ಭರತ್ ಮೃತಪಟ್ಟಿರುತ್ತಾರೆ ಎಂದು ತಿಳಿಯಿತು. ದಿಃ 27-01-2019 ರಂದು ಬೆಳಿಗ್ಗೆ 3-30 ಗಂಟೆಗೆ ಪೊಲೀಸರು ಸ್ಥಳಕ್ಕೆ ಬಂದಿದ್ದು ತಾನು ಘಟನೆಯ ಬಗ್ಗೆ ತಿಳಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ**ಃಸುಳ್ಳು

ಪ್ರಶ್ನೆ: 18 ಫ್ರಾಸಾ-4, ಫ್ರಾಸಾ-5 ಪ್ರಶಾಂತ ಪೂಜಾರಿ ಹಾಗೂ ಫ್ರಾಸಾ-101 ಮಂಜುನಾಥ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 27.01.2019 ರಂದು ಬೆಳಿಗ್ಗೆ 3-30 ಗಂಟೆಗೆ ಪಂಚರ ಸಮಕ್ಷಮ ಪೊಲೀಸರು ಘಟನಾ ಸ್ಥಳದ ಮಹಜರು ಮಾಡಿ, ಸ್ಥಳದಲ್ಲಿದ್ದ ಅಂದರೆ ಸಿಟ್ ಔಟ್ ಮತ್ತು ಅಂಗಳದಲ್ಲಿ ಬಿದ್ದ ರಕ್ತದ ಮಾದರಿಗಳನ್ನು, ಒಂದು ವುಡ್ ಲ್ಯಾಂಡ್ ಶೂ, ಇಂಟರ್ ಲಾಕ್ ನ ಪುಡಿ, ಒಂದು ಜೊತೆ ಹವಾಯಿ ಚಪ್ಪಲಿ, ಬಿಯರ್ ಬಾಟಲಿಯ ಬಾಕ್ಸ್, ಒಂದು ಅಪಾಚಿ ಬೈಕ್ ಮತ್ತು ಬೈಕ್ ಅನ್ನು ಕೈನಕಾಶೆ ತಯಾರಿಸಿ ವಶಪಡಿಸಿಕೊಂಡರು ಹಾಗೂ ಸದರಿ ಮಹಜರು ಮತ್ತು ಕೈನಕಾಶೆಗೆ ಸಹಿ ಮಾಡಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 19 ಫ್ರಾಸಾ-101 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಘಟನಾ ಸ್ಥಳದಲ್ಲಿದ್ದ ಟಿವಿಎಸ್ ಅಪಾಚಿ ಮೋಟಾರ್ ಸೈಕಲ್ ನಂಃ ಕೆಎ-20-ಇಎಂ-8798 ಮತ್ತು ಕೆಎ-19-ಸಿ-3118 ಅಟೋ ರಿಕ್ಷಾವನ್ನು ಅದೇ ಪಂಚನಾಮೆ ಅಡಿಯಲ್ಲಿ ಪಂಚರ ಎದುರಿಗೆ ಮಹಜರು ಮಾಡಿ ಅಮಾನತುಪಡಿಸಿಕೊಂಡೆನು ಹಾಗೂ ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು

ತಯಾರಿಸಿ, ಪ್ರತ್ಯಕ್ಷ ಸಾಕ್ಷಿದಾರರಾದ ಸುಜಾತ ಮತ್ತು ಪಾರ್ವತಿ ಇವರ ಹೇಳಿಕೆಯನ್ನು ದಾಖಲಿಸಿಕೊಂಡೆನು. ನಂತರ ಅಮಾನತುಪಡಿಸಿಕೊಂಡ ಮುದ್ದೆಮಾಲುಗಳೊಂದಿಗೆ ಕೋಟ ಠಾಣೆಗೆ ಬಂದು ಮುದ್ದೆಮಾಲುಗಳನ್ನು ಸ್ವತ್ತು ಪಟ್ಟಿಗೆ ಅಳವಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 20 ಫ್ರಾಸಾ-6 ಶಿವರಾಮ್, ಫ್ರಾಸಾ-7 ರಾಜರಾಮ ಶೆಟ್ಟಿ ಫ್ರಾಸಾ-12 ಜಗದೀಶ್ವರ ರಾವ್ ಹಾಗೂ ಫ್ರಾಸಾ-34 ಸುರೇಶ್, ಪಿಡಿಓ ಇವರು ತಾವು ನೀಡಿದ ಸಾಕ್ಷ್ಯದಲ್ಲಿ ದಿನಾಂಕ 21.01.2019 ರಂದು ಚಾಸಾ-1 ಪಂಚಾಯಿತಿಗೆ ಅರ್ಜಿ ಕೊಟ್ಟು 1 ನೇ ಆರೋಪಿ ಟಾಯ್ಲೆಟ್ ಪಿಟ್ ತೆಗೆಯುತ್ತಿದ್ದ ಸ್ಥಳವನ್ನು ಪರಿಶೀಲನೆ ಮಾಡುವಂತೆ ಕೇಳಿದ್ದು ಅದರಂತೆ ದಿನಾಂಕ 25.01.2019 ರಂದು 4.00 ಘಂಟೆಗೆ ತಾವೆಲ್ಲರೂ ಹೋಗಿ ಸ್ಥಳ ಪರಿಶೀಲನೆ ಮಾಡಿದಾಗ 1 ನೇ ಆರೋಪಿ ಚಾಸಾ-1 ಈತನ ಬಾವಿಯ ಪಕ್ಕದಲ್ಲಿ ಟಾಯ್ಲೆಟ್ ಪಿಟ್ ತೆಗೆಯುವುದು ಕಂಡು ಬಂದಿತು, ಅಳತೆ ಮಾಡಿದಾಗ ಭಾವಿ ಮತ್ತು ಪಿಟ್ಟಿನ ನಡುವೆ 11.5 ಅಡಿ ಅಂತರವಿತ್ತು. ಇದರಿಂದ ಭಾವಿಯ ನೀರು ಕಲುಷಿತವಾಗುವ ಸಂಭವ ಇರುತ್ತದೆ. ಆದ್ದರಿಂದ ತಾವು ಅರೋಗ್ಯ ಇಲಾಖೆಯಿಂದ ವರದಿ ಪಡೆದುಕೊಂಡು ಕೆಲಸ ಮುಂದುವರಿಸಲು ತಿಳಿಸುತ್ತೇವೆ ಎಂದು ಹೇಳಿರುತ್ತೇವೆ. ಆ ಸಮಯದಲ್ಲಿ ಚಾಸಾ-1 ಮತ್ತು 1 ನೇ ಆರೋಪಿಯ ನಡುವೆ ಚರ್ಚೆ ಆಗುತ್ತಿತ್ತು. ಇದಾದ ನಂತರ ತಾವು ಸ್ಥಳ ಪರಿಶೀಲನೆಗೆ ಹೋದ ಜಾಗದ ಹತ್ತಿರ ಜೋಡಿ ಕೊಲೆಯಾಗಿದೆ ಎಂದು ತಿಳಿದುಬಂದಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 21 ಫ್ರಾಸಾ-8 ಕಿಶನ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ 9 ನೇ ಆರೋಪಿ 2018-19 ರಲ್ಲಿ ಅಧ್ಯಕ್ಷನಾಗಿದ್ದ ಹಿಂದೂ ಜಾಗರಣ ವೇದಿಕೆಯಲ್ಲಿ ಚಾಸಾ-1, 5 ರಿಂದ 10, ಮೃತ ಭರತ್ ಮತ್ತು ಯತೀಶ್ ಇದ್ದೆವು. ಆ ಸಮಯದಲ್ಲಿ

ನೀನು 9 ನೇ ಆರೋಪಿ ಅವರಿಂದ ಬೇರೆಯವರನ್ನು ಹೊಡೆಸುವುದು, ಕೆಟ್ಟ ಕೆಲಸ ಮಾಡಿಸುವುದು, ಬಡ್ಡಿಗೆ ನೀಡಿದ ಹಣವನ್ನು ವಸೂಲಿ ಮಾಡಿಸುತ್ತಿದ್ದನು. ನಂತರ ಬೇರೆಯವರು ನಿನ್ನ ಜೊತೆ ಬಂದ ನಂತರ ಅವರನ್ನು ನಿರ್ಲಕ್ಷ್ಯ ಮಾಡಿದ್ದರಿಂದ ನಿನ್ನಿಂದ ದೂರ ಆಗಿದ್ದರಿಂದ ಅವರ ಮೇಲೆ ದ್ವೇಷ ಹೆಚ್ಚಾಗಿತ್ತು. ನಂತರ ನಾವೆಲ್ಲರೂ ಸೇರಿ ಭಗತ್ ಸಿಂಗ್ ಕ್ರಾಂತಿಕಾರಿ ಬಳಗ ಮತ್ತು ಕಲ್ಮಾಡಿ ಯುವಕ ಸಂಘವನ್ನು ಪ್ರಾರಂಭಿಸಿದೆವು ಅದಕ್ಕೆ ಮೃತ ಭರತ್ ಅಧ್ಯಕ್ಷನಾಗಿದ್ದನು. ತಾವು ಸಂಕಲನ ಎನ್ನುವ ಕಾರ್ಯಕ್ರಮವನ್ನು ಮಾಡಿರುತ್ತೇವೆ. ಅದೇ ಸಮಯದಲ್ಲಿ 9 ನೇ ಆರೋಪಿ ನಿನಾದ ಎನ್ನುವ ಕಾರ್ಯಕ್ರಮ ಮಾಡಿದ್ದು, ತಾವು ನಡೆಸಿದ ಕಾರ್ಯಕ್ರಮ ಯಶಸ್ವಿಯಾಗಿದ್ದು ಇದರಿಂದಾಗಿ ನೀನು 9 ನೇ ಆರೋಪಿಗೆ ಅವರ ಮೇಲೆ ಹೆಚ್ಚಿನ ದ್ವೇಷ ಇತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 22 ಪ್ರಾಸಾ -8 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ 2018 ರಲ್ಲಿ ಶರತ್ ಗಾಣಿಗನ ಮನೆಯಲ್ಲಿ ಮೆಹಂದಿ ಕಾರ್ಯಕ್ರಮಕ್ಕೆ ನಾವೆಲ್ಲಾ ಹೋಗಿದ್ದು ಆ ಸಮಯದಲ್ಲಿ ರೋಹಿತ್ ಮತ್ತು ಬಾರಿಕೇರಿ ಯುವಕ ಮಂಡಲದ ಸದಸ್ಯರ ನಡುವೆ ಗಲಾಟೆ ಆಗಿದ್ದು ಭರತ್ ಗಲಾಟೆ ಮಾಡಬೇಡಿ ಎಂದು ಹೇಳಿದನು, ನಂತರ ಭರತ್, ಯತೀಶ, ಶರತ್, ಲೋಹಿತ್ ಇತರರು ನಡೆದುಕೊಂಡು ಕಾರಂತರ ಭವನ ಹತ್ತಿರ ಹೋಗುತ್ತಿದ್ದಾಗ 9 ನೇ ಅರೋಪಿ ಅಲ್ಲಿಗೆ ಬಂದು ಕೆಟ್ಟ ಕೆಟ್ಟ ಭಾಷೆಯಲ್ಲಿ ಬೈದು ಹೊಡೆಯಲು ಬಂದಾಗ ಮೃತ ಭರತ್ ಮಧ್ಯೆ ಬಂದು ಹೊಡೆಯುವುದನ್ನು ತಪ್ಪಿಸಿರುತ್ತಾನೆ, ಆಗ 9 ನೇ ಆರೋಪಿ ಮೃತ ಭರತ್ ಗೆ ನಿನ್ನಿಂದಲೇ ಇದು ಆಗುತ್ತಿರುವುದು ನಿನ್ನನ್ನು ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತೀಯಾ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 23 ಫ್ರಾಸಾ -9 ಪಾರ್ವತಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮೃತ ಭರತ್ ತನ್ನ ಮಗ, ಮೃತ ಯತೀಶ ತನ್ನ ಮಗನ ಸ್ನೇಹಿತ. ನೀನು 9 ನೇ ಆರೋಪಿ ಬಡ್ಡಿ ವ್ಯವಹಾರ ಮಾಡುತ್ತಿದ್ದು ಹಣ ವಸೂಲಿಗಾಗಿ ಆಕೆಯ ಮಗ ಭರತ್ ಹಾಗೂ ಆತನ ಸ್ನೇಹಿತರನ್ನು ಕಳುಹಿಸುತ್ತಿದ್ದೆ. ಕೋಟ ಶ್ರೀನಿವಾಸ ಪೂಜಾರಿಯವರ ಕಾರಿಗೆ ಕಲ್ಲು ಹೊಡೆದ ಕೇಸ್ ನಲ್ಲಿ ಭರತ್ ನನ್ನು ಸಿಕ್ಕಿಸಿ ಹಾಕಿದ್ದು ಇದರಿಂದಾಗಿ ಭರತ್ ಮತ್ತು ಆತನ ಸ್ನೇಹಿತರು ನೀನು 9 ನೇ ಆರೋಪಿಯ ಸಂಪರ್ಕದಿಂದ ಹೊರಬಂದು ಬೇರೆ ಸಂಘ ಮಾಡಿ ಕಾರ್ಯಕ್ರಮ ಮಾಡುತ್ತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 24 ಫ್ರಾಸಾ -9 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಭರತ್ ನ ಕೊಲೆಯಾಗುವುದಕ್ಕಿಂತ ಒಂದು ವರ್ಷ ಮೊದಲು ಕೋಟದಲ್ಲಿ ತಮ್ಮ ಮನೆಯ ಸಮೀಪ ಮೆಹಂದಿ ಕಾರ್ಯಕ್ರಮ ನಡೆದಾಗ ತನ್ನ ತಂಗಿಯ ಮಗ ಚಾಸಾ-1 ಲೋಹಿತ್ ಮತ್ತು ನೀನು 9 ನೇ ಆರೋಪಿ ಮತ್ತು ಪ್ರದೀಪ ಕಾಂಚನ್ ಇವರ ನಡುವೆ ಗಲಾಟೆ ಆಗಿರುತ್ತದೆ, ಭರತ್ ಗಲಾಟೆ ಮಾಡುವುದನ್ನು ತಪ್ಪಿಸಿದ್ದನು. ಕಾರಂತರ ಸಭಾಭವನದ ಹತ್ತಿರ ನೀನು 9 ನೇ ಆರೋಪಿ ಮತ್ತೆ ಗಲಾಟೆ ಮಾಡಿ ತನ್ನ ಮಗ ಭರತ್ ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದನು ಎಂದು ಭರತ್ ತನ್ನ ಮುಂದೆ ಹೇಳಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 25 ಫ್ರಾಸಾ-18, 19 ಹಾಗೂ ಫ್ರಾಸಾ-101 ಮಂಜುನಾಥ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 27.01.2019 ರಂದು ಕೆಎಂಸಿ ಆಸ್ಪತ್ರೆಯ ಶವಾಗಾರದಲ್ಲಿದ್ದ ಮೃತ ಭರತ್ ಈತನ ಶವದ ಪಂಚನಾಮೆ ಬೆಳಿಗ್ಗೆ 8 ಗಂಟೆಯಿಂದ 11 ಗಂಟೆಯವರೆಗೆ ಮಾಡಿದ್ದಾಗಿ, ಶವವನ್ನು ನೋಡಿದಾಗ

ದೇಹದ ಮೇಲೆ ಆಯುಧಗಳಿಂದ ಹಲ್ಲೆ ಮಾಡಿದ ಗುರುತುಗಳು ಇದ್ದವು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 26 ಫ್ರಾಸಾ-25 ರಾಜಾ ಸಾಬ್, ಗ್ರಾಮ ಲೆಕ್ಕಾಧಿಕಾರಿ, ಫ್ರಾಸಾ-26 ಹರೀಶ್ ನಾಯ್ಕ ಹಾಗೂ ಫ್ರಾಸಾ-103 ಮಹೇಶ್ ಪ್ರಸಾದ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿಃ 08-02-2019 ರಂದು ಪೊಲೀಸ್ ಜೀಪ್ ನಲ್ಲಿ ತಾವೆಲ್ಲಾ ಸೇರಿ ಪೇತ್ರಿ ಜಂಕ್ಷನ್ ಗೆ ಹೋಗಿ ಅಲ್ಲಿಂದ 1 ಕಿ.ಮಿ ದೂರದಲ್ಲಿರುವ ಹಾಡಿಯಲ್ಲಿ ಜೀಪ್ ನಿಲ್ಲಿಸಿ, ಅಲ್ಲಿಂದ 40 ಅಡಿ ಅಂತರದಲ್ಲಿದ್ದ ಸಿಮೆಂಟ್ ಶೀಟ್ ನ ಮನೆಯ ಬಾಗಿಲನ್ನು ಸಿಪಿಐ ಬಡಿದಾಗ ಯಾರು ಎಂದು ಒಳಗಡೆಯಿಂದ ಕೇಳಿದಾಗ ರೊಟ್ಟಿ ಆರ್ಡರ್ ಗೆ ಬಂದಿರುತ್ತೇವೆ ಎಂದು ಹೇಳಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 27 ಫ್ರಾಸಾ-25, ಫ್ರಾಸಾ-26 ಹಾಗೂ ಫ್ರಾಸಾ-103 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಒಳಗಿನಿಂದ ಬಾಗಿಲು ತೆಗೆದ ವ್ಯಕ್ತಿ ನೀನು 13 ನೇ ಆರೋಪಿಯಾಗಿದ್ದು, ನಿನ್ನನ್ನು ವಶಕ್ಕೆ ಪಡೆದು ಒಳಗೆ ಪ್ರವೇಶಿಸಿದಾಗ ಅಲ್ಲಿ ನೀನು 7 ನೇ ಆರೋಪಿ ಮತ್ತು 12 ನೇ ಆರೋಪಿ ಹಾಜರಿದ್ದು ನೀವು ಓಡಲು ಯತ್ನಿಸಿದಾಗ ನಿಮ್ಮನ್ನು ಹಿಡಿದುಕೊಂಡರು ಹಾಗೂ ಅದೇ ಸಮಯದಲ್ಲಿ ಕೊಲೆ ಮಾಡಿದವರನ್ನು ಕರೆದುಕೊಂಡು ಹೋಗಲು ಉಪಯೋಗಿಸಿದ್ದ ಕಾರು, ಮೊಬೈಲ್ ಹಾಗೂ 7 ನೇ ಆರೋಪಿ ಕೃತ್ಯ ನಡೆದ ಸಮಯ ಧರಿಸಿದ್ದ ಬಟ್ಟೆಗಳನ್ನು ಮನೆಯ ಹಿಂದೆ ಪ್ಲಾಸ್ಟಿಕ್ ತೊಟ್ಟೆಯಲ್ಲಿ ಇಟ್ಟಿರುವುದಾಗಿ ಹೇಳಿ ಹಾಜರುಪಡಿಸಿದ್ದು ಅದನ್ನು ಸಹ ಮಹಜರು ಮಾಡಿ ಅಮಾನತುಪಡಿಸಿಕೊಂಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 28 ಫ್ರಾಸಾ-25, ಫ್ರಾಸಾ-26 ಮತ್ತು ಫ್ರಾಸಾ-103 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ನೀನು 7 ನೇ ಆರೋಪಿ ಮತ್ತು ನೀನು 4 ನೇ ಆರೋಪಿ ಕೃತ್ಯದ ಸಮಯದಲ್ಲಿ ಉಪಯೋಗಿಸಿದ 2 ರಾಡ್ ಮತ್ತು ಮೋಟಾರ್ ಸೈಕಲ್ ಅನ್ನು ಹಾಜರುಪಡಿಸುವುದಾಗಿ ಹೇಳಿ ತಮ್ಮನ್ನು ಹೆಬ್ರಿಯ ಕಾನ್ಬೆಟ್ಟುವಿಗೆ ಕರೆದುಕೊಂಡು ಹೋಗಿ ಅಲ್ಲಿ ಎರಡು ರಾಡ್ ಮತ್ತು ಬೈಕ್ ಅನ್ನು ಹಾಜರುಪಡಿಸಿದ್ದು ಅದನ್ನು ಮಹಜರು ಮಾಡಿ ಫೋಟೋ ತೆಗೆದು ಅಮಾನತು ಪಡಿಸಿಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

**ಪ್ರಶ್ನೆ: 29 ಫ್ರಾಸಾ-30 ರವಿಕಿರಣ್, ಸರ್ಕಾರಿ ನೌಕರ ಹಾಗೂ ಫ್ರಾಸಾ-101 ಮಂಜುನಾಥ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿ: 10.02.2019 ರಂದು 10 ಮತ್ತು 11 ನೇ ಆರೋಪಿಗಳಾದ ನಿಮ್ಮನ್ನು ವಶಕ್ಕೆ ತೆಗೆದುಕೊಂಡು ನಿಮ್ಮಿಂದ ಮುದ್ದೆ ಮಾಲು 36 ರಲ್ಲಿರುವ ಮೊಬೈಲ್ ಫೋನುಗಳನ್ನು ವಶಪಡಿಸಿಕೊಂಡ ಬಗ್ಗೆ ನಿಪಿ 63 ರಲ್ಲಿರುವ ಪಂಚನಾಮೆ ತಯಾರಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?**

**ಉತ್ತರ**:ಸುಳ್ಳು

ಪ್ರಶ್ನೆ: 30 **ಫ್ರಾಸಾ-30 ಮತ್ತು ಫ್ರಾಸಾ-101 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ 11 ನೇ ಆರೋಪಿಯಾದ ನೀವು ಉಡುಪಿಯ ಸಂತೆಕಟ್ಟೆಯ ಮಿಲಾಗ್ರಿಸ್ ಪ್ರದೇಶದ ಹತ್ತಿರ ಒಂದು ಇಸ್ತ್ರೀ ಅಂಗಡಿ ಹತ್ತಿರ ತಮ್ಮೆಲ್ಲರನ್ನೂ ಕರೆದುಕೊಂಡು ಹೋಗಿ ಮುದ್ದೆ ಮಾಲು 38 ರಿಂದ 44 ರಲ್ಲಿರುವ 4 ಮೊಬೈಲ ಹಾಗೂ 2 ಪರ್ಸ್ ಇದ್ದ ಚೀಲವನ್ನು ಹಾಜರುಪಡಿಸಿದ್ದಾಗಿ, ಈ ಬಗ್ಗೆ ನಿಪಿ64 ರಂತೆ ಪಂಚನಾಮೆ ತಯಾರಿಸಿದ್ದಾಗಿ** ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ**:ಸುಳ್ಳು

ಪ್ರಶ್ನೆ: 31 **ಫ್ರಾಸಾ-30 ಹಾಗೂ ಫ್ರಾಸಾ-101 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ 11 ನೇ ಆರೋಪಿಯಾದ ನೀವು ತಮ್ಮೆಲ್ಲರನ್ನು ಉಡುಪಿ ಸಶಸ್ತ್ರ ಪೋಲೀಸ್ ಪಡೆ ಕಚೇರಿ ಕಟ್ಟಡದ ಪಕ್ಕ ಇರುವ ಮೈದಾನಕ್ಕೆ ಕರೆದುಕೊಂಡು ಹೋಗಿ ಮುದ್ದೆ ಮಾಲು 45 ಫೋಟೋದಲ್ಲಿರುವ ಕಾರನ್ನು ತೋರಿಸಿದ್ದಾಗಿ ಆ ಬಗ್ಗೆ ನಿಪಿ 65 ಪಂಚನಾಮೆಯನ್ನು ತಯಾರಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?**

**ಉತ್ತರ:**ಸುಳ್ಳು

ಪ್ರಶ್ನೆ: 32 ಫ್ರಾಸಾ-34 ಸುರೇಶ್, ಪಿಡಿಓ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತಾನು ಕೋಟ ಪಂಚಾಯಿತಿಯಲ್ಲಿ ಕರ್ತವ್ಯ ನಿವರ್ಹಿಸುತ್ತಿದ್ದಾಗ ಜನವರಿ 2019 ರಲ್ಲಿ ಚಾಸಾ-1 ಲೋಹಿತ್ ಈತನು ಆತನ ಬಾವಿ ಸಮೀಪದಲ್ಲಿ ನೀನು 1 ನೇ ಆರೋಪಿ ಲ್ಯಾಟ್ರಿನ್ ಪಿಟ್ ತೆಗೆಯುತಿದ್ದಾರೆಂದು ದೂರು ಕೊಟ್ಟ ಮೇರೆಗೆ ತಾನು, ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷರು ಮತ್ತು ಸದಸ್ಯರು ದಿ: 25-01-2019 ರಂದು 4 ಗಂಟೆಗೆ ಸ್ಥಳ ಪರಿಶೀಲನೆ ಹೋದಾಗ ಅಲ್ಲಿ ಚಾಸಾ-1, ನೀನು 1 ನೇ ಆರೋಪಿ ಮತ್ತು ಇತರರು ಇದ್ದರು. ಬಾವಿಯ ಪಕ್ಕದಲ್ಲಿ ಟಾಯ್ಲೆಟ್ ಪಿಟ್ ಬರುತ್ತಿರುವುದರಿಂದ ಆರೋಗ್ಯ ಇಲಾಖೆಗೆ ತಿಳಿಸಿ ಅವರಿಂದ ಅಭಿಪ್ರಾಯ ಪಡೆದು ನಿರ್ಣಯಿಸುತ್ತೇವೆಂದು ಹೇಳಿ ಸ್ಥಳ ಪರಿಶೀಲನೆ ಮಾಡಿ ಬಂದಿರುತ್ತೇವೆ. ಆ ಸಮಯದಲ್ಲಿ ಅಲ್ಲಿ ವಾದ-ವಿವಾದ, ಚರ್ಚೆ ನಡೆಯುತ್ತಿತ್ತು. ಮರುದಿನ ಪ್ರತಿಕೆಯಲ್ಲಿ ಅಲ್ಲಿ ಕೊಲೆಯಾಗಿದೆ ಎಂದು ಗೊತ್ತಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 33 ಫ್ರಾಸಾ-35 ಚೆಲುವರಾಜ್ ಗ್ರಾಮ ಲೆಕ್ಕಾಧಿಕಾರಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತಮ್ಮ ಮೇಲಾಧಿಕಾರಿಗಳ ಆದೇಶದಂತೆ ಈ ಪ್ರಕರಣದಲ್ಲಿ ಪಂಚರಾಗಿ ಸಹಕರಿಸಲು ದಿ: 08-02-2019 ರಂದು ಬ್ರಹ್ಮಾವರದ ವೃತ್ತ

ನಿರೀಕ್ಷಕರ ಕಚೇರಿಗೆ ಹೋದೆನು ಆ ಸಮಯದಲ್ಲಿ ಅಲ್ಲಿ ಡಿ.ವೈ.ಎಸ್ಪಿ ಇವರ ವಶದಲ್ಲಿ ನೀವು 1 ಮತ್ತು 8 ನೇ ಆರೋಪಿತರು ಇದ್ದೀರಿ. ನೀವು 1 ಮತ್ತು 8 ನೇ ಆರೋಪಿತರು ನೀಡಿದ ಮಾಹಿತಿಯಂತೆ ರಾಡ್‌ಗಳನ್ನು ಅಮಾನತುಪಡಿಸಿಕೊಳ್ಳಲು ನೀವು ಹೇಳಿದಂತೆ ಮಣೂರು ಗ್ರಾಮದ ಕಡೆಗೆ ಹೋಗುವ ಇಂದ್ರಪ್ರಸ್ಥ ಹೋಟೆಲ್ ನ ಹತ್ತಿರ ವಾಹನ ನಿಲ್ಲಿಸಲು ಹೇಳಿ ಅಲ್ಲಿಂದ ನೀನು 8 ನೇ ಆರೋಪಿ ಸ್ವಲ್ಪ ಮುಂದೆ ಹೋಗಿ ಅಲ್ಲಿ ಬೆಳೆದಿದ್ದ ಚಿಕ್ಕ ಗಿಡದ ಹತ್ತಿರ ಒಂದು ರಾಡ್ ನ್ನು ಮತ್ತು ನೀನು 1 ನೇ ಆರೋಪಿ ಒಂದು ಲಾಂಗ್ ತೆಗೆದು ಹಾಜರುಪಡಿಸಿದ್ದು ಅದನ್ನು ಪೊಲೀಸರು ಮಹಜರು ಮಾಡಿ ವಶಪಡಿಸಿಕೊಂಡರು ಹಾಗೂ ಸದರಿ ಮಹಜರಿಗೆ ತಾನು ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ 34 ಫಿರ್ಯಾಸಾ-34 ಸುರೇಶ್ ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತಮ್ಮ ಮೇಲಾಧಿಕಾರಿಗಳ ಆದೇಶದಂತೆ ಈ ಪ್ರಕರಣದಲ್ಲಿ ಪಂಚರಾಗಿ ಸಹಕರಿಸಲು ದಿಃ 09-02-2019 ರಂದು ಬ್ರಹ್ಮಾವರದ ವೃತ್ತ ನಿರೀಕ್ಷಕರ ಕಚೇರಿಗೆ ಹೋದೆನು ಆ ಸಮಯದಲ್ಲಿ ಅಲ್ಲಿ ಸಹ ಪಂಚ ಫಿರ್ಯಾಸಾ-35 ಚೆಲುವರಾಜ್, ಡಿ.ವೈ.ಎಸ್ಪಿ, ಸಿಬ್ಬಂದಿಗಳು ಮತ್ತು ನೀನು 1 ನೇ ಆರೋಪಿ ಇದ್ದನು, ಆತ ತಮ್ಮನ್ನು ಚಾಸಾ-1 ಲೋಹಿತ್ ಪೂಜಾರಿ ಈತನ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಗಲಾಟೆಯಾದ ಸ್ಥಳವನ್ನು ತೋರಿಸಿದ್ದು, ಅಲ್ಲಿಂದ 300 ಮೀ ಅಂತರದಲ್ಲಿದ್ದ ಟಾಯ್ಲೆಟ್ ಪಿಟ್ ಹತ್ತಿರ ಕರೆದುಕೊಂಡು ಹೋದನು. ಪೊಲೀಸರು ಸದರಿ ಸ್ಥಳದಲ್ಲಿ ಮಹಜರು ಮಾಡಿ ತಮ್ಮ ಸಹಿ ಪಡೆದುಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 35 ಫಿರ್ಯಾಸಾ-34 ಮತ್ತು ಫಿರ್ಯಾಸಾ-35 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಅಲ್ಲಿಂದ ತೆಕ್ಕಟ್ಟೆಯಿಂದ ವಕ್ವಾಡಿಗೆ ಕರೆದುಕೊಂಡು

ಹೋಗಿ ಅಲ್ಲಿ ಗೋಲ್ಡನ್ ಫ್ಯಾಕ್ಟರಿ ಹಿಂಬದಿಯಲ್ಲಿ ಇದ್ದ ಕೃತ್ಯಕ್ಕೆ ಬಳಸಿದ್ದ ಒಂದು ಕಪ್ಪು ಬಣ್ಣದ ಹಾಗೂ ಬಿಳಿ ಬಣ್ಣದ ಮೋಟಾರ್ ಸೈಕಲ್ ಗಳನ್ನು ನೀನು 1 ನೇ ಆರೋಪಿ ತೋರಿಸಿದ್ದು ಅವುಗಳನ್ನು ಪೊಲೀಸರು ಮಹಜರು ಮಾಡಿ ಪೋಟೋ ತೆಗೆದು ವಶಪಡಿಸಿಕೊಂಡರು ಹಾಗೂ ನಂತರ ಅಲ್ಲಿಂದ ಹೆಬ್ರಿ ತಾಲೂಕಿನ ಕುಚ್ಚೂರಿನಲ್ಲಿರುವ ಕೃಷ್ಣ ಮರಕಾಲ ಎನ್ನುವವರ ಮನೆಗೆ ಕರೆದುಕೊಂಡು ಅಲ್ಲಿ ನೀನು 1 ನೇ ಆರೋಪಿ ಇದ್ದ ಬಗ್ಗೆ ಹೇಳಿದನು ಹಾಗೂ ಕೃಷ್ಣ ಮರಕಾಲ ಇವರು ಒಂದು ಮೊಬೈಲ್ ಅನ್ನು ಹಾಜರುಪಡಿಸಿದ್ದು ಈ ಬಗ್ಗೆ ಪೊಲೀಸರು ಮಹಜರು ಮಾಡಿ ತಮ್ಮ ಸಹಿ ಪಡೆದು ಮೊಬೈಲ್ ಅನ್ನು ಅಮಾನತುಪಡಿಸಿಕೊಂಡು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 36 ಫ್ರಾಸಾ-34 ಮತ್ತು ಫ್ರಾಸಾ-35 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿಃ 10-02-2019 ರಂದು ಪುನಃ ವೃತ್ತ ನಿರೀಕ್ಷಕರ ಕಚೇರಿಗೆ ಹೋದಾಗ ಅಲ್ಲಿ ತನಿಖಾಧಿಕಾರಿ, ಪೊಲೀಸ್ ಸಿಬ್ಬಂದಿಗಳು, ನೀನು 1 ನೇ ಆರೋಪಿ ಇದ್ದೆ, ನೀನು 1 ನೇ ಆರೋಪಿ ಅಲ್ಲಿಂದ ನಮ್ಮನ್ನು ಚಿಕ್ಕಮಗಳೂರು ಜಿಲ್ಲೆ, ಎನ್.ಆರ್.ಪುರ ತಾಲೂಕಿನ ಬಲಂದೂರು ಗ್ರಾಮದ ಒಂದು ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಒಂದು ದಿನ ಉಳಿದಿರುವುದಾಗಿ ಹೇಳಿದೆ, ಸದರಿ ಮನೆಯಲ್ಲಿ ಈರ ಮರಕಾಲ ಎನ್ನುವವರು ಇದ್ದರು. ಪೊಲೀಸರು ಸದರಿ ಮನೆಯ ಪೋಟೋ ತೆಗೆದು ಮಹಜರು ಮಾಡಿ ತಮ್ಮ ಸಹಿ ಪಡೆದುಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 37 ಫ್ರಾಸಾ-34 ಮತ್ತು 35 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿಃ 12-02-2019 ರಂದು ಬ್ರಹ್ಮಾವರ ವೃತ್ತ ನಿರೀಕ್ಷಕರ ಕಚೇರಿಗೆ ಹೋದಾಗ ಅಲ್ಲಿ ತನಿಖಾಧಿಕಾರಿ, ಪೊಲೀಸ್ ಸಿಬ್ಬಂದಿ ಮತ್ತು ನೀನು 1 ನೇ

ಆರೋಪಿ ಇದ್ದೆ, ನೀನು 1 ನೇ ಆರೋಪಿ ತಮ್ಮನ್ನು ಮಡಿಕೇರಿಯ ಸೂರ್ಲಬ್ಬಿ ಗ್ರಾಮದ ಒಂದು ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಪ್ಲಾಸ್ಟಿಕ್ ಚೀಲದಲ್ಲಿದ್ದ ಒಂದು ಶರ್ಟ್ ಬರ್ಮುಡಾ, ಒಂದು ಮೊಬೈಲ್ ಫೋನ್ ಅನ್ನು ಹಾಜರುಪಡಿಸಿದ್ದು ಅದನ್ನು ಪೊಲೀಸರು ಮಹಜರು ಮಾಡಿ ಅಮಾನತುಪಡಿಸಿಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 38 ಫ್ರಾಸಾ-34 ಮತ್ತು ಫ್ರಾಸಾ-35 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿಃ 13-02-2019 ರಂದು ಬ್ರಹ್ಮಾವರ ವೃತ್ತ ನಿರೀಕ್ಷಕರ ಕಚೇರಿಗೆ ಹೋದಾಗ ಅಲ್ಲಿ ತನಿಖಾಧಿಕಾರಿ, ಪೊಲೀಸ್ ಸಿಬ್ಬಂದಿಗಳು ಮತ್ತು ನೀನು 1 ನೇ ಆರೋಪಿ ಇದ್ದೆ, ನೀನು 1 ನೇ ಆರೋಪಿ ತಮ್ಮನ್ನು ಅಲ್ಲಿಂದ ಹಾಲಾಡಿ ಮಾರ್ಗವಾಗಿ ಒಂದು ಹಳ್ಳಿಗೆ ಕರೆದುಕೊಂಡು ಅಲ್ಲಿ ಒಂದು ಮನೆಯನ್ನು ತೋರಿಸಿ ತಾವು ಅಲ್ಲಿ ವಾಸವಾಗಿದ್ದ ಬಗ್ಗೆ ಹೇಳಿದೆ, ಅದರಂತೆ ಪೊಲೀಸರು ಅಲ್ಲಿ ಮಹಜರು ಮಾಡಿ ತಮ್ಮ ಸಹಿ ಪಡೆದುಕೊಂಡರು. ನಂತರ ನೀನು 1 ನೇ ಆರೋಪಿ ತಮ್ಮನ್ನು ಚೇರ್ಕಾಡಿ ಗ್ರಾಮದ ರೊಟ್ಟಿ ಪ್ಯಾಕ್ಟರಿಗೆ ಕರೆದುಕೊಂಡು ಅಲ್ಲಿ ನೀವು ವಾಸವಾಗಿದ್ದ ಬಗ್ಗೆ ಹೇಳಿದಂತೆ ಪೊಲೀಸರು ಸದರಿ ಮನೆಯಲ್ಲಿ ಮಹಜರು ಮಾಡಿ ತಮ್ಮ ಸಹಿ ಪಡೆದುಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 39 ಫ್ರಾಸಾ-34 ಮತ್ತು 35 ಇವರು ತಮ್ಮ ಮುಂದುವರಿದ ಸಾಕ್ಷಿಯಲ್ಲಿ ದಿನಾಂಕ 15-02-2019 ರಂದು ನೀನು 9 ನೇ ಆರೋಪಿ ತಮ್ಮನ್ನು ಹಾಗೂ ಪೊಲೀಸರನ್ನು ಮಣೂರಿನಲ್ಲಿರುವ 1 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ತಾವು ಸಂಚು ರೂಪಿಸಿದ ಸ್ಥಳ ಎಂದು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪೊಲೀಸರು ಮಹಜರು ಮಾಡಿ ತಮ್ಮ

ಸಹಿ ಪಡೆದುಕೊಂಡರು. ನಂತರ ನೀನು 9 ನೇ ಆರೋಪಿ ತಮ್ಮನ್ನು ಮತ್ತು ಪೊಲೀಸರನ್ನು ಕೋಟದ ಬಾರಿಕೇರಿಯಲ್ಲಿಯ ನಿನ್ನ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ನೀನು 9 ನೇ ಅರೋಪಿ ಹಾಜರುಪಡಿಸಿದ ಮೊಬೈಲ್ ಅನ್ನು ಮಹಜರು ಮಾಡಿ ವಶಪಡಿಸಿಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 40 ಫ್ರಾಸಾ-36 ಗಿರೀಶ್ ಕುಮಾರ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ 09.02.2019 ರಂದು ತನ್ನ ಮೇಲಾಧಿಕಾರಿಗಳ ನಿರ್ದೇಶನದಂತೆ ಈ ಪ್ರಕರಣದಲ್ಲಿ ಪಂಚನಾಗಿ ಸಹಕರಿಸಲು ಬೆಳಿಗ್ಗೆ 11 ಗಂಟೆಗೆ ಬ್ರಹ್ಮಾವರ ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಸರ್ಕಲ್ ಇನ್ಸಪೆಕ್ಟರ್ ಮತ್ತು ಪೊಲೀಸ್ ಸಿಬ್ಬಂದಿಗಳು ಮತ್ತು ನೀವು 3, 5 ಮತ್ತು 6 ನೇ ಆರೋಪಿತರು ಇದ್ದರು. ನೀವು 3, 5 ಮತ್ತು 6 ನೇ ಆರೋಪಿತರು ಕೃತ್ಯಕ್ಕೆ ಬಳಸಿದ್ದ ಆಯುಧಗಳನ್ನು ಇಟ್ಟ ಸ್ಥಳಗಳನ್ನು ತೋರಿಸುವುದಾಗಿ ಹೇಳಿರುತ್ತೀರಿ. ಅದರಂತೆ 3 ನೇ ಆರೋಪಿ ತನ್ನನ್ನು, ಸಹ ಪಂಚ ಮತ್ತು ಪೊಲೀಸರನ್ನು ಮಾಬುಕಳದ ಹತ್ತಿರ ಇರುವ ಸೂಲಕುದುರು ಸ್ಥಳಕ್ಕೆ ಕರೆದುಕೊಂಡು ಹೋಗಿ ನದಿ ಸಮೀಪ ಅಲ್ಲಿಂದ 70 ಮೀಟರ್ ದೂರದಲ್ಲಿ ಹುಲ್ಲಿನ ಪೊದೆಯಿಂದ ಒಂದು ಕಬ್ಬಿಣದ ರಾಡ್, ಒಂದು ಸ್ಟೀಲ್ ರಾಡ್ ಮತ್ತು ಒಂದು ಲಾಂಗ್ ಅನ್ನು ತೆಗೆದು ಹಾಜರುಪಡಿಸಿದ್ದು ಅದನ್ನು ಪೊಲೀಸರು ಮಹಜರು ಮಾಡಿ ವಶಕ್ಕೆ ತೆಗೆದುಕೊಂಡರು ಹಾಗೂ ಸದರಿ ಮಹಜರಿಗೆ ತಾನು ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 41 ಫ್ರಾಸಾ-36 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನೀನು 5 ಮತ್ತು 6 ನೇ ಆರೋಪಿತರಾದ ನೀವು ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳನ್ನು ಇಟ್ಟ ಸ್ಥಳ ಎಂದು ತೋರಿಸಿದ ಮೇರೆಗೆ, ಪೊಲೀಸರು ಸದರಿ ಸ್ಥಳದಲ್ಲಿ

ಇನ್ನೊಂದು ಮಹಜರು ಮಾಡಿ ತಮ್ಮ ಸಹಿ ಪಡೆದುಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 42 ಫ್ರಾಸಾ-36 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 11.02.2019 ರಂದು ಮೇಲಾಧಿಕಾರಿಗಳ ನಿರ್ದೇಶನದಂತೆ ತಾನು ಬೆಳಿಗ್ಗೆ 6.00 ಗಂಟೆಗೆ ಬ್ರಹ್ಮಾವರ ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಸಹ ಪಂಚ ಚಾಸಾ-53, ಪೊಲೀಸ್ ಇನ್ಸಪೆಕ್ಟರ್ ಮಹೇಶ ಪ್ರಸಾದ್ ಮತ್ತು ಸಿಬ್ಬಂದಿಗಳು ಹಾಜರಿದ್ದರು. ಅವರು ತಮಗೆ ಈ ಪ್ರಕರಣದ ಆರೋಪಿತರು ಒಂದು ಕಡೆ ಇರುವ ಬಗ್ಗೆ ಮಾಹಿತಿ ಬಂದಿದ್ದು ಅಲ್ಲಿಗೆ ಹೋಗಬೇಕು ಎಂದು ತಿಳಿಸಿದರು, ಅದರಂತೆ ತಾವು ಠಾಣೆಯಿಂದ ಪೇತ್ರಿ ಕಡೆ ಹೋಗುವಾಗ ಸರ್ಕಲ್ ಹತ್ತಿರ ಹರೀಶ ನಾಯ್ಕನನ್ನು ಕರೆದುಕೊಂಡು ನಿಡೂರುಬೈಲು ಹತ್ತಿರ ಹೋಗಿ ಹಾಡಿ ಪ್ರದೇಶದಲ್ಲಿ ಜೀಪ್ ನಿಲ್ಲಿಸಿ, ಒಂದು ಸಿಮೆಂಟ್ ಶೀಟ್ ಮನೆಯನ್ನು ಇನ್ಸಪೆಕ್ಟರ್ ಬಾಗಿಲು ತಟ್ಟಿದಾಗ ಒಳಗಡೆ ಇದ್ದವರು ಬಾಗಿಲು ತೆಗೆದ ತಕ್ಷಣ ಒಳಗಡೆ ಇದ್ದ 3 ಜನರನ್ನು ಅಂದರೆ ನೀವು 7, 12 ಮತ್ತು 13 ನೇ ಆರೋಪಿತರನ್ನು ಹಿಡಿದುಕೊಂಡು ವಿಚಾರಿಸಿದಾಗ ನೀನು 3 ನೇ ಆರೋಪಿ ನೀವು ಕೊಲೆ ಕೇಸಿನಲ್ಲಿ ಭಾಗಿಯಾಗಿರುವುದಾಗಿ ಹಾಗೂ 12 ಮತ್ತು 13 ನೇ ಅರೋಪಿತರಾದ ನೀವು ಕೊಲೆ ಮಾಡಿದವರಿಗೆ ಸಹಾಯ ಮಾಡಿರುವುದಾಗಿ ಒಪ್ಪಿಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 43 ಫ್ರಾಸಾ-36 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಪೊಲೀಸರು ನಿಮ್ಮನ್ನು ದಸ್ತಗಿರಿ ಮಾಡಿ ನೀವು ಹಾಜರುಪಡಿಸಿದ 3 ಮೊಬೈಲ್ ಗಳನ್ನು ಮಹಜರು ಮಾಡಿ ವಶಕ್ಕೆ ತೆಗೆದುಕೊಂಡರು ಹಾಗೂ ನೀನು 7 ನೇ ಆರೋಪಿ ಕೃತ್ಯದ ಸಮಯ ಧರಿಸಿದ್ದ ಬಟ್ಟೆಗಳನ್ನು ಸದರಿ ಮನೆಯ ಹಿಂದೆ

ಇಟ್ಟಿರುವುದಾಗಿ ಹೇಳಿ ಅಲ್ಲಿ ಇಟ್ಟಿದ್ದ ಪ್ಯಾಂಟ್, ಟೀಶರ್ಟ್‌ನ್ನು ಹಾಜರುಪಡಿಸಿದ್ದು ಆ ಕುರಿತು ಪೊಲೀಸರು ಮಹಜರು ಮಾಡಿ ಅವುಗಳನ್ನು ವಶಕ್ಕೆ ಪಡೆದುಕೊಂಡರು ಹಾಗೂ ಸದರಿ ಮನೆ ಬಳಿ ನಿಲ್ಲಿಸಿದ್ದ ಕಾರಿನ ಬಗ್ಗೆ ನೀವು 13 ನೇ ಆರೋಪಿಯ ಬಳಿ ವಿಚಾರಿಸಿದಾಗ ಸದರಿ ಕಾರು ತನಗೆ ಸಂಬಂಧಪಟ್ಟಿದ್ದು ಅದನ್ನು ಈ ಪ್ರಕರಣದಲ್ಲಿನ ಆರೋಪಿತರನ್ನು ಶಿಫ್ಟ್ ಮಾಡಲು ಉಪಯೋಗಿಸಿರುವುದಾಗಿ ಎಂದು ಹೇಳಿದ ಮೇರೆಗೆ ಸದರಿ ಕಾರನ್ನು ಮಹಜರು ಮಾಡಿ, ಫೋಟೋ ತೆಗೆದು ಅಮಾನತು ಪಡಿಸಿಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ: 44 ಫ್ರಾಸಾ-36 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನೀನು 7 ನೇ ಆರೋಪಿ ತಮ್ಮನ್ನು ಮತ್ತು ಪೊಲೀಸರನ್ನು ಪೇತ್ರಿಯಿಂದ ಕುಚ್ಚೂರಿಗೆ ಕರೆದುಕೊಂಡು ಹೋಗಿ ಕೃತ್ಯಕ್ಕೆ ಬಳಸಿದ್ದ ರಾಡ್ ಅನ್ನು ಮತ್ತು ಯಮಹಾ ಬೈಕ್ ಅನ್ನು ಹಾಜರುಪಡಿಸುವುದಾಗಿ ಹೇಳಿದ ಮೇರೆಗೆ ಬೈಕ್ ಅನ್ನು ಕಾಡು ಪ್ರದೇಶದ ಹಾಡಿಯಿಂದ ಹಾಗೂ ಅಲ್ಲಿಂದ 30 ಅಡಿ ದೂರದಲ್ಲಿ ಪೊದೆಯಲ್ಲಿಟ್ಟಿದ್ದ ಮೂರು ರಾಡ್ ಗಳನ್ನು ಹಾಜರುಪಡಿಸಿದ್ದು, ಪೊಲೀಸರು ಅದನ್ನು ಮಹಜರು ಮಾಡಿ, ಫೋಟೊ ತೆಗೆದು, ವಶಪಡಿಸಿಕೊಂಡರು ಹಾಗೂ ಸದರಿ ಮಹಜರಿಗೆ ತಾನು ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 45 ಫ್ರಾಸಾ-36 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅಲ್ಲಿ ನೀನು 12 ನೇ ಆರೋಪಿ ತಮ್ಮನ್ನು ಮತ್ತು ಪೊಲೀಸರನ್ನು ಕೃಷ್ಣ ಮರಕಾಲ ಈತನ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ 4 ಮತ್ತು 7 ನೇ ಆರೋಪಿತರನ್ನು ಸೇಫ್ ಮಾಡಲು ಉಳಿದುಕೊಳ್ಳಲು ವ್ಯವಸ್ಥೆ ಮಾಡಿರುವುದಾಗಿ ಹೇಳಿದ ಮೇರೆಗೆ ಪೊಲೀಸರು ಸದರಿ ಸ್ಥಳದಲ್ಲಿ ಮಹಜರು

ಮಾಡಿ ತಮ್ಮ ಸಹಿ ಪಡೆದುಕೊಂಡರು ಹಾಗೂ 13 ನೇ ಆರೋಪಿ ತಮ್ಮನ್ನು ಮತ್ತು ಪೊಲೀಸರನ್ನು ಚಿಕ್ಕಮಗಳೂರು ಜಿಲ್ಲೆಯ ಕಂಕಳೆ ಗ್ರಾಮದ ಈರ ಮರಕಾಲ ಈತನ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಉಳಿದ ಆರೋಪಿತರಿಗೆ ಉಳಿಯಲು ಕರೆದುಕೊಂಡು ಹೋದ ಬಗ್ಗೆ ಹೇಳಿದ ಮೇರೆಗೆ ಸದರಿ ಸ್ಥಳದಲ್ಲಿ ಮಹಜರು ಮಾಡಿ ತಮ್ಮ ಸಹಿ ಪಡೆದುಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 46 ಫ್ರಾಸಾ-36 ಗಿರೀಶ್ ಕುಮಾರ್, ಫ್ರಾಸಾ-47 ಮನೀಷ್, ಫ್ರಾಸಾ-48 ವಿಷ್ಣುಮೂರ್ತಿ ಪ್ರಭು ಹಾಗೂ ಫ್ರಾಸಾ-54 ಶಂಕರ್ ರಾಮಚಂದ್ರ ನಾಯಕ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 12-02-2019 ರಂದು ಮಧ್ಯಾಹ್ನ 1-30 ಗಂಟೆಗೆ 3 ನೇ ಆರೋಪಿಯಾದ ನೀನು ತೋರಿಸಿದಂತೆ ಪೊಲೀಸರು ಆನಂದಪುರದ ಬಸ್ ಸ್ಟಾಂಡ್ ಹತ್ತಿರ ಶ್ರೀರಾಮ ಕ್ಲಾತ್ ಸ್ಟೋರ್ನಲ್ಲಿ ನೀನು ಇನ್ನಿಬ್ಬರು ವ್ಯಕ್ತಿಗಳೊಂದಿಗೆ ಸದರಿ ಅಂಗಡಿಗೆ ಬಂದು ಲುಂಗಿ ಶರ್ಟ್ ಮತ್ತು ಚಾಪೆ ಇವುಗಳನ್ನು ಖರೀದಿಸಿರುವುದಾಗಿ ಹೇಳಿದ ಮೇರೆಗೆ ಪೊಲೀಸರು ಮಹಜರು ಮಾಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

**ಪ್ರಶ್ನೆಃ 47 ಫ್ರಾಸಾ-48 ಇವರು 7 ನೇ ಆರೋಪಿಯನ್ನು ಗುರುತಿಸಿ, ಆತನೊಂದಿಗೆ 5 ಮತ್ತು 6 ನೇ ಆರೋಪಿತರು ಸಹ ಇದ್ದರು ಎನ್ನುತ್ತಾರೆ. ಫ್ರಾಸಾ-54 ಇವರು ಆ ದಿನ 6 ನೇ ಆರೋಪಿ ಅವರ ಅಂಗಡಿಗೆ ಬಂದು ಬಟ್ಟೆಗಳನ್ನು ಖರೀದಿಸಿದ್ದನು ಎನ್ನುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?**

**ಉತ್ತರ**ಃಸುಳ್ಳು

ಪ್ರಶ್ನೆಃ 48 ಫ್ರಾಸಾ-36 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 16-02-2019 ರಂದು ಮತ್ತೆ ಬ್ರಹ್ಮಾವರ ಪೊಲೀಸ್ ಠಾಣೆಗೆ ಬರಲು ಹೇಳಿದಂತೆ ತಾನು ಠಾಣೆಗೆ ಹೋದಾಗ ಅಲ್ಲಿ ಸಹ ಪಂಚ ಚಾಸಾ-41, ನೀನು

2 ನೇ ಆರೋಪಿ ಇದ್ದೆ. ನೀನು 2 ನೇ ಆರೋಪಿ ತಮ್ಮನ್ನು ಮತ್ತು ಪೊಲೀಸರನ್ನು ಸಿದ್ದಾಪುರದಿಂದ ಕಮಲಶಿಲೆಯ ಅಜ್ರಿ ಗ್ರಾಮಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನಿರ್ಮಾಣ ಹಂತದ ಕಟ್ಟಡಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನಿಂತಿದ್ದ ಪಿಕಪ್ ವ್ಯಾನ್ ತೋರಿಸಿ ಅದರ ಚಾಲಕನ ಸೀಟ್ ಕೆಳಗೆ ಇದ್ದ ಖಾಕಿ ಶರ್ಟ್, ಪ್ಯಾಂಟ್ , ಬಟ್ಟೆಯ ಕೆಳಗಡೆ ಇದ್ದ ಲಾಂಗ್ ಅನ್ನು ತೆಗೆದು ಹಾಜರುಪಡಿಸಿದ್ದು ಅದನ್ನು ಪೊಲೀಸರು ತಮ್ಮ ಸಮಕ್ಷಮ ಮಹಜರು ಮಾಡಿ, ಪೋಟೋ ತೆಗೆದು, ಮಹಜರಿಗೆ ತಮ್ಮ ಸಹಿ ಪಡೆದು ವಶಪಡಿಸಿಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 49 ಫ್ರಾಸಾ-36 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಬ್ರಹ್ಮಾವರ ಠಾಣೆಗೆ ಬಂದಾಗ ಅಲ್ಲಿ ಡಿ.ವೈ.ಎಸ್‌ಪಿ, ಸಿಬ್ಬಂದಿಗಳು ಮತ್ತು ನೀನು 4 ನೇ ಆರೋಪಿ ಇದ್ದೆ. ನೀನು 4 ನೇ ಅರೋಪಿ ತಮ್ಮನ್ನೆಲ್ಲಾ ನಿನ್ನ ಮನೆಗೆ ಕರೆದುಕೊಂಡು ಹೋಗಿ ಮನೆಯಲ್ಲಿ ಟಿವಿ ಹತ್ತಿರ ಇಟ್ಟಿದ್ದ ಮೊಬೈಲ್ ಅನ್ನು ಹಾಜರುಪಡಿಸಿದ್ದು, ಸದರಿ ಮೊಬೈಲ್ ಅನ್ನು ನೀನು ಉಳಿದ ಆರೋಪಿತರಿಗೆ ಸಹಾಯ ಮಾಡಲು ಬಳಕೆ ಮಾಡಿರುವುದಾಗಿ ತಿಳಿಸಿದ ಮೇರೆಗೆ ಸದರಿ ಮೊಬೈಲ್ ಅನ್ನು ತನಿಖಾಧಿಕಾರಿ ತಮ್ಮ ಸಮಕ್ಷಮ ಮಹಜರು ಮಾಡಿ, ಮಹಜರಿಗೆ ತಮ್ಮ ಸಹಿ ಪಡೆದು ಅಮಾನತುಪಡಿಸಿಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 50 ಫ್ರಾಸಾ-37 ಶಿವರಾಜ ಕಟಗಿ, ಗ್ರಾಮ ಲೆಕ್ಕಾಧಿಕಾರಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 08-02-2019 ರಂದು ತನ್ನ ಮೇಲಾಧಿಕಾರಿಗಳ ನಿರ್ದೇಶನದಂತೆ ಈ ಪ್ರಕರಣದಲ್ಲಿ ಪಂಚನಾಗಿ ಸಹಕರಿಸಲು ದಿಃ 10.02.2019 ರಂದು ಮಧ್ಯಾಹ್ನ 12 ಗಂಟೆಗೆ ತಾನು ಬ್ರಹ್ಮಾವರ ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ತನಿಖಾಧಿಕಾರಿ, ಪೊಲೀಸ್ ಸಿಬ್ಬಂದಿಗಳು ಮತ್ತು ನೀವು 3 ನೇ ಆರೋಪಿ ಇದ್ದು, ನೀವು ತಮ್ಮನ್ನು ಮತ್ತು ಪೊಲೀಸರನ್ನು ಕೃತ್ಯ

ನಡೆದ ಸಮಯ ನೀವು ಧರಿಸಿದ್ದ ಬಟ್ಟೆಗಳನ್ನು ಹಾಗೂ ನೀವು 5 ಮತ್ತು 6 ನೇ ಆರೋಪಿತರು ತಲೆಮರೆಸಿಕೊಂಡಿದ್ದ ಸ್ಥಳವನ್ನು ತೋರಿಸುವುದಾಗಿ ಹೇಳಿ ತಮ್ಮನ್ನು ಹೊಸನಗರ ತಾಲೂಕಿನ ಸಂಪಳ್ಳಿ ಗ್ರಾಮದ ತೋಟದ ಮನೆಗೆ ಕರೆದುಕೊಂಡು ಹೋಗಿ ಜಂತಿಯಲ್ಲಿ ಇದ್ದ ಬಟ್ಟೆಗಳಾದ ಪ್ಯಾಂಟ್ ಮತ್ತು ಟೀ ಶರ್ಟ್‌ಗಳನ್ನು ಹಾಜರುಪಡಿಸಿದಿರಿ ಹಾಗೂ ಅದೇ ಮನೆಯಲ್ಲಿ ಕೃತ್ಯ ಮಾಡಿದ ನಂತರ ಉಳಿದುಕೊಂಡಿರುವುದಾಗಿ ತಿಳಿಸಿದ ಮೇರೆಗೆ ಪೊಲೀಸರು ತಮ್ಮ ಸಮಕ್ಷಮ ಸದರಿ ಸ್ಥಳದ ಮಹಜರು ಮಾಡಿ ಬಟ್ಟೆಗಳನ್ನು ಅಮಾನತುಪಡಿಸಿಕೊಂಡರು ಹಾಗೂ ಸದರಿ ಮಹಜರಿಗೆ ತಾನು ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 51 ಫ್ರಾಸಾ-38 ಪುರುಷೋತ್ತಮ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿಃ 14-02-2019 ರಂದು ತನಗೆ ಮತ್ತು ಸಹ ಪಂಚ ಕಿಶನ್ ಈತನಿಗೆ ಬ್ರಹ್ಮಾವರ ಪೊಲೀಸರು ಕರೆ ಮಾಡಿ ಈ ಪ್ರಕರಣದಲ್ಲಿ ಪಂಚರಾಗಿ ಸಹಕರಿಸಲು ಹೇಳಿದಂತೆ ಸಂಜೆ 4 ಗಂಟೆಗೆ ಬ್ರಹ್ಮಾವರ ಪೊಲೀಸ್ ಠಾಣೆಗೆ ಹೋದೆವು, ಅಲ್ಲಿ ಪೊಲೀಸರು ತಮಗೆ ಈ ಪ್ರಕರಣದ 2 ನೇ ಆರೋಪಿ ನೀನು ತೆಕ್ಕಟ್ಟೆಯಲ್ಲಿ ಇರುವ ಬಗ್ಗೆ ಮಾಹಿತಿ ಬಂದ ಮೇರೆಗೆ ತೆಕ್ಕಟ್ಟೆ ಬಸ್ ಸ್ಟಾಂಡ್ ಹೋದಾಗ ಅಲ್ಲಿ ನೀನು 2 ನೇ ಆರೋಪಿ ಪೊಲೀಸರ ಜೀಪ್ ನೋಡಿ ಬಚ್ಚಿಟ್ಟುಕೊಳ್ಳಲು ಯತ್ನಿಸಿದ ಮೇರೆಗೆ ನಿನ್ನನ್ನು ಪೊಲೀಸರು ಹಿಡಿದು, ವಿಚಾರಿಸಿದಾಗ ನೀನು ನಿನ್ನ ಹೆಸರನ್ನು ಚಂದ್ರಶೇಖರ್ ರೆಡ್ಡಿ ಎಂದು ಹೇಳಿದ್ದು, ನಿನ್ನನ್ನು ಅಲ್ಲಿ ವಶಕ್ಕೆ ಪಡೆದ ಬಗ್ಗೆ ಮಾಡಿದ ಮಹಜರಿಗೆ ತಾನು ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 52 ಫ್ರಾಸಾ-38 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿಃ 15.02.2019 ರಂದು ಬೆಳಿಗ್ಗೆ 7 ಗಂಟೆಗೆ ಪೊಲೀಸರು ಕರೆದಂತೆ ಬ್ರಹ್ಮಾವರ

ಠಾಣೆಗೆ ತಾನು ಮತ್ತು ಸಹ ಪಂಚ ಹೋದೆವು, ಠಾಣೆಯಲ್ಲಿದ್ದ ನೀನು 4 ನೇ ಆರೋಪಿ ಕೃತ್ಯಕ್ಕೆ ಉಪಯೋಗಿಸಿದ ಕಬ್ಬಿಣದ ರಾಡ್‌ನ್ನು ಕುಚ್ಚೂರಿನ ಕಾನ್ಬೆಟ್ಟುವಿನ ಹಾಡಿಯ ಪೊದೆಯ ಹತ್ತಿರ ಇಟ್ಟಿರುವುದಾಗಿ ಹೇಳಿದ ಮೇರೆಗೆ, ಸದರಿ ಸ್ಥಳಕ್ಕೆ ಹೋಗಿ 4 ನೇ ಆರೋಪಿ ತೋರಿಸಿ ತೋರಿಸಿದಂತೆ ಪೊಲೀಸರು ಸದರಿ ಸ್ಥಳದ ಮಹಜರನ್ನು ತಮ್ಮ ಸಮಕ್ಷಮ ಮಾಡಿ ಸಹಿ ಪಡೆದುಕೊಂಡರು ಎಂದು ಸಾಕ್ಷಿ ವಿಚಾರಣೆಯಲ್ಲಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 53 ಪ್ರಾಸಾ-39 ವಿಕಾಸ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 14-02-2019 ರಂದು ಸಂಜೆ 7 ಗಂಟೆಗೆ ಗುಂಡ್ಮಿ ಬಸ್ ಸ್ಟಾಂಡ್ ಹತ್ತಿರ ತಾನು ಮತ್ತು ವಿಜಯ ಪೂಜಾರಿ ನಿಂತಿರುವಾಗ ಪೊಲೀಸರು ಒಬ್ಬ ವ್ಯಕ್ತಿಯನ್ನು ಹಿಡಿದು ವಿಚಾರಣೆ ಮಾಡುತ್ತಿದ್ದರು, ಆತ ತಾನು ಕೋಟ ಮರ್ಡರ್ ಕೇಸ್ ನಲ್ಲಿ ಭಾಗಿಯಾಗಿರುವುದಾಗಿ ಹೇಳಿದ ಮೇರೆಗೆ ಆತನನ್ನು ಬಂಧಿಸಿದ ಬಗ್ಗೆ ಮಹಜರು ಮಾಡಿ ತಮ್ಮ ಸಹಿ ಪಡೆದುಕೊಂಡರು, ಆದಿನ ಪೊಲೀಸರು ಬಂಧಿಸಿದ ವ್ಯಕ್ತಿ ನೀನು 4 ನೇ ಆರೋಪಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 54 **ಪ್ರಾಸಾ-40 ನರಸಿಂಹ ಕರಿಯ ಪೂಜಾರಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 11-03-2019 ರಂದು ಕೋಟಾ ಪೋಲೀಸರು ತನ್ನ ಹಾಗೂ ಚಾಸಾ72 ರವರ ಸಮಕ್ಷಮ ನಿಪಿ 89 ರ ಪ್ರಕಾರ ಪಂಚನಾಮೆ ತಯಾರಿಸಿ, 18 ನೇ ಆರೋಪಿಯಾದ ನಿಮ್ಮಿಂದ ಮು.ಮಾ.56 ರಲ್ಲಿರುವ ಮೊಬೈಲ ಫೋನನ್ನು ವಶಪಡಿಸಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?**

**ಉತ್ತರ**ಃಸುಳ್ಳು

ಪ್ರಶ್ನೆ: 55 ಫ್ರಾಸಾ-44 ಗಿರೀಶ್ ಗೋಪಾಲ ಪೂಜಾರಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 27.01.2019 ರಂದು 14 ನೇ ಆರೋಪಿಯಾದ ನೀವು ಅವರು ನಡೆಸುತ್ತಿದ್ದ ಪೇತ್ರಿ ಸರ್ಕಲ್ ಹತ್ತಿರದ ಪೃಥ್ವೀ ಸೇಲ್ಸ್ ಆ್ಯಂಡ್ ಸರ್ವೀಸ್ ಹೆಸರಿನ ಮೊ ಬೈಲ್ ಅಂಗಡಿಗೆ ಬಂದು ನಿಪಿ-71 ರಂತೆ ನೋಕಿಯಾ ಮೊಬೈಲನ್ನು ಖರೀದಿಸಿದ್ದಾಗಿ, ಅದರಂತೆ ದಿನಾಂಕ 11.02.2019 ರಂದು ನಿಮ್ಮೊಂದಿಗೆ ಪೋಲಿಸರು ಬಂದು ತಮ್ಮನ್ನು ವಿಚಾರಿಸಿ ನಿಪಿ-70 ಮಹಜರಿಗೆ ತಮ್ಮ ಸಹಿ ಪಡೆದುಕೊಂಡಿದ್ದಾಗಿ, ನಂತರ ತಮಗೆ ಆ ಮೊಬೈಲ್ ಅನ್ನು ಕೊಲೆ ಪ್ರಕರಣಕ್ಕೆ ಉಪಯೋಗಿಸಿದ ಬಗ್ಗೆ ತಿಳಿದು ಬಂದಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:56 ಫ್ರಾಸಾ-44 ತಮ್ಮ ಮುಂದುವರೆದ ಸಾಕ್ಷಿ ವಿಚಾರಣೆಯಲ್ಲಿ 14 ನೇ ಆರೋಪಿಯಾದ ನೀವು ಸಮೀಪದಲ್ಲಿರುವ ಚಾಸಾ-50 ಇವರ ಅಂಗಡಿಯಲ್ಲಿ ಸಿಮ್ ಕಾರ್ಡ್ ಖರೀದಿಸಿದ್ದಾಗಿ ಹೇಳಿ ನಂತರ ಪೋಲೀಸರನ್ನು ಅಲ್ಲಿಂದ ಕರೆದುಕೊಂಡು ಹೋಗಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 57 **ಫ್ರಾಸಾ-45 ಗಗನ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 27.01.2019** ರಂದು **ಬೆಳಿಗ್ಗೆ 10 ರಿಂದ 11 ಗಂಟೆ ಸಮಯಕ್ಕೆ 14 ನೇ ಆರೋಪಿಯಾದ ನೀವು ಸ್ಟೈಲ್ ಟೆಲಿಕಾಂ ಹೆಸರಿನ ಅವರ ಮೊಬೈಲ್ ಅಂಗಡಿಗೆ ಬಂದು ಏರ್ ಟೆಲ್ ಸಿಂ ಕಾರ್ಡ್ ಖರೀದಿಸಿದ್ದಾಗಿ ನಂತರ 11.02.2019 ರಂದು ಪೋಲೀಸರು ನಿಮ್ಮನ್ನು ಕರೆದುಕೊಂಡು ತಮ್ಮ ಅಂಗಡಿಗೆ ಬಂದು ವಿಚಾರಿಸಿದಾಗ ಈ ವಿಷಯವನ್ನು ಪೋಲೀಸರಿಗೆ ತಿಳಿಸಿದ್ದಾಗಿ, ಸಾಕ್ಷಿ ನುಡಿದಿರುತ್ತಾರೆ.** ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 58 **ಫ್ರಾಸಾ-45 ಗಗನ್ ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಈ ಬಗ್ಗೆ ಪೋಲೀಸರು ನಿಪಿ 70 ರಂತೆ ಮಹಜರು ಮಾಡಿದ್ದಾಗಿ ಅದಕ್ಕೆ ತಾನು ನಿಪಿ 70 ಬಿ ಅಂತೆ ಸಹಿ ಮಾಡಿದ್ದಾಗಿ** ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 59 **ಫ್ರಾಸಾ-45 ಗಗನ್ ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ತನ್ನ ಅಂಗಡಿಯಿಂದ ಖರೀದಿಸಿದ ಸಿಂ ಕಾರ್ಡನ್ನು 14 ನೇ ಆರೋಪಿಯಾದ ನೀವು ಕೊಲೆ ಆರೋಪಿಗಳಿಗೆ ಕೊಟ್ಟಿದ್ದ ಬಗ್ಗೆ ನಂತರ ತನಗೆ ಗೊತ್ತಾಗಿರುತ್ತದೆ ಎಂದು** ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 60 ಫ್ರಾಸಾ-47 ಇವರು ತಮ್ಮ ಮುಂದುವರಿದ ಸಾಕ್ಷಿಯಲ್ಲಿ ದಿನಾಂಕ 25-02-2019 ರಂದು ತನ್ನನ್ನು ಡಿ.ವೈ.ಎಸ್ಪಿ ಕಚೇರಿಗೆ ಕರೆಯಿಸಿ ಅಲ್ಲಿ ಒಂದು ಸಿಡಿಯನ್ನು ಲ್ಯಾಪ್ ಟಾಪ್ ನಲ್ಲಿ ಹಾಕಿ ತೋರಿಸಿದಾಗ ಬಿಳಿ ಬಣ್ಣದ ಸ್ವಿಫ್ಟ್ ಕಾರು, ಸಿಲ್ವರ್ ಕಲರ್ ನ ಇಕೋ ಕಾರು, ಬ್ಲೂಕಲರ್ ನ ಸಿಯಾಜ್ ಕಾರು, ಬಿಳಿ ಬಣ್ಣದ ವೋಲ್ವೋ ಕಾರು ಆಗುಂಬೆ ಘಾಟ್ ನಲ್ಲಿ ಹೋಗುವುದು ಕಾಣುತ್ತಿತ್ತು. ಪೊಲೀಸರು ಆ ಸಿಡಿಯನ್ನು ತನ್ನ ಎದುರಿಗೆ ಮಹಜರು ಮಾಡಿ ಅಮಾನತುಪಡಿಸಿಕೊಂಡರು ಹಾಗೂ ಅದೇ ದಿನ ಉಮೇಶ ಎನ್ನುವವರು ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ಸಹ ಮಹಜರು ಮಾಡಿ ವಶಪಡಿಸಿಕೊಂಡರು ಹಾಗೂ ಸದರಿ ಮಹಜರಿಗೆ ತಾನು ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 61 ಫ್ರಾಸಾ-55 ಅವಿನಾಶ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಪೊಲೀಸರು ತನಗೆ ಬಾರಿಕೇರಿ ಯುವಕ ಮಂಡಳದವರು ಆಯೋಜಿಸಿದ್ದ ನಿನಾದ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ತಂದು ಕೊಡುವಂತೆ ಹೇಳಿದ್ದರಿಂದ ತಾನು ಅದನ್ನು ಪೊಲೀಸರಿಗೆ ಕೊಟ್ಟಿದ್ದೆನು. ಪೊಲೀಸರು ಅದನ್ನು ತನ್ನ ಸಮಕ್ಷಮ

ಮಹಜರು ಮಾಡಿ ಅಮಾನತುಪಡಿಸಿಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 62 ಫ್ರಾಸಾ-57 ಸಂತೋಷ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಕೆಎ-19-ಸಿ-3118 ನೊಂದಣಿ ಸಂಖ್ಯೆಯ ಅಟೋ ರಿಕ್ಷಾ ತನ್ನದು ಅದನ್ನು ಮೃತ ಭರತ್ ಈತನಿಗೆ ರೂಪಾಯಿ 54 ಸಾವಿರಕ್ಕೆ ಮಾರಾಟ ಮಾಡಿರುತ್ತೇನೆ. ಭರತ್ ಈತನ ಕೊಲೆಯಾದ ನಂತರ ಪೊಲೀಸರು ತನಗೆ ನೋಟಿಸು ನೀಡಿದ್ದು ತಾನು ಪೊಲೀಸ್ ಠಾಣೆಗೆ ಹೋಗಿ ಭರತ್ ಈತನಿಗೆ ಅಟೋವನ್ನು ಮಾರಾಟ ಮಾಡಿರುತ್ತೇನೆಂದು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 63 ಫ್ರಾಸಾ-58 ವಿಜೇತ್ ತಮ್ಮ ಸಾಕ್ಷಿ ವಿಚಾರಣೆಯಲ್ಲಿ 14 ನೇ ಆರೋಪಿಯಾದ ನಿಮ್ಮ ಪರಿಚಯವಿರುವುದಾಗಿ, ಮು.ಮಾ-46 ರಲ್ಲಿರುವ ಕೆಎ-22/ಇಕ್ಯೂ-7330 ನಂಬರಿನ ಮೋಟರ್ ಸೈಕಲನ್ನು ತಾನು ನಿಮ್ಮ ತಂದೆಯವರಿಂದ ಖರೀದಿಸಿದ್ದಾಗಿ, ನಂತರ ಪೊಲೀಸರು ಸದರಿ ವಾಹನವನ್ನು ಕೊಲೆ ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡಿರುವುದಾಗಿ ತಿಳಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 64 ಫ್ರಾಸಾ-59 ಶ್ರೀನಿವಾಸ ಮೂರ್ತಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತನ್ನ ಕೆಎ-19-ಜೆ-0038 ಸಂಖ್ಯೆಯ ಮೋಟಾರ್ ಸೈಕಲ್ ಅನ್ನು 1998 ರಲ್ಲಿ ಗಿರೀಶ್ ಎನ್ನುವವರಿಗೆ ಮಾರಾಟ ಮಾಡಿ ವಾಹನದ ದಾಖಲೆಗಳನ್ನು ಆತನಿಗೆ ಕೊಟ್ಟಿರುತ್ತೇನೆ. ನಂತರ ಎರಡು ವರ್ಷಗಳ ಹಿಂದೆ ಬ್ರಹ್ಮಾವರ ಪೊಲೀಸರು ತನ್ನನ್ನು ಠಾಣೆಗೆ ಕರೆಸಿದ್ದು ಅಲ್ಲಿ ತಾನು ಮಾರಾಟ ಮಾಡಿದ ಮೋಟಾರ್ ಸೈಕಲ್ ಅನ್ನು ಕೊಲೆ ಕೇಸ್ ನಲ್ಲಿ ಸ್ವಾಧೀನಪಡಿಸಿಕೊಂಡ ಬಗ್ಗೆ ಗೊತ್ತಾಯಿತು . ತಾನು ಪೊಲೀಸರಿಗೆ ಸದರಿ ಮೋಟಾರ್ ಸೈಕಲ್‌ಅನ್ನು ಗಿರೀಶ ಎನ್ನುವವರಿಗೆ

ಮಾರಾಟ ಮಾಡಿದ ಬಗ್ಗೆ ತಿಳಿಸಿರುತ್ತೇನೆ. ಈ ಬಗ್ಗೆ ಪೊಲೀಸರು ತನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 65 **ಫ್ರಾಸಾ-65 ಮಹೇಶ್ ಕುಮಾರ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ 13 ನೇ ಆರೋಪಿಯಾದ ನೀವು ದಿನಾಂಕ 26.01.2019 ರಂದು ಅವರ ಕೆಎ 20 ಡಿ 4819 ಸಂಖ್ಯೆಯ ಇಕೋ ಕಾರನ್ನು ಮದುವೆ ಕಾರ್ಯಕ್ರಮಕ್ಕೆ ಬೇಕಾಗಿದೆ ಎಂದು ಹೇಳಿ ತೆಗೆದುಕೊಂಡು ಹೋಗಿದ್ದಾಗಿ ನಂತರ 28.01.2019 ರಂದು ಸಂಜೆ 4 ರಿಂದ 5 ಗಂಟೆ ಸಮಯದಲ್ಲಿ ವಾಹನವನ್ನು ಹಿಂದಿರುಗಿಸಿದ್ದಾಗಿ , ನಂತರ ಸದರಿ ವಾಹನ ಈ ಪ್ರಕರಣದ ಆರೋಪಿಗಳನ್ನು ಸಾಗಾಟ ಮಾಡಲು ಬಳಸಿದ್ದು, ತನಗೆ ಪೋಲೀಸರಿಂದ ತಿಳಿದು ಬಂದಿದ್ದಾಗಿ** ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 66 ಫ್ರಾಸಾ-66 ಯೋಗಿತಾ ಪಿಡಿಓ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಉಡುಪಿಯ ಡಿ.ವೈ.ಎಸ್ಪಿ ಇವರು ತಮ್ಮ ಚೇರ್ಕಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ನಿಡೂರುಬೈಲಿನಲ್ಲಿದ್ದ ಅಕ್ಕಿ ರೊಟ್ಟಿ ತಯಾರಿಸುವ ಘಟಕ ಯಾರ ಮಾಲೀಕತ್ವದಲ್ಲಿದೆ ಹಾಗೂ ಪರವಾನಿಗೆ ಯಾರ ಹೆಸರಿನಲ್ಲಿದೆ ಎಂದು ಮಾಹಿತಿ ಕೇಳಿದ್ದು, ಅದರಂತೆ ತಾನು ಸದ್ರಿ ಕಟ್ಟಡಕ್ಕೆ ಸಂಬಂಧಪಟ್ಟ ಡಿಮಾಂಡ್ ರಿಜಿಸ್ಟರ್ ಮತ್ತು ಉದ್ದಿಮೆಗೆ ಸಂಬಂಧಪಟ್ಟ ಉದ್ಯಮ ರಿಜಿಸ್ಟರ್ ಅನ್ನು ಪರಿಶೀಲಿಸಿ ಸದರಿ ಕಟ್ಟಡ ಅಲ್ಮೆಡಾ ಈತನ ಹೆಸರಿನಲ್ಲಿದ್ದು, ರೊಟ್ಟಿ ಘಟಕದ ಪರವಾನಿಗೆ ಹರೀಶ್ ಈತನ ಹೆಸರಿನಲ್ಲಿತ್ತು ಎಂದು ದಾಖಲಾತಿಯೊಂದಿಗೆ ಮಾಹಿತಿ ನೀಡಿ ವರದಿ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 67 ಫ್ರಾಸಾ 67 ಡಾ: ವಿಕ್ರಮ ಪಲಿಮಾರ್, ಪ್ರೊಫೇಸರ್ ಮತ್ತು ಮುಖ್ಯಸ್ಥರು ಫೋರೆನ್ಸಿಕ್ ಮೆಡಿಸಿನ್ ಮತ್ತು ಟಾಕ್ಸಿಕಾಲೋಜಿ ವಿಭಾಗ, ಕೆಎಂಸಿ, ಮಣಿಪಾಲ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 27-01-2019 ರಂದು ಬೆಳಿಗ್ಗೆ 11 ರಿಂದ 12-30 ಗಂಟೆಗೆ ಕೋಟ ಪೊಲೀಸರ ಮನವಿಯ ಮೇರೆಗೆ ಮೃತ ಭರತ್ ಈತನ ಶವದ ಮರಣೋತ್ತರ ಪರೀಕ್ಷೆಯನ್ನು ಮಾಡಿದ್ದು ಮೃತನ ಸಾವು ತಲೆ ಮತ್ತು ಕೈಗಳಿಗೆ ಹರಿತವಾದ ಆಯುಧದಿಂದ ಹಲ್ಲೆ ಮಾಡಿದ ಪರಿಣಾಮವಾಗಿ ಅದರ ಗಾಯಗಳಿಂದ ಆತ ಮೃತಪಟ್ಟಿರುತ್ತಾನೆ ಎಂದು ಹಾಗೂ ಮರಣೋತ್ತರ ಪರೀಕ್ಷಾ ಮಾಡುವ 6 ರಿಂದ 12 ತಾಸಿನ ಒಳಗಿನ ಅವಧಿಯಲ್ಲಿ ಆತ ಮರಣ ಹೊಂದಿರುತ್ತಾನೆಂದು ಅಭಿಪ್ರಾಯವನ್ನು ನೀಡಿರುತ್ತೇನೆ ನಿಪಿ-119 ರಂತೆ ಹಾಗೂ ಆತನ ರಕ್ತದ ಗುಂಪು B+ ಆಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: ಸುಳ್ಳು

ಪ್ರಶ್ನೆ: 68 ಫ್ರಾಸಾ 67 ಡಾ: ವಿಕ್ರಮ ಪಲಿಮಾರ್ ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 27-01-2019 ರಂದು ಮಧ್ಯಾಹ್ನ 12-30 ರಿಂದ 2-00 ಗಂಟೆಯವರೆಗೆ ಕೋಟ ಪೊಲೀಸರ ಮನವಿಯ ಮೇರೆಗೆ ಮೃತ ಯತೀಶ ಈತನ ಶವದ ಮರಣೋತ್ತರ ಪರೀಕ್ಷೆಯನ್ನು ಮಾಡಿದ್ದು ಮೃತನ ಸಾವು ತಲೆಗೆ ಹರಿತವಾದ ಆಯುಧದಿಂದ ಹಲ್ಲೆ ಮಾಡಿದ ಪರಿಣಾಮವಾಗಿ ಅದರ ಗಾಯಗಳಿಂದ ಆತ ಮೃತಪಟ್ಟಿರುತ್ತಾನೆ ಎಂದು ಹಾಗೂ ಮರಣೋತ್ತರ ಪರೀಕ್ಷಾ ಮಾಡುವ 6 ರಿಂದ 12 ತಾಸಿನ ಒಳಗಿನ ಅವಧಿಯಲ್ಲಿ ಆತ ಮರಣ ಹೊಂದಿರುತ್ತಾನೆಂದು ಅಭಿಪ್ರಾಯವನ್ನು ನಿಪಿ-120 ರಂತೆ ನೀಡಿರುತ್ತೇನೆ ಹಾಗೂ ಆತನ ರಕ್ತದ ಗುಂಪು B+ ಆಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 69 ಫ್ರಾಸಾ 67 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 12.03.2019 ರಂದು ಕೃತ್ಯಕ್ಕೆ ಬಳಸಿದ್ದ 8 ಆಯುಧಗಳನ್ನು ತನಿಖಾಧಿಕಾರಿ ಕಳುಹಿಸಿದ್ದನ್ನು ಪರೀಕ್ಷೆ ಮಾಡಿ ಪ್ರಶ್ನಾವಳಿಗಳಿಗೆ ಅಭಿಪ್ರಾಯವನ್ನು ನಿಪಿ-121 ರಂತೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ :70 ಫ್ರಾಸಾ-68 ಡಾಃ ಅಶ್ವಿನ್ ಕುಮಾರ್ ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತಾವು ದಿನಾಂಕ 27.01.2019 ರಂದು ಬೆಳಿಗ್ಗೆ 5 ಗಂಟೆ ಸಮಯಕ್ಕೆ ಕರ್ತವ್ಯದಲ್ಲಿದ್ದಾಗ ಆಸ್ಪತ್ರೆಗೆ ದಾಖಲಾಗಿದ್ದ ಗಾಯಾಳು ಫ್ರಾಸಾ-1 ಲೋಹಿತ್ ಪೂಜಾರಿ ಅವರನ್ನು ಪರೀಕ್ಷಿಸಿದಾಗ ಅವರ ಮೈಮೇಲೆ ತಾಜಾ ಹಾಗೂ ಸಾದಾ ಸ್ವರೂಪದ ಆರು ಗಾಯಗಳನ್ನು ಗಮನಿಸಿದ್ದಾಗಿ, ಒಬ್ಬ ವ್ಯಕ್ತಿ ಹಲ್ಲೆಯಿಂದ ತಪ್ಪಿ ಸಿಕೊಳ್ಳುವ ಪ್ರಯತ್ನದಲ್ಲಿ ಒರಟಾದ ಸ್ಥಳಕ್ಕೆ ಬಿದ್ದು ಉರುಳಿದಾಗ ಆ ರೀತಿಯ ಗಾಯಗಳು ಆಗುತ್ತವೆಂಬುದಾಗಿ, ಹಾಗೂ ಆ ಬಗ್ಗೆ ತಾವು ನಿಪಿ-122 ರಂತೆ ಗಾಯದ ಪ್ರಮಾಣಪತ್ರವನ್ನು ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:71 **ಫ್ರಾಸಾ-69 ಡಾಃ ಅಮರನಾಥ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕಃ 28.01.2019 ರಂದು ತಾನು ಗಾಯಾಳುವಾದ ಫ್ರಾಸಾ2 ಶಶಿಕುಮಾರ್ ಎನ್ನುವವರನ್ನು ಪರೀಕ್ಷಿಸಲಾಗಿ, ಅವರ ಎಡಭುಜ ಮತ್ತು ತಲೆಯ ಬಲ ಭಾಗದಲ್ಲಿ 2 ಸಾದಾ ಸ್ವರೂಪದ ಗಾಯಗಳು ಕಂಡು ಬಂದಿರುವುದಾಗಿ, ಈ ಬಗ್ಗೆ ತಾವು ನಿಪಿ123 ರಂತೆ ಗಾಯ ಪ್ರಮಾಣ ಪತ್ರವನ್ನು ನೀಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?**

**ಉತ್ತರ**ಃಸುಳ್ಳು

ಪ್ರಶ್ನೆ: 72 **ಫ್ರಾಸಾ-69 ಡಾಃ ಅಮರನಾಥ ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ಪ್ರಕರಣದ ಇನ್ನೊಬ್ಬ ಗಾಯಾಳು ಫ್ರಾಸಾ3**

**ಸಚಿನ್ ಅವರನ್ನು ತಾನು ಪರೀಕ್ಷಿಸಲಾಗಿ, ಎಡಗಾಲಿನ ಕೆಳಭಾಗದಲ್ಲಿ ನೋವು ಕಂಡು ಬಂದಿದ್ದು, ಈ ಬಗ್ಗೆ ತಾವು ನಿಪಿ 124 ರಂತೆ ಗಾಯ ಪ್ರಮಾಣ ಪತ್ರವನ್ನು ನೀಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?**

**ಉತ್ತರ:**ಸುಳ್ಳು

ಪ್ರಶ್ನೆ: 73 **ಫ್ರಾಸಾ-69 ಡಾ: ಅಮರನಾಥ ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಯಾವುದೇ ವ್ಯಕ್ತಿ ಮು.ಮಾ.4 ರಿಂದ 8 ರಂತಹ ರಾಡ್ಗಳಿಂದ ಹಲ್ಲೆಗೊಳಗಾದಲ್ಲಿ ನಿಪಿ 123 ಮತ್ತು ನಿಪಿ124 ರಲ್ಲಿ ನಮೂದಿಸಿರುವಂತಹ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?**

**ಉತ್ತರ:**ಸುಳ್ಳು

ಪ್ರಶ್ನೆ: 74 **ಫ್ರಾಸಾ-69 ಡಾ: ಅಮರನಾಥ ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಫ್ರಾಸಾ1 ರವರ ಮನೆಯ ಅಂಗಳದಲ್ಲಿ ಆರೋಪಿತರಾದ ನೀವುಗಳು ಫ್ರಾಸಾ2 ಮತ್ತು ಫ್ರಾಸಾ3 ರವರನ್ನು ದಿನಾಂಕ 26.01.2019 ರಂದು ರಾತ್ರಿ 11 ಗಂಟೆಗೆ iron rod ನಿಂದ ಹಲ್ಲೆ ಮಾಡಿದ್ದೀರಿ ಎಂಬ ಹಿನ್ನೆಲೆಯೊಂದಿಗೆ ಅವರುಗಳು ತಮ್ಮ ಆಸ್ಪತ್ರೆಗೆ ದಿನಾಂಕ:28.01.2019 ರಂದು ಬಂದಿದ್ದರು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?**

**ಉತ್ತರ:**ಸುಳ್ಳು

**ಪ್ರಶ್ನೆ: 75** ಫ್ರಾಸಾ-70 ರಾಜು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಉಡುಪಿಯ ಪೊಲೀಸ್ ಉಪಾಧೀಕ್ಷರು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲೂಕಿನ ಮಾರುತಿಪುರ ಗ್ರಾಮ ಪಂಚಾಯಿತಿ ಕಚ್ಚಿಗೆಬೈಲು ಗ್ರಾಮದ ಇಂದಿರಮ್ಮ ಇವರಿಗೆ ಸೇರಿದ ಮನೆಯ ದಾಖಲಾತಿಯನ್ನು ಒದಗಿಸುವಂತೆ ಕೋರಿಕೊಂಡ ಮೇರೆಗೆ ಕಚೇರಿಯ ಡಿಮಾಂಡ್ ರಿಜಿಸ್ಟರ್

ಸದರಿ ಮನೆಯ ಡಿ.ಆರ್ ನಂಬ್ರ 70 ಎಂದು ಈ ಬಗ್ಗೆ ದಾಖಲಾತಿಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 76 ಫ್ರಾಸಾ-71 ಹರೀಶ್, ಕಿರಿಯ ಅಭಿಯಂತರರು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಡಿ.ವೈ.ಎಸ್ಪಿ ಉಡುಪಿ ಇವರು ಘಟನೆ ನಡೆದ ಸ್ಥಳದ ನಕಾಶೆ ತಯಾರಿಸಲು ಕೇಳಿದ್ದು ಅದರಂತೆ ತನ್ನನ್ನು ದಿಃ 28.01.2019 ರಂದು ಮಣೂರು ಗ್ರಾಮದ ಚಿಕ್ಕನಕೆರೆ ಎಂಬಲ್ಲಿರುವ ಚಾಸಾ-1 ಈತನ ಮನೆಗೆ ಕೋಟ ಠಾಣೆಯ ಹೆಚ್ ಸಿ ಕರೆದುಕೊಂಡು ಹೋಗಿ ತಕ್ಷೀರು ಸ್ಥಳ ತೋರಿಸಿದ್ದು ಅದರಂತೆ ಸ್ಥಳ ಪರಿಶೀಲಿಸಿ ನಕಾಶೆಯನ್ನು ನಿಪಿ-126 ರಂತೆ ತಯಾರಿಸಿ ತನಿಖಾಧಿಕಾರಿಗೆ ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 77 ಫ್ರಾಸಾ-72 ನಾಗರಾಜ ಉಪನೊಂದಣಾಧಿಕಾರಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 21.02.2019 ರಂದು ಉಡುಪಿಯ ಡಿ.ವೈ.ಎಸ್ಪಿ ಇವರು ಬ್ರಹ್ಮಾವರ ತಾಲೂಕು ಮಣೂರು ಗ್ರಾಮದ ಚಿಕ್ಕನಕೆರೆ ಎಂಬಲ್ಲಿರುವ ಅಖಿಲೇಶ್ ಇವರಿಂದ ಚಾಸಾ-1 ಲೋಹಿತ್ ಪೂಜಾರಿ ಮನೆ ಮತ್ತು ಜಾಗವನ್ನು ಖರೀದಿಸಿದ ಬಗ್ಗೆ ದಾಖಲೆ ಪತ್ರಗಳನ್ನು ಒದಗಿಸುವಂತೆ ಕೇಳಿದ್ದರು ಅದರಂತೆ ದಸ್ತಾವೇಜು 1843/2018-19 ರ ಕ್ರಯ ಪತ್ರ ನಿಪಿ-127 ರಂತೆ ನಮೂನೆ-9, 11 ಮತ್ತು 11 ಎ ಮತ್ತು ಹಕ್ಕಪತ್ರಗಳನ್ನು ತನಿಖಾಧಿಕಾರಿಗೆ ವರದಿಯೊಂದಿಗೆ ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 78 ಫ್ರಾಸಾ-73 ಶ್ವೇತಲತಾ, ಪಿಡಿಓ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿಃ 22.02.2019 ರಂದು ಉಡುಪಿಯ ಡಿ.ವೈ.ಎಸ್ಪಿ ಇವರು

ಶಂಕರನಾರಾಯಣ ಗ್ರಾಮದ ಕಟ್ಟೆಮಕ್ಕಿಯಲ್ಲಿರುವ ಮನೆ ಸಂಖ್ಯೆ 5/52 ರ ಕಟ್ಟಡ ಯಾರ ಹೆಸರಿನಲ್ಲಿದೆ ಎಂದು ಮಾಹಿತಿ ಕೋರಿದ್ದು ಆ ಪ್ರಕಾರ ಕಚೇರಿಯಲ್ಲಿರುವ ಡಿಮ್ಯಾಂಡ್ ರಿಜಿಸ್ಟರ್ ಪರಿಶೀಲಿಸಿ ಸದರಿ ಮನೆ ಬೀಚು ಮೊಗವೀರ್ತಿ ಎನ್ನುವವರ ಹೆಸರಿನಲ್ಲಿದೆ ಎಂದು ನಿಪಿ-128 ಹಾಗೂ ನಿಪಿ-129 ರಂತೆ ವರದಿ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 79 ಫ್ರಾಸಾ-74 ಪ್ರವೀಣ್ ನಾಯಕ್ ಉಪನಿಬಂಧಕರು ಸಹಕಾರ ಇಲಾಖೆ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 21.02.2019 ರಂದು ಪೊಲೀಸ್ ಉಪಾಧೀಕ್ಷಕರು ಉಡುಪಿ ಇವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾರಿಕೇರಿ ಯುವಕ ಮಂಡಲ ಕೋಟ ಇದಕ್ಕೆ ಸಂಬಂಧಿಸಿದ ನೊಂದಣಿ ಪ್ರಮಾಣ ಪತ್ರ ಮತ್ತು ಪದಾಧಿಕಾರಿಗಳ ವಿವರನ್ನು ನೀಡುವಂತೆ ಮನವಿ ಸಲ್ಲಿಸಿದ್ದು ಆ ಪ್ರಕಾರ ದಿಃ 06.03.2019 ರಂದು ಷದ್ರಿ ಸಂಘಕ್ಕೆ ಸೇರಿದ ನೊಂದಣಿ ಸರ್ಟಿಫಿಕೇಟ್ ಮತ್ತು ಜ್ಞಾಪನ ಪತ್ರದಲ್ಲಿ ತೋರಿಸಿದ 7 ಜನರ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ನಮೂದಿಸಿರುವ ದಾಖಲೆಯನ್ನು ದೃಢೀಕರಿಸಿ ನಿಪಿ-130 ರಂತೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 80 ಫ್ರಾಸಾ-75 ಆನಂದ ಕುಮಾರ್, ಪಿಡಿಓ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 22.02.2019 ರಂದು ಡಿ.ವೈ.ಎಸ್ಪಿ ಇವರ ಕೋರಿಕೆಯಂತೆ ಹೆಬ್ರಿ ತಾಲೂಕು ಕುಚ್ಚೂರು ಗ್ರಾಮದ ಕಾನ್ಬೆಟ್ಟುಜೆಡ್ಡು ಎಂಬಲ್ಲಿರುವ ಮಂಜುನಾಥ ನಿಲಯದ ಮನೆ ಸಂಖ್ಯೆ 1/108 ಕೃಷ್ಣ ಮರಕಾಲ ಇವರ ಹೆಸರಿನಲ್ಲಿದೆ ಎಂದು ನಿಪಿ-133 ರಂತೆ ಮಾಹಿತಿ

ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 81 ಫ್ರಾಸಾ-76 ಸಂತೋಷ ಪಿಡಿಓ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ದಿಃ 27.02.2019 ರಂದು ಡಿ.ವೈ.ಎಸ್ಪಿ ಉಡುಪಿ ಇವರು ಸಿತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಲ್ಲಂದೂರು ಗ್ರಾಮದ ಕಂಕಳೆ ಎಂಬಲ್ಲಿರುವ ಈರ ಮರಕಾಲ ಈತನಿಗೆ ಸಂಬಂಧಿಸಿದ ಮನೆಯ ದಾಖಲೆಯನ್ನು ನೀಡುವಂತೆ ಕೋರಿದ್ದು ಆ ಪ್ರಕಾರ ಕಚೇರಿಯ ದಾಖಲಾತಿಗಳನ್ನು ಪರಿಶೀಲಿಸಿ ಮನೆ ನಂಬ್ರ:4 ಈರ ಮರಕಾಲ ಈತನ ಹೆಸರಿನಲ್ಲಿದೆ ಎಂದು ಮಾಹಿತಿ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 82 ಫ್ರಾಸಾ-77 ಶಿವಪ್ಪ ಉಪತಹಶೀಲ್ದಾರ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಉಡುಪಿ ಡಿ.ವೈ.ಎಸ್ಪಿ ಇವರು ಈ ಪ್ರಕರಣದಲ್ಲಿ ಸೂರ್ಲಬ್ಬಿ ಗ್ರಾಮದ, ಅಂಚೆ ಮಾದಾಪುರ ಸೋಮವಾರಪೇಟೆ ಇಲ್ಲಿ ವಾಸ ಮಾಡುತ್ತಿರುವ ಜಯಂತಿ ಮತ್ತು ಎನ್.ಪಿ ಮಹೇಶ ಇವರ ವಾಸಸ್ಥಳದ ದೃಢೀಕರಣ ನೀಡುವಂತೆ ಕೇಳಿದ್ದು ಆ ಪ್ರಕಾರ ತಾನು ವಾಸ ಸ್ಥಳದ ದೃಢೀಕರಣ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 83 ಫ್ರಾಸಾ-78 ಗುರುಪ್ರಸಾದ್, ಸಹಾಯಕ ಇಂಜಿನಿಯರ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಬ್ರಹ್ಮಾವರ ವೃತ್ತ ನಿರೀಕ್ಷಕರು ದಿನಾಂಕ 28.01.2019 ರಂದು ಉಡುಪಿ ತಾಲೂಕು ಮಣೂರು ಗ್ರಾಮದ ಚಿಕ್ಕನಕೆರೆಯಲ್ಲಿರುವ ಆಯುಷ್ಮತೆ ಎಂಬ ಹೆಸರಿನ ಮನೆಯ ವಿದ್ಯುತ್ ಮೀಟರ್ ಸಂಖ್ಯೆ ಮತ್ತು ಅದು ಯಾರ ಹೆಸರಿನಲ್ಲಿದೆ ಹಾಗೂ ದಿನಾಂಕ 26.01.2019 ರಂದು ರಾತ್ರಿ 10-30 ಗಂಟೆಯಿಂದ 11-30 ಗಂಟೆಯ

ನಡುವಿನ ಅವಧಿಯಲ್ಲಿ ಸದರಿ ಮನೆಗೆ ವಿದ್ಯುತ್ ಸರಬರಾಜು ಇತ್ತೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಮಾಹಿತಿ ಕೇಳಿದ್ದು ಅದರಂತೆ ಸದರಿ ಮನೆಗೆ ಭೇಟಿ ನೀಡಿ ಪರಿಶೀಲಿಸಿದಾಗ ಅದರ ಮೀಟರ್ ಆರ್.ಆರ್ ಸಂಖ್ಯೆ ಕೆ61745 ಇದ್ದು, ಅದರ ಸಂಪರ್ಕ ಲೋಹಿತ್ ಪೂಜಾರಿ ಈತನ ಹೆಸರಿನಲ್ಲಿತ್ತು ಹಾಗೂ ತಮ್ಮ ಕಚೇರಿಯ ಲಾಗ್ ಬುಕ್ ಅನ್ನು ಪರಿಶೀಲಿಸಿದಾಗ ದಿನಾಂಕ 26.01.2019 ರಂದು ರಾತ್ರಿ 10-30 ರಿಂದ 11-30 ಗಂಟೆಯ ನಡುವೆ ಷದ್ರಿ ಮನೆಗೆ ಇದ್ದ ವಿಧ್ಯುತ್ ಸಂಪರ್ಕದಲ್ಲಿ ಯಾವುದೇ ಅಡಚಣೆ ಇರಲಿಲ್ಲ ಎಂದು ತಾನು ಲಿಖಿತವಾಗಿ ವರದಿ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 84 ಫ್ರಾಸಾ-79 ಆಸ್ಕರ್ ಸಂತೋಷ್, ಸೂಪರಿಂಟೆಂಡೆಂಟ್, ಆರ್ ಟಿ ಓ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ತನಿಖಾಧಿಕಾರಿಯ ಕೋರಿಕೆಯಂತೆ ಕೆಎ-20-ಇಎಂ-8798 ಅಪಾಚಿ ಮೋಟಾರ್ ಸೈಕಲ್, ಕೆಎ-20-ಎಂಸಿ-3925 ಮಾರುತಿ ಸಿಯಾಜ್ ಕಾರು, ಕೆಎ-20-ಎಂಎ-9803 ಮಾರುತಿ ಸ್ವಿಫ್ಟ್ ಕಾರಿನ ಮಾಲೀಕತ್ವದ ದಾಖಲಾತಿಗಳನ್ನು ಒದಗಿಸುವಂತೆ ಕೇಳಿದ್ದರು, ಅದರಂತೆ ಸದರಿ ಕೆಎ-20-ಇಎಂ-8798 ಅಪಾಚಿ ಮೋಟಾರ್ ಸೈಕಲ್ ಸಿ.ಬಿ ಮನೋಜ್, ಕೆಎ-20-ಎಂಸಿ-3925 ಮಾರುತಿ ಸಿಯಾಜ್ ಕಾರು ಅನೀಶ್ ಶೆಟ್ಟಿ ಮತ್ತು ಕೆಎ-20-ಎಂಎ-9803 ಮಾರುತಿ ಸ್ವಿಪ್ಟ್ ಕಾರು ರವೀಂದ್ರ ಜಿ. ಇವರ ಹೆಸರಿನಲ್ಲಿರುತ್ತದೆ ಎಂದು ಈ ಬಗ್ಗೆ ಬಿ ಎಕ್ಸಟ್ರಾಕ್ಟ್ ವರದಿಗಳನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 85 ಫ್ರಾಸಾ-80 ರಾಮಕೃಷ್ಣ ರೈ ಆರ್, ಆರ್.ಟಿ.ಓ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 06.04.2019 ರಂದು ಈ ಪ್ರಕರಣದ ತನಿಖಾಧಿಕಾರಿಯವರು ಕೆಎ-19-ಇಡಿ-0952 ದ್ವಿಚಕ್ರ ವಾಹನ ಮತ್ತು ಕೆಎ-

22-ಇಕ್ಯೂ-7330 ಮೋಟಾರ್ ಸೈಕಲ್ " ಬಿ " ಎಕ್ಸಟ್ರಾಕ್ಟ್‌ನ ದೃಢೀಕೃತ ದಾಖಲೆಗಳನ್ನು ನೀಡುವಂತೆ ಕೋರಿದ್ದು ಆ ಪ್ರಕಾರ ದಾಖಲಾತಿಯನ್ನು ಪರಿಶೀಲಿಸಿದಾಗ ಕೆಎ-19-ಇಡಿ-0952 ದ್ವಿಚಕ್ರ ವಾಹನ ರವಿಚಂದ್ರ ಈತನ ಹೆಸರಿನಲ್ಲಿ, ಕೆಎ-22-ಇಕ್ಯೂ-7330 ಮೋಟಾರ್ ಸೈಕಲ್ ವಿಜೇತ ಈತನ ಹೆಸರಿನಲ್ಲಿರುತ್ತದೆ ಎಂದು ವರದಿ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 86 ಫ್ರಾಸಾ-81 ಜೆ.ಪಿ. ಗಂಗಾಧರ, ಪ್ರಾದೇಶಿಕ ಅಧಿಕಾರಿ ಉಡುಪಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ವಾಹನ ಸಂಖ್ಯೆ ಕೆಎ-19-ಜೆ-0038 ಯಮಹಾ ಮೋಟಾರ್ ಸೈಕಲ್ ನ ಬಿ ಎಕ್ಸಟ್ರಾಕ್ಟ್ ನ್ನು ನೀಡುವಂತೆ ಕೋರಿದ್ದರು. ಕಚೇರಿಯಲ್ಲಿ ದಾಖಲಾತಿಯನ್ನು ಪರಿಶೀಲಿಸಿದಾಗ ಸದರಿ ವಾಹನ ಶ್ರೀನಿವಾಸ ಮೂರ್ತಿ ಎನ್ನುವವರ ಹೆಸರಿನಲ್ಲಿದ್ದು ಈ ಬಗ್ಗೆ ಬಿ ರಿಜಿಸ್ಟರ್ ನ ಎಕ್ಸಟ್ರಾಕ್ಟ್ ನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 87 ಫ್ರಾಸಾ-82 ಸುಧಾಮಣಿ ಸೂಪರಿಂಟೆಂಡೆಂಟ್ ಪ್ರಾದೇಶಿಕ ಸಾರಿಗೆ ಕಚೇರಿ ಉಡುಪಿ ಇವರು ತಮ್ಮ ಸಾಕ್ಷಿ ವಿಚಾರೆಯಲ್ಲಿ ದಿ: 26.02.2019 ರಂದು ಉಡುಪಿಯ ಪೊಲೀಸ್ ಉಪಾಧೀಕ್ಷಕರು ವಾಹನ ಸಂಖ್ಯೆ ಕೆಎ-19-ಎಂಡಿ-1604 ವೋಕ್ಸವ್ಯಾಗನ್ ಕಾರಿನ ಬಿ ರಿಜಿಸ್ಟರ್ ನ ಎಕ್ಸಟ್ರಾಕ್ಟ್ ನ್ನು ನೀಡುವಂತೆ ಕೇಳಿದ್ದರು. ಕಚೇರಿಯಲ್ಲಿ ಸದ್ರಿ ವಾಹನಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ಪರಿಶೀಲಿಸಿದಾಗ ಸದರಿ ವಾಹನ ಹಸೀನ ಮಹಮ್ಮದ್ ನೂರ್ ಎನ್ನುವವರ ಹೆಸರಿನಲ್ಲಿದೆ ಎಂದು ಬಿ ರಿಜಿಸ್ಟರ್ ನ ಎಕ್ಸಟ್ರಾಕ್ಟ್ ನ ಪ್ರತಿಯನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 88 ಫ್ರಾಸಾ-83 ರಮೇಶ ವರ್ಣೇಕರ್ , ಆರ್.ಟಿ.ಓ ಉಡುಪಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಡಿ.ವೈ.ಎಸ್ಪಿ ಉಡುಪಿ ಇವರು ಕೆಎ-20-3-4819 ಮಾರುತಿ ಇಕೋ ವಾಹನದ ಬಗ್ಗೆ ಮಾಹಿತಿ ಕೇಳಿದ್ದು ದಾಖಲಾತಿ ಪರಿಶೀಲಿಸಿದಾಗ ಅದು ಟೂರಿಸ್ಟ್ ಟ್ಯಾಕ್ಸಿ ಆಗಿ ಪರವಾನಿಗೆ ಪಡೆದುಕೊಂಡಿದ್ದು ಅದು ಮಹೇಶ ಕುಮಾರ್ ಈತನ ಮಾಲಿಕತ್ವದಲ್ಲಿ, ಕೆಎ-02-ಎಇ-1677 ಮಹೀಂಧ್ರಾ ಮತ್ತು ಮಹೀಂಧ್ರಾ ಕಂಪೆನಿಯ ಲಘು ಸಾರಿಗೆ ವಾಹನ ಎಂ. ಚಂದ್ರಶೇಖರ ರೆಡ್ಡಿ ಈತನ ಹೆಸರಿನಲ್ಲಿ ಮತ್ತು ಕೆಎ-19-ಸಿ-3118 ಅಟೋ ರಿಕ್ಷಾ ಸಂತೋಷ ಎಂ. ಈತನ ಹೆಸರಿನಲ್ಲಿತ್ತು ಎಂದು ದಾಖಲಾತಿಗಳನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 89 ಫ್ರಾಸಾ-86 ಪ್ರದೀಪ ಕುರುಡೇಕರ, ತಹಶೀಲ್ದಾರ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ದಿನಾಂಕ 18.02.2019 ರಂದು ಹೆಚ್ಚುವರಿ ಮತ್ತು ಸಿವಿಲ್ ನ್ಯಾಯಾಲಯ ಕುಂದಾಪುರ ಇವರು 5, 6, 7, 8 ನೇ ಆರೋಪಿತರಾದ ನಿಮ್ಮ ಗುರುತಿನ ಬಗ್ಗೆ ಕವಾಯತು ಮಾಡಿ ವರದಿ ನೀಡಲು ಆದೇಶಿಸಿದ್ದು ಅದರಂತೆ ದಿನಾಂಕ 18.02.2019 ರಂದು ಉಡುಪಿಯ ಜಿಲ್ಲಾ ಕಾರಾಗೃಹದಲ್ಲಿ ಗುರುತಿನ ಕವಾಯತು ಮಾಡಲು ಸಾಕ್ಷಿದಾರರಾದ ಚಾಸಾ-1 ರಿಂದ 10 ಇವರಿಗೆ ನೋಟಿಸು ಕೊಟ್ಟೆ ಹಾಗೂ ಜಿಲ್ಲಾ ಕಾರಾಗೃಹದ ಅಧೀಕ್ಷಕರಿಗೆ ನೀವು 5 ರಿಂದ 8 ನೇ ಆರೋಪಿತರನ್ನು ಹಾಗೂ ಅದೇ ಸಮ ಪ್ರಾಯದ ಮತ್ತು ಸಮನಾಂತರ ಎತ್ತರ ಇರುವ 7 ಖೈದಿಗಳನ್ನು ಕಾರಾಗೃಹದ ಅಧೀಕ್ಷಕರ ಕಚೇರಿಯಲ್ಲಿ ಕರೆತರಲು ಕೋರಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: ಸುಳ್ಳು

ಪ್ರಶ್ನೆ: 90 ಫ್ರಾಸಾ 86 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ 19.02.2019 ರಂದು ಉಡುಪಿ ಜಿಲ್ಲಾ ಕಾರಾಗೃಹದ ಅಧೀಕ್ಷಕರ ಕೊಠಡಿಯಲ್ಲಿ ನೀವು ಆರೋಪಿತರನ್ನು ಮತ್ತು ನಿಮ್ಮಷ್ಟೆ ಎತ್ತರ ಇರುವ ಇನ್ನು 7 ಜನರನ್ನು ಒಂದೇ ಸಾಲಿನಲ್ಲಿ ನಿಲ್ಲಿಸಿ , ಸಾಕ್ಷಿದಾರಾದ ಚಾಸಾ 1 ರಿಂದ 10 ಇವರಿಗೆ ಬೇರೆ ಬೇರೆಯಾಗಿ ಎರಡು ಸುತ್ತಿನಲ್ಲಿ ನಿಮ್ಮ ಸ್ಥಾನ ಬದಲಾಯಿಸಿ ತೋರಿಸಿದಾಗ, ಚಾಸಾ 1 ರಿಂದ 10, 5 ರಿಂದ 8 ನೇ ಆರೋಪಿತರನ್ನು ಗುರುತಿಸಿ ಘಟನೆ ನಡೆದಾಗ ಅವರನ್ನು ನೋಡಿರುವುದಾಗಿ ಹೇಳಿದರು , ಚಾಸಾ 1 ರಿಂದ 10 ನೀವು ಆರೋಪಿತರನ್ನು ಗುರುತಿಸಿದ ಬಗ್ಗೆ ನಡಾವಳಿಗಳನ್ನು ಬರೆದು ಅದಕ್ಕೆ ಚಾಸಾ 1 ರಿಂದ 10 ಮತ್ತು ನಾನು ಸಹಿ ಮಾಡಿ , ಸದರಿ ನಡಾವಳಿಗಳನ್ನು ತನಿಖಾಧಿಕಾರಿಗೆ ಪೂರೈಸಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ: 91 ಫ್ರಾಸಾ-87 ಭುವನೇಶ್ವರ, ಹಿರಿಯ ವೈಜ್ಞಾನಿಕ ಅಧಿಕಾರಿ, ಎಫ್.ಎಸ್.ಎಲ್ ಬೆಂಗಳೂರು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ದಿನಾಂಕ 01.02.2019 ರಂದು ತನಿಖಾಧಿಕಾರಿಗಳು ಸೀಲು ಮಾಡಿದ A-1, A-2, A-3, A-4, A.5, A.6, A.7, A.8 ಮತ್ತು A.9 ಎನ್ನುವ 9 ವಸ್ತುಗಳನ್ನು ಕಳುಹಿಸಿದ್ದು ಸದರಿ ವಸ್ತುಗಳನ್ನು ಪರೀಕ್ಷೆ ಮಾಡಿದಾಗ A.1, A.4, A.7, A.8, A.9 ರಲ್ಲಿ ರಕ್ತದ ಅಂಶ ಪತ್ತೆಯಾಗಿದ್ದು , ಅದು ಮಾನವ ರಕ್ತದ ''ಬಿ'' ಗುಂಪಿಗೆ ಸೇರಿದ ರಕ್ತವಾಗಿರುತ್ತದೆ ಎಂದು ವರದಿ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 92 ಫ್ರಾಸಾ-87 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ದಿನಾಂಕ 20.02.2019 ರಂದು ತನಿಖಾಧಿಕಾರಿಗಳು ಸೀಲು ಮಾಡಿದ 28 ವಸ್ತುಗಳನ್ನು ಕಳುಹಿಸಿದ್ದು ಸದರಿ 1 ರಿಂದ 28 ವಸ್ತುಗಳನ್ನು

ರಾಸಾಯನಿಕ ಪರೀಕ್ಷೆ ಮಾಡಿದಾಗ, ಸದ್ರಿ ವಸ್ತುಗಳಲ್ಲಿ E1, E2, D1, D2, D3, D4, D5, MP5. MP6. MP8, MP9, E5, V1, V2, V3, V4, V5, V6, V7, V8, V10, V16, D6 ಮತ್ತು D8 ರಲ್ಲಿ ರಕ್ತದ ಅಂಶ ಕಂಡುಬಂದಿದ್ದು, ಅದು ಮಾನವ ಮೂಲದ ರಕ್ತವಾಗಿದ್ದು ''ಬಿ'' ಗುಂಪಿಗೆ ಸೇರಿದ ರಕ್ತವಾಗಿರುತ್ತದೆ ಹಾಗೂ V9, V15 ರಲ್ಲಿದ್ದ ರಕ್ತದ ಕಣಗಳು ನಾಶವಾಗಿದ್ದರಿಂದ ರಕ್ತದ ಗುಂಪು ಮತ್ತು ಅದರ ಮೂಾಲ ಕಂಡುಹಿಡಿಯಲು ಆಗಲಿಲ್ಲ. ಈ ಬಗ್ಗೆ ತಾನು ವರದಿ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 93 ಫ್ರಾಸಾ-88 ಹುಸ್ನಾ ತಬುಸುಮ್, ಹಿರಿಯ ವೈಜ್ಞಾನಿಕ ಅಧಿಕಾರಿ ಬೆಂಗಳೂರು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ದಿನಾಂಕ 20.02.2019 ರಂದು ಸೀಲು ಮಾಡಿದ 8 ವಸ್ತುಗಳನ್ನು ಕಳುಹಿಸಿದ್ದು ಸದರಿ ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿ ವರದಿ ನೀಡಿರುತ್ತೇನೆ. ವಸ್ತು ಸಂಖ್ಯೆ 5 ರಿಂದ 7 ಯತೀಶ್ ಕುಮಾರ್ ಈತನಿಗೆ ಸೇರಿದ್ದು ಅದರಲ್ಲಿ ರಕ್ತದಲ್ಲಿ ಶೇಕಡಾ 77.8 ಎಂಜಿ/100 ಎಂಎಲ್ ಈಥೈಲ್ ಅಲ್ಕೊಹಾಲ್ ಪ್ರಮಾಣ ಕಂಡಬಂದಿತ್ತು ಹಾಗೂ ವಸ್ತು ಸಂಖ್ಯೆ 1 ರಿಂದ 3 ಭರತ್ ಕುಮಾರ್ ಈತನಿಗೆ ಸೇರಿದ್ದು, 4 ಮತ್ತು 8 preservative ಆಗಿದ್ದು ಅದರಲ್ಲಿ ಯಾವುದೇ ತರಹದ ವಿಷಕಾರಿಯಾದ ಅಂಶ ಮತ್ತು ಅಲ್ಕೋಹಾಲ್ ಪ್ರಮಾಣ ಕಂಡುಬಂದಿರುವುದಿಲ್ಲ ಎಂದು ವರದಿ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 94 ಫ್ರಾಸಾ-91 ನಾಗರಾಜ ನೋಡಲ್ ಆಫೀಸರ್ ಬಿ.ಎಸ್.ಎನ್.ಎಲ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 20.02.2019 ರಂದು ಪೊಲೀಸ್ ಅಧೀಕ್ಷಕರು ಮೊಬೈಲ್ ನಂಬ್ರ 9986887447, 8277017777, 8762641432 ಇದರ ಕಸ್ಟಮರ್ ಅಪ್ಲಿಕೇಷನ್ ಫಾರ್ಮ ಮತ್ತು ಕಾಲ್

ಡಿಟೇಲ್ಸ್ ಗಳನ್ನು ನೀಡುವಂತೆ ಕೇಳಿದ್ದು ಅದರಂತೆ ತಾನು ಸದ್ರಿ ಸಂಖ್ಯೆಗಳ ಸಿಡಿಆರ್ ಗಳನ್ನು 65 ಬಿ ಪ್ರಮಾಣ ಪತ್ರಗಳೊಂದಿಗೆ ಪೂರೈಸಿರುತ್ತೇನೆ. ಮೊಬೈಲ್ ನಂಬ್ರ 9986887447 ಇದು 9 ನೇ ಆರೋಪಿಯ ಹೆಸರಿನಲ್ಲಿ, 8277017777, 8762641432 ಈ ಮೊಬೈಲ್ ನಂಬ್ರಗಳು 10 ನೇ ಆರೋಪಿಯ ಹೆಸರಿನಲ್ಲಿದ್ದವು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 95 ಫ್ರಾಸಾ-92 ನರಸಿಂಹ ವನಂ, ನೋಡಲ್ ಆಫೀಸರ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ಉಡುಪಿ ಪೊಲೀಸ್ ಅಧೀಕ್ಷಕರ ಮನವಿಯಂತೆ ಮೊಬೈಲ್ ನಂಬ್ರ 7996090390 ಇದರ ಸಿಡಿಆರ್ ಮತ್ತು ಸಿಎಎಫ್ ಫಾರ್ಮನ್ನು 65 ಬಿ ಪ್ರಮಾಣಪತ್ರದ ಜೊತೆ ನೀಡಿರುತ್ತೇನೆ. ಸದರಿ ಮೊಬೈಲ್ ನಂಬ್ರ 14 ನೇ ಆರೋಪಿಯ ಹೆಸರಿನಲ್ಲಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ 96 ಫ್ರಾಸಾ-95 ರವೀಂದ್ರ ರಾವ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತಾನು ಕೆಎ-22-ಇಕ್ಯೂ-7330 ನೋಂದಣಿ ಸಂಖ್ಯೆಯ ಮೋಟಾರ್ ಸೈಕಲ್ ತನ್ನ ಮಾಲಿಕತ್ವದಾಗಿದ್ದು ಅದನ್ನು ತನ್ನ ಮಗ 14 ನೇ ಆರೋಪಿ ಬಳಸುತ್ತಿದ್ದನು ಈ ಬಗ್ಗೆ ಪೊಲೀಸರು ತನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 97 ಫ್ರಾಸಾ-93 ರೂಪಾ ಆರ್. ಮಹಿಳಾ ಪೊಲೀಸ್ ಪೇದೆ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿಃ 27.01.2019 ರಂದು ಮೇಲಾಧಿಕಾರಿಗಳ ನಿರ್ದೇಶನದಂತೆ ಈ ಪ್ರಕರಣದ ಪ್ರಥಮ ವರ್ತಮಾನ ವರದಿಯನ್ನು ಬೆಳಿಗ್ಗೆ

8-45 ಗಂಟೆಗೆ ನ್ಯಾಯಾಧೀಶರ ಗೃಹ ಕಚೇರಿಗೆ ತಲುಪಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 98 ಫ್ರಾಸಾ-94 ನರಸಿಂಹ ಶೆಟ್ಟಿ, ಪೊಲೀಸ್ ಉಪನಿರೀಕ್ಷಕರು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿಃ 26.01.2019 ರಂದು ರಾತ್ರಿ ಸುಮಾರು 11-30 ಗಂಟೆಗೆ ಠಾಣಾ ಪ್ರಭಾರದಲ್ಲಿದ್ದ ಚಾಸಾ-156 ಹೆಚ್‌ಸಿ ಮೋಹನ್ ಕೋತ್ವಾಲ್ ಕರೆ ಮಾಡಿ ಮಣೂರು ಚಿಕ್ಕನಕೆರೆ ಎಂಬಲ್ಲಿ ಗಲಾಟೆ ಆಗುತ್ತಿದ್ದ ಬಗ್ಗೆ ತಿಳಿಸಿದನು, ತಾನು ಸಿಬ್ಬಂದಿಗಳೊಡನೆ ಘಟನಾ ಸ್ಥಳಕ್ಕೆ ಹೋದಾಗ ಹಲ್ಲೆಯಿಂದ ಗಾಯಗೊಂಡ ಯತೀಶ ಮತ್ತು ಭರತ್ ಎಂಬವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ತಿಳಿಯಿತು. ತಾನು ತಕ್ಷೀರು ಸ್ಥಳದ ಸಂರಕ್ಷಣೆಗೆ ವಾರ್ನಿಂಗ್ ಟೇಪ್ ಅಳವಡಿಸಿ ಸಿಬ್ಬಂದಿಗಳನ್ನು ನೇಮಿಸಿದೆನು. ನಂತರ ಗಾಯಾಳುಗಳನ್ನು ತೆಗೆದುಕೊಂಡು ಹೋದ ಮಣಿಪಾಲ ಆಸ್ಪತ್ರೆಗೆ ಹೋಗಿ ವಿಚಾರಿಸಿದಾಗ ಅವರು ಮೃತಪಟ್ಟಿರುವುದಾಗಿ ತಿಳಿದುಬಂದಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 99 ಫ್ರಾಸಾ-94 ಇವರು ತಮ್ಮ ಮುಂದುವರಿದ ಸಾಕ್ಷಿವಿಚಾರಣೆಯಲ್ಲಿ ಅಲ್ಲಿ ಇದ್ದ ಗಾಯಾಳು ಚಾಸಾ-1 ಲೋಹಿತ್ ಪೂಜಾರಿ ಘಟನೆಯ ಬಗ್ಗೆ ರಾತ್ರಿ 2-30 ಗಂಟೆಗೆ ಫಿರ್ಯಾದಿ ನೀಡಿದ್ದು, ಸದರಿ ದೂರನ್ನು ಸ್ವೀಕರಿಸಿ ರಾತ್ರಿ 3 ಗಂಟೆಗೆ ಠಾಣೆಗೆ ಬಂದು ಠಾಣಾ ಅಪರಾಧ ಕ್ರಮಾಂಕ 15/2019 ಕ್ಕೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ, ಪ್ರಕರಣದ ಬಗ್ಗೆ ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿದೆ. ಸಿಪಿಐ ಉಡುಪಿ ಇವರು ತನಗೆ ಮೃತ ಯತೀಶ್ ಈತನ ಶವದ ಮರಣೋತ್ತರ ಪರೀಕ್ಷೆ ಮಾಡಲು ಆದೇಶಿಸಿದ ಮೇರೆಗೆ ಮಣಿಪಾಲ ಕೆಎಂಸಿ ಆಸ್ಪತ್ರೆ ಹೋಗಿ,

ಪಂಚರಿಗೆ ನೋಟಿಸು ನೀಡಿ ಶವ ಮಹಜರಿಗೆ ಸಹಕರಿಸುವಂತೆ ಕೋರಿಕೊಂಡೆನು. ಪಂಚರ ಸಮಕ್ಷಮ ಮೃತನ ಶವದ ಪಂಚನಾಮೆಯನ್ನು ಬೆಳಿಗ್ಗೆ 9-15 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಮಾಡಿ, ಶವವನ್ನು ರಕ್ತ ಸಂಬಂಧಿಯವರಿಗೆ ಹಸ್ತಾಂತರಿಸಿದೆನು ಹಾಗೂ ಮೃತನ ಅಣ್ಣ ಚಾಸಾ-20 ಮತ್ತು ಚಾಸಾ-21 ಇವರ ಹೇಳಿಕೆಗಳನ್ನು ಪಡೆದುಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ 100 ಫ್ರಾಸಾ-94 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 07.02.2019 ರಂದು ರಾತ್ರಿ 10-15 ಗಂಟೆಗೆ ಪೊಲೀಸ್ ಉಪಾಧೀಕ್ಷಕರು ನೀನು 9 ನೇ ಆರೋಪಿಯನ್ನು ವಶಕ್ಕೆ ಪಡೆದು ಹಾಜುಪಡಿಸಲು ನಿರ್ದೇಶನ ನೀಡಿದ ಮೇರೆಗೆ, ತಾನು ರಾತ್ರಿ 10-30 ಗಂಟೆಗೆ ನೀನು 9 ನೇ ಆರೋಪಿಯನ್ನು ವಶಕ್ಕೆ ಪಡೆದು ಡಿ.ವೈ.ಎಸ್ಪಿ ಇವರ ಮುಂದೆ ವರದಿಯೊಂದಿಗೆ ಹಾಜರುಪಡಿಸಿದೆ. ನಂತರ ತನಿಖಾಧಿಕಾರಿ ನೀವು 9 ನೇ ಅರೋಪಿಯನ್ನು ದಸ್ತಗಿರಿ ಮಾಡಿ ನಿನ್ನ ವಶದಲ್ಲಿದ್ದ ಸ್ಯಾಮ್‌ಸಂಗ್ ಮೊಬೈಲ್ ಅನ್ನು ಪಂಚರ ಸಮಕ್ಷಮ ಮಹಜರು ಮಾಡಿ ಅಮಾನತುಪಡಿಸಿಕೊಂಡರು ಹಾಗೂ ಸದ್ರಿ ಮಹಜರಿಗೆ ತಾನು ಸಹಿ ಮಾರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ101 ಫ್ರಾಸಾ-97 ಸಂಜಯ್ ಬಿ.ಎಸ್. ನೋಡಲ್ ಆಫೀಸರ್, ಭಾರ್ತಿ ಏರ್ಟೆಲ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ಉಡುಪಿ ಎಸ್.ಪಿ ಇವರ ಕೋರಿಕೆಯಂತೆ ಮೊಬೈಲ್ ಸಂಖ್ಯೆಗಳಾದ 9845327447, 7022796408, 9538329777, 9880705263, 6364751106 ಇದರ ದಿನಾಂಕ 01.10.2018 ರಿಂದ 15.02.2019 ರವರೆಗಿನ ಕರೆ ವಿವರಗಳನ್ನು ಮತ್ತು ಕಸ್ಟಮರ್ ಅಪ್ಲಿಕೇಶನ್

ಫಾರ್ಮ್‌ಅನ್ನು 65 ಬಿ ಪ್ರಮಾಣಪತ್ರದೊಡನೆ ಪೂರೈಸಿರುತ್ತೇನೆ. ಮೊಬೈಲ್ ಸಂಖ್ಯೆ 9845327447 ಅದು 9 ನೇ ಆರೋಪಿ ರಾಘವೇಂದ್ರ ಈತನ ಹೆಸರಿನಲ್ಲಿ, ಮೊಬೈಲ್ ಸಂಖ್ಯೆ 7022796408 ಚಾಸಾ -90 ಪ್ರವೀಣ ಮರಕಾಲ ಈತನ ಹೆಸರಿನಲ್ಲಿ, ಮೊಬೈಲ್ ಸಂಖ್ಯೆ 9538329777 10 ನೇ ಆರೋಪಿ ಪವನ್ ಅಮೀನ್ ಹೆಸರಿನಲ್ಲಿ, ಮೊಬೈಲ್ ಸಂಖ್ಯೆ 9880705263 ಚಾಸಾ-87 ಈಕೆಯ ಹೆಸರಿನಲ್ಲಿ ಮತ್ತು 6364751106 14 ನೇ ಆರೋಪಿ ಪ್ರಣವ್ ರಾವ್ ಈತನ ಹೆಸರಿನಲ್ಲಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ102 ಫ್ರಾಸಾ-98 ಅಂಜನ್ ಎಚ್. ಎಸ್., ಮಾಲೀಕರು ಸನ್‌ಸೈನ್ ಟೆಕ್‌ಜೋನ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಆಗುಂಬೆ ಫಾರೆಸ್ಟ್ ಚೆಕ್‌ಪೋಸ್ಟ್ ನಲ್ಲಿ ಅಳವಡಿಸಿದ ಸಿಸಿ ಕ್ಯಾಮೆರಾ ತಮ್ಮ ಸಂಸ್ಥೆಯಿಂದ ಪೂರೈಕೆಯಾಗಿದ್ದು ಅದರ ನಿರ್ವಹಣೆಯನ್ನು ತಮ್ಮ ಸಂಸ್ಥೆಯಿಂದ ಮಾಡಲಾಗುತ್ತದೆ. ಈ ಪ್ರಕರಣದಲ್ಲಿ ತನಿಖಾಧಿಕಾರಿಗಳ ಕೋರಿಕೆಯಂತೆ ದಿನಾಂಕ 27.01.2019 ರ ಆಗುಂಬೆ ಫಾರಸ್ಟ್ ಚೆಕ್‌ಪೋಸ್ಟ್ ನಲ್ಲಿ ಅಳವಡಿಸಿದ ಸಿಸಿ ಕ್ಯಾಮರಾದಲ್ಲಿ ಸೆರೆಯಾದ ದ್ರಶ್ಯಾವಳಿಯನ್ನು ಸಿಡಿ ರೂಪದಲ್ಲಿ ತಯಾರಿಸಿ 65 ಬಿ ಪ್ರಮಾಣಪತ್ರದೊಡನೆ ದಿನಾಂಕ 25.02.2019 ರಂದು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ103 ಫ್ರಾಸಾ-99 ರಾಘವೇಂದ್ರ ಸಿ, ಪೊಲೀಸ್ ಉಪನಿರೀಕ್ಷಕರು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ದಿನಾಂಕ 25.02.2019 ರಂದು ತನಿಖಾಧಿಕಾರಿಯವರು ಆಗುಂಬೆ ಚೆಕ್ ಪೋಸ್ಟ್ ನಲ್ಲಿ ಅಳವಡಿಸಿದ ದಿನಾಂಕ 27.01.2019 ರವರೆಗಿನ ಸಿಸಿ ಟಿವಿ

ಫೂಟೇಜನ್ನು ಸಂಗ್ರಹಿಸಿ ನೀಡಲು ಆದೇಶಿಸಿದ ಮೇರೆಗೆ ತಾನು ದಿನಾಂಕ 25.02.2019 ರಂದು ಅಲ್ಲಿಗೆ ತೆರಳಿ ಅಲ್ಲಿ ಇದ್ದ ಸಿಸಿ ಟಿವಿಯನ್ನು ನಿರ್ವಹಿಸುತ್ತಿದ್ದ ಫ್ರಾಸಾ-98 ಅಂಜನ್ ಅವರನ್ನು ಕರೆಸಿ ಅವರಿಂದ ದಿನಾಂಕ 27.01.2019 ರ ಸಿಸಿ ಟಿವಿ ಫೂಟೇಜ್ ನ ಕಾಪಿಯನ್ನು ಪಡೆದು ವರದಿಯೊಂದಿಗೆ ತನಿಖಾಧಿಕಾರಿ ಮುಂದೆ ಹಾಜರುಪಡಿಸಿದೆ. ತನಿಖಾಧಿಕಾರಿ ಅದನ್ನು ಪಂಚರ ಸಮಕ್ಷಮ ಮಹಜರು ಮಾಡಿ ಅಮಾನತುಪಡಿಸಿಕೊಂಡರು. ಸದರಿ ಸಿಸಿ ಟಿವಿ ಫೂಟೇಜ್ ಅನ್ನು ತನಿಖಾಧಿಕಾರಿ ಲ್ಯಾಪ್ ಟಾಪ್ ಮೂಲಕ ನೋಡಿದಾಗ ದಿನಾಂಕ 27.01.2019 ರಂದು 19:46:16 (7.46) ಗಂಟೆಗೆ ಸಿಲ್ವರ್ ಬಣ್ಣದ ಇಕೋ ಕಾರು, 19:48:34 (7.48) ಗಂಟೆಗೆ ಬಿಳಿ ಬಣ್ಣದ ಸ್ವಿಫ್ಟ್ ಕಾರು, 20:02:22 ಗಂಟೆಗೆ ನೀಲಿ ಬಣ್ಣದ ಸಿಯಾಜ್ ಕಾರು, 20:02:35 ಗಂಟೆಗೆ ಬಿಳಿ ಬಣ್ಣದ ಪೋಲೋ ಕಾರು ರಸ್ತೆಯಲ್ಲಿ ಸಂಚರಿಸಿರುವುದು ಕಂಡುಬಂದಿತು. ತನಿಖಾಧಿಕಾರಿಯವರು ಸದರಿ ಸಿಡಿಯನ್ನು ಪಂಚರ ಸಮಕ್ಷಮ ಮಹಜರು ಮಾಡಿ ಅಮಾನತುಪಡಿಸಿಕೊಂಡರು ಹಾಗೂ ಸದರಿ ಮಹಜರಿಗೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 104 ಫ್ರಾಸಾ-100 ಸಿ. ಕಿರಣ್ ಪೊಲೀಸ್ ನಿರೀಕ್ಷಕರು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ದಿನಾಂಕ 07.02.2019 ರಂದು ಬೆಳಿಗ್ಗೆ ಈ ಪ್ರಕರಣದ ನೀನು 1 ನೇ ಆರೋಪಿ ಮಡಿಕೇರಿಯ ಸೂರ್ಲಬ್ಬಿ ಸ್ಥಳದಲ್ಲಿ ಇರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಎರಡು ಖಾಸಗಿ ವಾಹನದಲ್ಲಿ ಸಿಬ್ಬಂದಿಯವರೊಂದಿಗೆ ಉಡುಪಿಯಿಂದ ಹೊರಟು 11 ಗಂಟೆಗೆ ಮಡಿಕೇರಿಯ ಸೂರ್ಲಬ್ಬಿಯ ಮನೀಷ ಇವರ ಮನೆಗೆ ಹೋದೆವು. ತಮ್ಮ ಕೆಲವು ಸಿಬ್ಬಂದಿಯನ್ನು ಮನೆಯ ಹಿಂಬದಿಗೆ ನಿಲ್ಲಿಸಿ, ಉಳಿದ ಸಿಬ್ಬಂದಿಯೊಂದಿಗೆ ಮನೆಯ ಮುಂದೆ ಹೋಗಿ ವಿಚಾರಿಸಿದಾಗ ಸದ್ರಿ ಮನೆಯಿಂದ ಒಬ್ಬ ವ್ಯಕ್ತಿ ಹೊರಗೆ ಬಂದು ತನ್ನ ಹೆಸರು ಮನೀಷ ಎಂದು

ತಿಳಿಸಿದ್ದು, ಅಷ್ಟರಲ್ಲಿ ಮನೆಯ ಹಿಂಬದಿಯಿಂದ ಇಬ್ಬರು ವ್ಯಕ್ತಿಗಳು ಓಡಿ ಹೋಗಲು ಯತ್ನಿಸಿದಾಗ ಅವರನ್ನು ಸಿಬ್ಬಂದಿಗಳು ಹಿಡಿದುಕೊಂಡರು, ಅವರು 1 ಮತ್ತು 8 ನೇ ಆರೋಪಿತರು ಆಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ105 ಫ್ರಾಸಾ-100 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ 1 ಮತ್ತು 8 ನೇ ಆರೋಪಿತರನ್ನು ವಶಕ್ಕೆ ಪಡೆದು ಆ ಬಗ್ಗೆ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತೇನೆ. ನಂತರ ಅಲ್ಲಿಂದ 2 ಗಂಟೆಗೆ ಹೊರಟು ರಾತ್ರಿ 8 ಗಂಟೆಗೆ ತನಿಖಾಧಿಕಾರಿಯವರ ಮುಂದೆ ವರದಿಯೊಡನೆ ನೀವು 1 ಮತ್ತು 8 ನೇ ಆರೋಪಿತರನ್ನು ಹಾಜರುಪಡಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ106 ಫ್ರಾಸಾ-100 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಮಾಹಿತಿ ಬಂದ ಮೇರೆಗೆ ದಿನಾಂಕ 07.02.2019 ರಂದು ಸಿಬ್ಬಂದಿಯೊಂದಿಗೆ ಎರಡು ಖಾಸಗಿ ವಾಹನದಲ್ಲಿ ರಾತ್ರಿ 9 ಗಂಟೆಗೆ ಉಡುಪಿಯಿಂದ ಹೊರಟು ರಾತ್ರಿ 11-30 ಗಂಟೆಗೆ ಹೊಸನಗರದ ಕಚ್ಚಿಗೆಬೈಲು ಎಂಬಲ್ಲಿರುವ ನೀನು 3 ನೇ ಆರೋಪಿಯ ದೊಡ್ಡಮ್ಮ ಬಾಬಿ ಅಲಿಯಾಸ್ ಇಂದಿರಮ್ಮ ಇವರ ಮನೆಗೆ ರಾತ್ರಿ 12 ಗಂಟೆಗೆ ಹೋಗಿ, ಮನೆಯನ್ನು ಸುತ್ತುವರಿದು, ಬಾಗಿಲು ತಟ್ಟಿದಾಗ ಮನೆಯಿಂದ 3 ವ್ಯಕ್ತಿಗಳು 3, 5 ಮತ್ತು 6 ನೇ ಆರೋಪಿತರು ಹೊರಬಂದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಅವರನ್ನು ಸಿಬ್ಬಂದಿಯ ಸಹಾಯದಿಂದ ಹಿಡಿದು ವಶಕ್ಕೆ ಪಡೆದುಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ107 ಫ್ರಾಸಾ-100 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ಪಂಚರ ಸಮಕ್ಷಮ 3 ನೇ

ಆರೋಪಿಯ ಅಂಗ ಶೋಧನೆಯಿಂದ ಸಿಕ್ಕ ಒಂದು ನೋಕಿಯಾ ಮೊಬೈಲ್, ಮನೆಯ ಶೆಡ್ ನಲ್ಲಿದ್ದ ಕೃತ್ಯಕ್ಕೆ ಬಳಸಲಾಗಿದ್ದ ಮಾರುತಿ ಸ್ವಿಫ್ಟ್ ಕಾರು ಸಂಖ್ಯೆ ಕೆಎ-20-ಎಂಎ-9803 ಅನ್ನು ಹಾಗೂ ನೀವು ಆರೋಪಿತರನ್ನು ದಸ್ತಗಿರಿ ಮಾಡಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ವಶಕ್ಕೆ ಪಡೆದುಕೊಂಡು ಅಲ್ಲಿಂದ ಉಡುಪಿಗೆ ಬಂದು ತನಿಖಾಧಿಕಾರಿಯವರ ಮುಂದೆ ಬೆಳಿಗ್ಗೆ 8 ಗಂಟೆಗೆ ವರದಿಯೊಡನೆ ಹಾಜರುಪಡಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:108 ಫ್ರಾಸಾ-100 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 14.02.2019 ರಂದು ಈ ಪ್ರಕರಣದ 4 ನೇ ಆರೋಪಿ ನೀನು ಬ್ರಹ್ಮಾವರದ ಗುಂಡ್ಮಿ ಬಸ್ ನಿಲ್ದಾಣದಲ್ಲಿದ್ದ ಬಗ್ಗೆ ಮಾಹಿತಿ ಬಂದ ಮೇರೆಗೆ ತಾನು ಸಿಬ್ಬಂದಿಯೊಂದಿಗೆ ಸದರಿ ಸ್ಥಳಕ್ಕೆ ಹೋದಾಗ ಗುಂಡ್ಮಿ ಬಸ್ ನಿಲ್ದಾಣದಲ್ಲಿ ಒಬ್ಬ ವ್ಯಕ್ತಿ ಕುಳಿತುಕೊಂಡಿದ್ದು ಆತನು ತಮ್ಮನ್ನು ನೋಡಿ ಓಡಲು ಯತ್ನಿಸಿದಾಗ ಆತನನ್ನು ಸಿಬ್ಬಂದಿ ಸಹಾಯದಿಂದ ವಶಕ್ಕೆ ಪಡೆದು ವಿಚಾರಿಸಿದಾಗ ಆತ ಹೆಸರು ಮತ್ತು ವಿಳಾಸ ಹೇಳಿದನು. ಆತನನ್ನು ಪಂಚರ ಸಮಕ್ಷಮ ದಸ್ತಗಿರಿ ಮಾಡಿ, ದಸ್ತಗಿರಿ ಮಹಜರು ಮಾಡಿ, ಆತತನ್ನು ಬ್ರಹ್ಮಾವರ ವೃತ್ತ ನಿರೀಕ್ಷಕರ ಕಚೇರಿಗೆ ಕರೆತಂದು ಆತನ ಕಬೂಲಾತಿ ಹೇಳಿಕೆಯನ್ನು ಪಡೆದುಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 109 ಫ್ರಾಸಾ-100 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಕತ್ತಲಾಗಿದ್ದರಿಂದ ಆತನನ್ನು ಬ್ರಹ್ಮಾವರದ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಸೂಕ್ತ ಭದ್ರತೆಯಲ್ಲಿಟ್ಟು, ಮರುದಿನ ಆತನು ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿದಂತೆ ಕೃತ್ಯಕ್ಕೆ ಬಳಸಿದ ಕಬ್ಬಿಣದ ರಾಡ್ ಅನ್ನು ಬಿಸಾಡಿಸಿದ ಸ್ಥಳವನ್ನು ತೋರಿಸುವುದಾಗಿ ಹೇಳಿದಂತೆ, ಆತನು ತಮ್ಮನ್ನು, ಪಂಚರನ್ನು ಬ್ರಹ್ಮಾವರ

ಚೇರ್ಕಾಡಿ ಪೇತ್ರಿ ಸಂತೆಕಟ್ಟೆ ಮಾರ್ಗವಾಗಿ ಹೆಬ್ರಿಗೆ ಹೋಗಿ ಅಲ್ಲಿಂದ ಕುಚ್ಚೂರು ಗ್ರಾಮದ ಕಾನ್ಬೆಟ್ಟುಜೆಡ್ಡು ಎಂಬಲ್ಲಿ ಹಾಡಿಯಲ್ಲಿ ರಾಡ್ ಬಿಸಾಡಿದ ಸ್ಥಳ ಎಂದು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಮಾಡಿ, ನಂತರ ಬೆಳಿಗ್ಗೆ 11 ಗಂಟೆಗೆ 4 ನೇ ಆರೋಪಿಯನ್ನು ವರದಿಯೊಂದಿಗೆ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:110 ಫ್ರಾಸಾ-101 ಮಂಜುನಾಥ ಪೊಲೀಸ್ ನಿರೀಕ್ಷಕರು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಎಸ್.ಪಿ ಉಡುಪಿ ಇವರ ಆದೇಶದಂತೆ ಈ ಪ್ರಕರಣದಲ್ಲಿ ಬ್ರಹ್ಮಾವರ ವೃತ್ತದ ಹೆಚ್ಚುವರಿ ಪ್ರಭಾರ ಕರ್ತವ್ಯ ನಿವರ್ಹಿಸಿದ್ದು ದಿನಾಂಕ 26.01.2019 ರಂದು ತಡರಾತ್ರಿ ಕೋಟಾ ಠಾಣೆಯ ಪಿ.ಎಸ್ಐ ಕರೆ ಮಾಡಿ ಠಾಣಾ ವ್ಯಾಪ್ತಿಯ ಮಣೂರು ಎಂಬಲ್ಲಿ ಜೋಡಿ ಕೊಲೆಯಾದ ಬಗ್ಗೆ ಮಾಹಿತಿ ನೀಡಿದ್ದು, ತಾನು ಅವರಿಗೆ ಘಟನಾ ಸ್ಥಳದಲ್ಲಿ ಸಿಬ್ಬಂದಿಯವರನ್ನು ನೇಮಕ ಮಾಡಿ ಕೃತ್ಯ ನಡೆದ ಸ್ಥಳವನ್ನು ಸಂರಕ್ಷಿಸುವಂತೆ ಮತ್ತು ದೂರು ಪಡೆದು ಪ್ರಕರಣ ಪ್ರಕರಣ ದಾಖಲಿಸುವಂತೆ ಸೂಚನೆ ನೀಡಿದೆನು. ಅದೇ ದಿನ ದಿಃ 27.01.2019 ರಂದು ಪಿಎಸ್ಐ ಇವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು ಮುಂದಿನ ತನಿಖೆಯನ್ನು ಕೈಗೆತ್ತಿಗೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:111 ಫ್ರಾಸಾ-101 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಸಿಬ್ಬಂದಿಯವರ ಜೊತೆಯಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಪಂಚರಿಗೆ ನೋಟಿಸು ಕೊಟ್ಟು ಪಂಚರಾಗಿ ಸಹಕರಿಸಲು ಕೇಳಿಕೊಂಡೆನು. ಪ್ರತ್ಯಕ್ಷ ಸಾಕ್ಷಿ ಫ್ರಾಸಾ-4 ಸುಜಾತ ಘಟನಾ ಸ್ಥಳವನ್ನು ತೋರಿಸಿದ್ದು ಅವರ ಸಮಕ್ಷಮ 3-45 ಗಂಟೆಯಿಂದ ಬೆಳಗ್ಗಿನ 5-45 ಗಂಟೆಯವರೆಗೆ ಘಟನಾ ಸ್ಥಳದ ಮಹಜರನ್ನು ಪಂಚರ ಸಮಕ್ಷಮ ಮಾಡಿ, ಘಟನಾ ಸ್ಥಳದಿಂದ ಮೃತ ಯತೀಶ

ಗಾಯಗೊಂಡು ಮನೆಯ ಸಿಟ್‌ಔಟ್ ನಲ್ಲಿ ಬಿದ್ದಿದ್ದ ಸ್ಥಳದ ರಕ್ತದ ಮಾದರಿ, ಸಿಟ್‌ಔಟ್ ಗೋಡೆಯ ಸಿಮೆಂಟ್ ನ ಮಾದರಿ, ಸಿಟ್‌ಔಟ್ ಮುಂದೆ ಇಂಟರ್‌ಲಾಕ್ ಮೇಲೆ ಮೃತ ಭರತ್ ಬಿದ್ದ ಸ್ಥಳದಿಂದ ರಕ್ತದ ಮಾದರಿ, ಇಂಟರ್ ಲಾಕ್‌ನ ಪುಡಿ, ವುಡ್ ಲ್ಯಾಂಡ್ ಕಂಪೆನಿಯ ಶೂಗಳು, ಎರಡು ಹವಾಯಿ ಚಪ್ಪಲಿಗಳು, ಟ್ರೂಬರ್ಗ ಎಂದು ಬರೆದ ರಟ್ಟಿನ ಬಾಕ್ಸ್ , ಅದರಲ್ಲಿದ್ದ ಹಂಟರ್ ಬ್ಲ್ಯಾಕ್ ಪೋರ್ಟ್ ಕಂಪೆನಿಯ 650 ಎಂಎಲ್ ನ ಸೀಲ್‌ಡ್ ಆದ 9 ಬಿಯರ್ ಬಾಟಲಿ ಗಳನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಸುತ್ತಿ ಅರಗು ಸೀಲು ಮಾಡಿ ಪಂಚರ ಹಾಗೂ ತನ್ನ ಸಹಿ ಇರುವ ಚೀಟಿ ಅಂಟಿಸಿ ಅಮಾನತುಪಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತ ಸುಳ್ಳು

ಪ್ರಶ್ನೆ:112 ಫ್ರಾಸಾ-101 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಮೃತ ಯತೀಶ ಈತನ ಶವಪಂಚನಾಮೆ ಮಾಡಿ ವರದಿ ನೀಡುವಂತೆ ಕೋಟ ಠಾಣೆಯ ಪಿ.ಎಸ್.ಐ ಇವರಿಗೆ ನಿರ್ದೇಶನ ನೀಡಿದೆನು. ದಿನಾಂಕ 27.01.2019 ರಂದು ಕೆಎಂಸಿ ಆಸ್ಪತ್ರೆಯ ಶವಾಗಾರದಲ್ಲಿದ್ದ ಮೃತ ಭರತ್ ಈತನ ಶವದ ಪಂಚನಾಮೆಯನ್ನು ಪಂಚರ ಸಮಕ್ಷಮ ಬೆಳಿಗ್ಗೆ 8 ಗಂಟೆಯಿಂದ 11 ಗಂಟೆಯವರೆಗೆ ಮಾಡಿ, ಫೋಟೋ ತೆಗೆದು, ಪಂಚನಾಮೆಗೆ ಪಂಚರ ಸಹಿಗಳನ್ನು ಪಡೆದುಕೊಂಡೆನು. ನಂತರ ಮೃತ ಭರತ್ ಈತನ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಸಿಬ್ಬಂದಿ ಮೂಲಕ ಕಳುಹಿಸಿಕೊಟ್ಟೆನು ಹಾಗೂ ಸಾಕ್ಷಿದಾರರಾದ ಚಾಸಾ-4 ರಿಂದ 8, 10 ಮತ್ತು ಚಾಸಾ-16 ಇವರ ಹೇಳಿಕೆಗಳನ್ನು ಪಡೆದುಕೊಂಡೆನು. ಕೋಟ ಠಾಣೆಯ ಪಿ.ಎಸ್‌ಐ ಮೃತ ಯತೀಶ ಈತನ ಶವ ಪಂಚನಾಮೆ ಮಾಡಿ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆನು ಹಾಗೂ ಅದೇ ದಿನ ಸಂಜೆ 7 ಗಂಟೆಗೆ ಈ ಪ್ರಕರಣದ

ಮುಂದಿನ ತನಿಖೆಯನ್ನು ಪಿಸಿಐ ಇವರಿಗೆ ವಹಿಸಿಕೊಟ್ಟೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ113 ಫ್ರಾಸಾ-102 ಶ್ರೀಕಾಂತ್ ಕೆ., ಡಿ.ವೈಸ್.ಪಿ ಕುಂದಾಪುರ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 28.01.2019 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-141 ಇವರಿಂದ ಪಡೆದು, ಪರಿಶೀಲಿಸಿ ಸಾಕ್ಷಿದಾರರಾದ ಚಾಸಾ-1, ಚಾಸಾ-8, 9 ಮತ್ತು ಚಾಸಾ-22 ಇವರ ಹೇಳಿಕೆಗಳನ್ನು ಪಡೆದುಕೊಂಡೆನು. ಅದೇ ದಿನ ಗಾಯಾಳು ಚಾಸಾ-1 ಲೋಹಿತ್ ಪೂಜಾರಿ ಈತನ ಗಾಯದ ಪ್ರಮಾಣ ಪತ್ರ, ಮೃತ ಭರತ್ ಮತ್ತು ಯತೀಶ ಇವರ ಮರಣೋತ್ತರ ಪರೀಕ್ಷಾ ವರದಿ ನೀಡುವಂತೆ ಮಣಿಪಾಲದ ಕೆಎಂಸಿ ವೈದ್ಯಾಧಿಕಾರಿಗಳಿಗೆ ಹಾಗೂ ಶಶಿಕುಮಾರ್ ಮತ್ತು ಸಚಿನ್ ಇವರ ಗಾಯ ಪ್ರಮಾಣ ಪತ್ರ ನೀಡುವೆ ಕೋಟ ಸಮುದಾಯ ಅರೋಗ್ಯ ಕೇಂದ್ರ ವೈದ್ಯಾಧಿಕಾರಿಗೆ ಕೋರಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ114 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ತಕ್ಷೀರು ನಡೆದ ಮನೆ ಯಾರ ಹೆಸರಿನಲ್ಲಿದೆ ಎಂಬ ಬಗ್ಗೆ ದಾಖಲೆ ನೀಡುವಂತೆ ಕೋಟಾ ಪಂಚ್ಯಾತ್ ನ ಪಿಡಿಓ ರವರಿಗೆ ಕೋರಿಕೆ ಪತ್ರ, ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸುವಂತೆ ಪಿ.ಡಬ್ಲ್ಯುಡಿ ಅಭಿಯಂತರರಿಗೆ ಕೋರಿಕೆಪತ್ರ ಹಾಗೂ ಮೆಸ್ಕಾಂನ ಶಾಖಾಧಿಕಾರಿಯವರಿಗೆ ಘಟನೆ ನಡೆದ ದಿನ ಘಟನಾ ಸ್ಥಳದಲ್ಲಿ ವಿದ್ಯುತ್ ಸರಬರಾಜು ಇತ್ತೋ ಇಲ್ಲವೋ ಎಂದು ವರದಿ ನೀಡುವಂತೆ ಕೋರಿಕೆ ಪತ್ರ ಸಲ್ಲಿಸಿದೆನು. ನಂತರ ಮುಂದಿನ ತನಿಖೆಯನ್ನು ಮೇಲಾಧಿಕಾರಿಯವರ ಆದೇಶದಂತೆ ಚಾಸಾ-143 ಇವರಿಗೆ ವಹಿಸಿಕೊಟ್ಟೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:115 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ತನಿಖಾಧಿಕಾರಿಯವರು ತನಿಖೆಗೆ ಸಹಕರಿಸಲು ನಿರ್ದೇಶನ ನೀಡಿದ್ದು ಅದರಂತೆ ದಿನಾಂಕ 08.02.2019 ರಂದು ಡಿಸಿಐಬಿ ಇನ್ಸಪೆಕ್ಟರ್ 3, 5 ಮತ್ತು 6 ನೇ ಆರೋಪಿತರಾದ ನಿಮ್ಮನ್ನು ದಸ್ತಗಿರಿ ಮಾಡಿ, ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿ ನಂತರ ಮುಂದಿನ ಕ್ರಮಕ್ಕಾಗಿ ತನ್ನ ಮುಂದೆ ಹಾಜರುಪಡಿಸಿದ್ದರು. ತಾನು ದಸ್ತಗಿರಿ ಕ್ರಮ ಪಾಲಿಸಿ, ವಿಚಾರಣೆ ಮಾಡಿ ನಿಮ್ಮ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:116 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನೀನು 3 ನೇ ಆರೋಪಿ ನಿನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತನ್ನ ಜೊತೆ ಬಂದರೆ ತಾನು ಕೊಲೆ ಮಾಡಲು ಉಪಯೋಗಿಸಿದ ತಲವಾರು, 5 ಮತ್ತು 6 ನೇ ಆರೋಪಿತರಾದ ನೀವು ನಿಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಕೊಲೆ ಮಾಡಲು ಉಪಯೋಗಿಸಿದ ರಾಡ್ ಅನ್ನು ಇಟ್ಟಿರುವ ಸ್ಥಳ ಹಾಗೂ ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಯನ್ನು ಇಟ್ಟಿರುವ ಸ್ಥಳ ಹಾಗೂ ಹೊಸ ಬಟ್ಟೆಗಳನ್ನು ಖರೀದಿಸಿದ ಅಂಗಡಿಯನ್ನು ತಮ್ಮ ಜೊತೆಯಲ್ಲಿ ಬಂದರೆ ತೋರಿಸುವುದಾಗಿ ಹೇಳಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:117 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 08.02.2019 ರಂದು 3, 5 ಮತ್ತು 6 ನೇ ಅರೋಪಿತರಾದ ನೀವು ಉಪಯೋಗಿಸುತ್ತಿದ್ದ ಕಾರು ಕೆಎ-20-ಎಂಎ-9803 ಮತ್ತು ಸಿಮ್ ಇಲ್ಲದ ಒಂದು ನೋಕಿಯೋ ಮೊಬೈಲ್ ಅನ್ನು ಡಿಸಿಐಬಿ ಇನ್ಸಪೆಕ್ಟರ್ ತನ್ನ ಮುಂದೆ ವರದಿಯೊಂದಿಗೆ ಹಾಜರುಪಡಿಸಿದ್ದು ತಾನು ಅವರನ್ನು ತನಿಖಾಧಿಕಾರಿ ಚಾಸಾ-143 ಇವರ ಮುಂದೆ ಹಾಜರುಪಡಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:118 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 09.02.2019 ರಂದು ನೀನು 3 ನೇ ಆರೋಪಿ ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿದಂತೆ, ಪಂಚರಿಗೆ ನೋಟಿಸು ಕೊಟ್ಟು ಪಂಚರಾಗಿ ಸಹಕರಿಸಲು ಕೇಳಿಕೊಂಡೆನು, ನೀನು 3 ನೇ ಆರೋಪಿ, ಸಿಬ್ಬಂದಿಗಳು ಹಾಗೂ ಪಂಚರನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು 3 ನೇ ಆರೋಪಿ ತೋರಿಸಿದಂತೆ ಬ್ರಹ್ಮಾವರ ತಾಲೂಕು ಕುಮ್ರಗೋಡು ಗ್ರಾಮದ ಸೂಲಕುದ್ರು ಜಾಗೆಗೆ ಹೋಗಿ ಮಾಬುಕಳ ಹೊಳಗೆ ಹೋಗುವ ದಾರಿಯಲ್ಲಿ ಇದ್ದ ಪೊದೆಗೆ ಕರೆದುಕೊಂಡು ಹೋಗಿ ಅಲ್ಲಿ ಕೃತ್ಯಕ್ಕೆ ಉಪಯೋಗಿಸಿದ್ದ ತಲವಾರನ್ನು ತೆಗೆದು ಹಾಜರುಪಡಿಸಿದೆ, ಅದರಲ್ಲಿ ರಕ್ತದ ಕಲೆಗಳು ಇದ್ದವು. ಅದನ್ನು ಪಂಚರ ಎದುರಿಗೆ ಮಹಜರು ಮಾಡಿ, ಬಿಳಿ ಬಟ್ಟೆಯಲ್ಲಿ ಸುತ್ತಿ , ಹೊಲಿದು, ಮೊಹರು ಹಾಕಿ ಅಮಾನತುಪಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:119 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ನೀನು 3 ನೇ ಆರೋಪಿ, 5 ಮತ್ತು 6 ನೇ ಆರೋಪಿತರಾದ ನೀವು ಕೃತ್ಯಕ್ಕೆ ಉಪಯೋಗಿಸಿದ್ದ ರಾಡ್ ಗಳನ್ನು ತೆಗೆದು ತೋರಿಸಿದ್ದು ಅದರಲ್ಲಿ ರಕ್ತದ ಕಲೆಗಳು ಇದ್ದವು. ಸದರಿ ರಾಡ್ ಗಳನ್ನು ಸಹ ಪಂಚರ ಸಮಕ್ಷಮ ಅದೇ ಪಂಚನಾಮೆ ಅಡಿಯಲ್ಲಿ ಮಹಜರು ಮಾಡಿ, ಬಿಳಿ ಬಟ್ಟೆಯಲ್ಲಿ ಸುತ್ತಿ , ಹೊಲಿದು, ಮೊಹರು ಹಾಕಿ ಅಮಾನತುಪಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:120 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಕಚೇರಿಗೆ ವಾಪಾಸು ಬಂದು 5 ಮತ್ತು 6 ನೇ ಆರೋಪಿತರಾದ ನೀವು ಕೃತ್ಯಕ್ಕೆ ಉಪಯೋಗಿಸಿದ್ದ ಆಯುಧವನ್ನು ಬಿಸಾಡಿದ ಸ್ಥಳವನ್ನು ತೋರಿಸುವುದಾಗಿ

ಹೇಳಿದ್ದರಿಂದ ಪಂಚರಿಗೆ ನೋಟಿಸು ಕೊಟ್ಟು ಅವರನ್ನು ಬರಮಾಡಿಕೊಂಡೆನು. ನಂತರ ತಾನು, ಪಂಚರು ಮತ್ತು 5 ನೇ ಆರೋಪಿಯನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಆತ ತೋರಿಸಿದಂತೆ ಬ್ರಹ್ಮಾವರ ತಾಲೂಕು ಕುಮ್ರಗೋಡು ಗ್ರಾಮದ ಸೂಲ್‌ಕುದ್ರು ಜಾಗಕ್ಕೆ ಕರೆದುಕೊಂಡು ಹೋಗಿ ಮಾಬುಕಳ ಹೊಳೆಗೆ ಹೋಗುವ ದಾರಿಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಆಯುಧಗಳನ್ನು ಎಸೆದ ಸ್ಥಳ ಎಂದು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಮಾಡಿ, ಮಹಜರಿಗೆ ಪಂಚರ ಸಹಿ ಪಡೆದುಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:121 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಕಚೇರಿಗೆ ವಾಪಾಸು ಬಂದು ನೀನು 6 ನೇ ಆರೋಪಿ ನೀಡಿದ ಸ್ವಇಚ್ಛಾ ಹೇಳಿಕೆಯಂತೆ ತಾನು, ಪಂಚರು ಮತ್ತು 6 ನೇ ಆರೋಪಿಯನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಆತ ತೋರಿಸಿದಂತೆ ಬ್ರಹ್ಮಾವರ ತಾಲೂಕು ಕುಮ್ರಗೋಡು ಗ್ರಾಮದ ಸೂಲ್‌ಕುದ್ರು ಜಾಗಕ್ಕೆ ಕರೆದುಕೊಂಡು ಹೋಗಿ ಮಾಬುಕಳ ಹೊಳೆಗೆ ಹೋಗುವ ದಾರಿಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಆಯುಧಗಳನ್ನು ಎಸೆದ ಸ್ಥಳ ಎಂದು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಮಾಡಿ ಪಂಚರ ಸಹಿ ಪಡೆದುಕೊಂಡೆನು. ನಂತರ ವಶಪಡಿಸಿಕೊಂಡ ಆಯುಧ, ಮಹಜರು ಮತ್ತು ಸ್ವಇಚ್ಛಾ ಹೇಳಿಕೆಗಳನ್ನು ವರದಿಯೊಂದಿಗೆ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:122 ಪ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 10-02-2019 ರಂದು ತನಿಖಾಧಿಕಾರಿ ನ್ಯಾಯಾಲಯಕ್ಕೆ ನೀನು 3 ನೇ ಹಾಜರುಪಡಿಸಿ ಪೊಲೀಸ್ ವಶಕ್ಕೆ ನೀಡಲು ಮನವಿ ಸಲ್ಲಿಸಿದ್ದು, ನ್ಯಾಯಾಲಯದ ಆದೇಶದಂತೆ 3 ನೇ ಆರೋಪಿಯನ್ನು ತನಿಖಾಧಿಕಾರಿ ಪೊಲೀಸ್ ವಶಕ್ಕೆ ಪಡೆದುಕೊಂಡು ತನಿಖೆಯ ಸಲುವಾಗಿ ತನ್ನ ವಶಕ್ಕೆ ನೀಡಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:123 ಪ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನೀನು 3 ನೇ ಆರೋಪಿ ಕೊಟ್ಟ ಸ್ವಇಚ್ಛಾ ಹೇಳಿಕೆಯಂತೆ, ಪಂಚರಿಗೆ ನೋಟಿಸು ಕೊಟ್ಟು ಪಂಚರಾಗಿ ಸಹಕರಿಸಲು ಕೇಳಿಕೊಂಡೆನು. ನಂತರ ಪಂಚರು, ತಾನು ಮತ್ತು ಸಿಬ್ಬಂದಿಯೊಂದಿಗೆ ದಿನಾಂಕ 10-02-2019 ರಂದು ಇಲಾಖಾ ಜೀಪ್ ನಲ್ಲಿ ನೀನು 3 ನೇ ಆರೋಪಿ ತೋರಿಸಿದಂತೆ ಹೊಸನಗರ ತಾಲೂಕು ಕಜಿಕೆ ಬೈಲು ಇಂದಿರಾ ಯಾನೆ ಬಾಬಿ ಇವರ ಮನೆಗೆ ಹೋದೆವು ಅಲ್ಲಿ 3 ನೇ ಆರೋಪಿ ತಮ್ಮ ಹಾಗೂ ಪಂಚರ ಸಮಕ್ಷಮ ಒಂದು ಶರ್ಟ್ ಮತ್ತು ಪ್ಯಾಂಟನ್ನು ಹಾಜರುಪಡಿಸಿದ್ದು ಅದನ್ನು ಮಹಜರು ಮಾಡಿ ಅಮಾನತುಪಡಿಸಿಕೊಂಡೆನು ಹಾಗೂ ಸ್ಥಳದಲ್ಲಿದ್ದ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡು ವರದಿಯೊಂದಿಗೆ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:124 ಪ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 12-02-2019 ರಂದು ನೀನು 3 ನೇ ಆರೋಪಿ ನೀಡಿದ ಸ್ವಇಚ್ಛಾ ಹೇಳಿಕೆಯಂತೆ ಪಂಚರಿಗೆ ಪಂಚನಾಮೆಗೆ ಸಹಕರಿಸಲು ನೋಟಿಸು ಕೊಟ್ಟು ಅವರನ್ನು ಬರಮಾಡಿಕೊಂಡು, ನಂತರ 3 ನೇ ಆರೋಪಿ ಹೇಳಿದಂತೆ ಪಂಚರೊಂದಿಗೆ ಇಲಾಖಾ ಜೀಪ್ ನಲ್ಲಿ ಸಾಗರ ತಾಲೂಕು ಆನಂದಪುರ ಎಂಬಲ್ಲಿರುವ ಶಂಕರ ನಾಯ್ಕ ಎಂಬವರಿಗೆ ಸೇರಿದ ಶ್ರೀ ರಾಮ್ ಕ್ಲಾತ್

ಸ್ಟೋರ್ ಅಂಗಡಿಗೆ ಕರೆದುಕೊಂಡು ಹೋಗಿ ಅದೇ ಅಂಗಡಿಯಲ್ಲಿ ಹೊಸ ಬಟ್ಟೆಗಳನ್ನು ಖರೀದಿ ಮಾಡಿದ ಬಗ್ಗೆ ಹೇಳಿದ ಮೇರೆಗೆ, ಪಂಚರ ಸಮಕ್ಷಮ ಸದರಿ ಅಂಗಡಿಯಲ್ಲಿ ಮಹಜರು ಮಾಡಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:125 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ನೀವು 3, 5 ಮತ್ತು 6 ನೇ ಆರೋಪಿತರನ್ನು ವರದಿಯೊಂದಿಗೆ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದೆ. ದಿನಾಂಕ 14-02-2019 ರಂದು ನೀನು 2 ನೇ ಆರೋಪಿ ತೆಕ್ಕಟ್ಟೆಯಲ್ಲಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಸದರಿ ಸ್ಥಳಕ್ಕೆ ಸಂಜೆ 4-45 ಗಂಟೆಗೆ ಹೋಗಿ ಪಂಚರ ಸಮಕ್ಷಮ ನೀನು 2 ನೇ ಆರೋಪಿಯನ್ನು ದಸ್ತಗಿರಿ ಮಾಡಿ, ತನ್ನ ಕಚೇರಿಗೆ ಬಂದು ಆತ ನೀಡಿದ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:126 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನೀನು 2 ನೇ ಆರೋಪಿ ನೀಡಿದ ಸ್ವಇಚ್ಛಾ ಹೇಳಿಕೆಯಲ್ಲಿ ತನ್ನೊಂದಿಗೆ ಬಂದಲ್ಲಿ ತಾನು ಕೊಲೆ ಮಾಡಲು ಉಪಯೋಗಿಸಿದ ತಲವಾರು, ಆ ಸಮಯದಲ್ಲಿ ಧರಿಸಿದ್ದ ಬಗ್ಗೆ ಮತ್ತು ಕೃತ್ಯ ಸ್ಥಳದಿಂದ ಪರಾರಿಯಾಗಲು ಬಳಸಿದ ಪಿಕಪ್ ವಾಹನವನ್ನು ಇಟ್ಟ ಸ್ಥಳವನ್ನು ತೋರಿಸುವುದಾಗಿ ಹೇಳಿರುತ್ತೀಯಾ. ನಂತರ ನೀನು 2 ನೇ ಆರೋಪಿಯನ್ನು ವರದಿಯೊಂದಿಗೆ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:127 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 16.02.2019 ರಂದು ತನಿಖಾಧಿಕಾರಿ ನ್ಯಾಯಾಲಯಕ್ಕೆ ನೀನು 2 ನೇ ಹಾಜರುಪಡಿಸಿ ಪೊಲೀಸ್ ವಶಕ್ಕೆ ನೀಡಲು ಮನವಿ ಸಲ್ಲಿಸಿದರು. ನ್ಯಾಯಾಲಯದ ಆದೇಶದಂತೆ 2 ನೇ ಆರೋಪಿಯನ್ನು ತನಿಖಾಧಿಕಾರಿ ಪೊಲೀಸ್ ವಶಕ್ಕೆ ಪಡೆದುಕೊಂಡು ತನಿಖೆಯ ಸಲುವಾಗಿ ತನ್ನ ವಶಕ್ಕೆ ಹಸ್ತಾಂತರಿಸಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:128 ಫ್ರಾಸಾ-102 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನೀನು 2 ನೇ ಆರೋಪಿ ನೀಡಿದ ಸ್ವಇಚ್ಛಾ ಹೇಳಿಕೆಯ ಆಧಾರದ ಮೇಲೆ ಪಂಚರಿಗೆ ನೋಟಿಸು ಕೊಟ್ಟು ಪಂಚರಾಗಿ ಸಹಕರಿಸಲು ಕೋರಿಕೊಂಡೆನು. ನಂತರ ನೀನು 2 ನೇ ಆರೋಪಿ, ಪಂಚರು ಮತ್ತು ಸಿಬ್ಬಂದಿಯವರನ್ನು ಕರೆದುಕೊಂಡು ನೀನು 2 ನೇ ಆರೋಪಿ ಹೇಳಿದಂತೆ ಕುಂದಾಪುರ ತಾಲೂಕು ಅಜ್ರಿ ಗ್ರಾಮದ ಮಠಮಕ್ಕಿ ಎಂಬಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿ ನಿಂತಿದ್ದ ಪಿಕಪ್ ವಾಹನ ಕೆಎ-02-ಎಇ-1677 ಅನ್ನು ತೋರಿಸಿ ಅದರಲ್ಲಿ ಪರಾರಿಯಾಗಿರುವುದಾಗಿ ಹೇಳಿದೆ ಹಾಗೂ ಸದರಿ ವಾಹನದ ಚಾಲಕನ ಹಿಂಬದಿಯ ಸೀಟಿನ ಕೆಳಗೆ ಇಟ್ಟಿದ್ದ ಕೃತ್ಯ ಸಮಯ ಧರಿಸಿದ್ದ ಬಟ್ಟೆಗಳು, ಮತ್ತು ವಾಹನದ ಎಡಭಾಗದ ಸೀಟಿನ ಕೆಳಗೆ ಇಟ್ಟಿದ್ದ ಕೃತ್ಯಕ್ಕೆ ಉಪಯೋಗಿಸಿದ್ದ ತಲವಾರನ್ನು ಹಾಜರುಪಡಿಸಿದ್ದು ಅವುಗಳನ್ನು ಪಂಚರ ಸಮಕ್ಷಮ ಮಹಜರು ಮಾಡಿ ಅಮಾನತುಪಡಿಸಿಕೊಂಡೆ. ನಂತರ ವಶಪಡಿಸಿಕೊಂಡ ಬೊಲೆರೋ ವಾಹನ, ಬಟ್ಟೆಗಳು, ಒಂದು ತಲವಾರು ಹಾಗೂ ನೀನು 2 ನೇ ಅರೋಪಿಯನ್ನು ವರದಿಯೊಂದಿಗೆ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:129 ಫ್ರಾಸಾ-104 ಟಿ.ಆರ್. ಜೈ ಶಂಕರ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿಃ 26.01.2019 ರಂದು ರಾತ್ರಿ 11-50 ಗಂಟೆಗೆ ಕೋಟ ಠಾಣೆಯ ಪಿ.ಎಸ್ಐ ಇವರು ಕರೆ ಮಾಡಿ ಕೋಟ ಠಾಣಾ ವ್ಯಾಪ್ತಿಯ ಮಣೂರು ಗ್ರಾಮದ ಚಿಕ್ಕನಕೆರೆ ಎಂಬಲ್ಲಿ ಚಾಸಾ-1 ಲೋಹಿತ್ ಈತನ ಮನೆಯ ಮುಂಭಾಗದಲ್ಲಿ ಎರಡು ಗುಂಪುಗಳ ನಡುವೆ ತೀವ್ರತರವಾದ ಹೊಡೆದಾಟ ಆಗಿ, ಭರತ್ ಮತ್ತು ಯತೀಶ ಎನ್ನುವವರನ್ನು ಚಿಕಿತ್ಸೆಗಾಗಿ ಬ್ರಹ್ಮಾವರದ ಮಹೇಶ ಆಸ್ಪತ್ರೆ ಮತ್ತು ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಾಗಿ ತಿಳಿಸಿದ ಮೇರೆಗೆ ತಾನು ತಕ್ಷಣ ಘಟನಾ ಸ್ಥಳಕ್ಕೆ ಭೇಟಿ ನೀಡಿ ಆ ಸಮಯದಲ್ಲಿ ಘಟನಾ ಸ್ಥಳದಲ್ಲಿದ್ದ ಚಾಸಾ-1 ಈತನ ಹೆಂಡತಿ ಮತ್ತು ಆತನ ತಾಯಿ ಸ್ಥಳದಲ್ಲಿದ್ದರು, ಆ ಸಮಯ ಅವರು ಅಘಾತಕ್ಕೆ ಒಳಪಟ್ಟು ದೂರು ಕೊಡುವ ಪರಿಸ್ಥಿತಿಯಲ್ಲಿ ಇರದ ಕಾರಣ ತಾನು ಪಿಎಸ್ಐ ರವರಿಗೆ ಗಾಯಾಳುಗಳನ್ನು ಸಂಪರ್ಕಿಸಿ ದೂರು ಪಡೆಯುವಂತೆ ನಿರ್ದೇಶನ ನೀಡಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:130 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಬ್ರಹ್ಮಾವರದ ಪ್ರಭಾರ ಇನ್ಸಪೆಕ್ಟರ್ ಗೆ ಗಾಯಾಳುಗಳನ್ನು ಸಂಪರ್ಕಿಸಿ ತನಿಖೆಯನ್ನು ಮುಂದುವರಿಸುವಂತೆ ತಿಳಿಸಿ, ನಂತರ ಆಸ್ಪತ್ರೆಗೆ ಭೇಟಿ ನೀಡಿದೆ. ಗಾಯಾಳುಗಳಾದ ಭರತ್ ಮತ್ತು ಯತೀಶ್ ಆ ಸಮಯದಲ್ಲಿ ಮೃತಪಟ್ಟ ಬಗ್ಗೆ ಗೊತ್ತಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:131 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 28.01.2019 ರಂದು ಎಸ್.ಪಿ ಉಡುಪಿ ಇವರ ಆದೇಶದಂತೆ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-142 ಇವರಿಂದ ಪಡೆದು ಕಡತವನ್ನು ಪರಿಶೀಲಿಸಿದೆನು. ದಿನಾಂಕ 29.01.2019 ರಂದು ಎಸ್ಪಿ

ಉಡುಪಿ ಇವರು ತನಿಖಾ ತಂಡವನ್ನು ರಚಿಸುವಂತೆ ಆದೇಶ ಮಾಡಿದ್ದು ಅದರಂತೆ ತನಿಖಾ ತಂಡವನ್ನು ರಚಿಸಿ ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಸಾಕ್ಷಿದಾರರಾದ ಚಾಸಾ-28 ರಿಂದ 31 ಇವರ ಹೇಳಿಕೆಗಳನ್ನು ಪಡೆದುಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ132 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 31.01.2019 ರಂದು ತನಿಖಾ ತಂಡದ ಎಲ್ಲ ಅಧಿಕಾರಿಗಳನ್ನು ಕರೆಸಿ ತನಿಖೆಗೆ ಸಂಬಂಧಿಸಿದಂತೆ ಅರೋಪಿತರನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಸೂಚಿಸಿದೆ. ದಿನಾಂಕ 01.02.2019 ರಂದು ಘಟನಾ ಸ್ಥಳದಿಂದ ಅಮಾನತುಪಡಿಸಿಕೊಂಡಿದ್ದ ಸ್ವತ್ತುಗಳನ್ನು ಆರ್.ಎಫ್.ಎಸ್.ಎಲ್ ಮಂಗಳೂರಿಗೆ ಕಳುಹಿಸಿಕೊಡಲು ಸಿಪಿಐ ಇವರಿಗೆ ಸೂಚಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ133 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 05.02.2019 ರಂದು ಕೋಟ ಶಾಖೆಯ ಮೆಸ್ಕಾಂ ಅಧಿಕಾರಿ ಚಾಸಾ-94 ಇವರಿಂದ ಘಟನೆ ನಡೆದ ದಿನ 26.01.2019 ರಂದು ರಾತ್ರಿ 10 ರಿಂದ 11-30 ಗಂಟೆಯವರೆಗೆ ವಿಧ್ಯುತ್ ಸಂಪರ್ಕದಲ್ಲಿ ಯಾವುದೇ ಅಡಚಣೆ ಇರಲಿಲ್ಲ ಎಂದು ಹಾಗೂ ಮೀಟರ್ ಆರ್.ಆರ್ ನಂಃ ಕೆ61745 ಚಾಸಾ-1 ಈತನ ಹೆಸರಿನಲ್ಲಿತ್ತು ಎನ್ನುವ ಬಗ್ಗೆ ದಾಖಲಾತಿಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ134 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 06-02-2019 ರಂದು ಚಾಸಾ-1 ರಿಂದ 10 ಇವರ

ಹೇಳಿಕೆಗಳನ್ನು ಕಲಂ 164 ಅಡಿಯಲ್ಲಿ ದಾಖಲಿಸುವಂತೆ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು. ದಿನಾಂಕ 07-02-2019 ರಂದು ಚಾಸಾ-139 ಕಿರಣ್ ಡಿಸಿಐಬಿ ಇನ್ಸಪೆಕ್ಟರ್ ಇವರು ನೀವು 1 ಮತ್ತು 8 ನೇ ಆರೋಪಿತರಾದ ನಿಮ್ಮನ್ನು ಮಡಿಕೇರಿಯ ಸೂರ್ಲಬ್ಬಿ ಎಂಬಲ್ಲಿರುವ ಮನೀಷ ಈತನ ಮನೆಯಿಂದ ದಸ್ತಗಿರಿ ಮಾಡಿ ವರದಿಯೊಂದಿಗೆ ತನ್ನ ಮುಂದೆ ಹಾಜರುಪಡಿಸಿದ್ದು, ತಾನು ಅವರನ್ನು ವಿಚಾರಣೆ ಮಾಡಿ ಅವರ ಸ್ವಇಚ್ಛಾ ಹೇಳಿಕೆಗಳನ್ನು ದಾಖಲಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:135 ಪ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ 1 ಮತ್ತು 8 ನೇ ಅರೋಪಿತರಾದ ನೀವು ನಿಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಆಯುಧಗಳು, ವಾಹನಗಳು, ಕೃತ್ಯ ನಡೆದ ಸ್ಥಳ, ತಲೆಮರೆಸಿಕೊಂಡಿರುವ ಜಾಗ, ಕೃತ್ಯದಲ್ಲಿ ಭಾಗಿಯಾಗಿದ್ದ ಇತರೇ ಆರೋಪಿತರ ಮಾಹಿತಿ ಹಾಗೂ ಕೃತ್ಯಕ್ಕೆ ಸಂಚು ರೂಪಿಸಿದ ಸ್ಥಳವನ್ನು ತೋರಿಸುವುದಾಗಿ ತಿಳಿಸಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:136 ಪ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಕೋಟ ಠಾಣೆಯ ಪಿ.ಎಸ್ಐ ಚಾಸಾ-136 ಇವರಿಗೆ 9 ನೇ ಆರೋಪಿಯನ್ನು ವಶಕ್ಕೆ ಪಡೆದು ಹಾಜರುಪಡಿಸುವಂತೆ ನಿರ್ದೇಶನ ನೀಡಿದ ಮೇರೆಗೆ ಅವರು ಅದೇ ದಿವಸ ರಾತ್ರಿ 10-30 ಗಂಟೆಗೆ ನೀನು 9 ನೇ ಆರೋಪಿಯನ್ನು ವಶಕ್ಕೆ ಪಡೆದು ರಾತ್ರಿ 11-30 ಗಂಟೆಗೆ ವರದಿಯೊಂದಿಗೆ ತನ್ನ ಮುಂದೆ ಹಾಜರುಪಡಿಸಿದರು. ತಾನು ಪಂಚರನ್ನು ಠಾಣೆಗೆ ಕರೆಸಿ ಅವರ ಸಮಕ್ಷಮ ನೀನು 9 ನೇ ಆರೋಪಿಯನ್ನು ದಸ್ತಗಿರಿ ಮಾಡಿ, ಅಂಗ ಶೋಧನೆ ಮಾಡಿದಾಗ ಸಿಕ್ಕ ಕಪ್ಪು ಬಣ್ಣದ ಸ್ಯಾಮಸಂಗ್ ಮೊಬೈಲ್ ಅನ್ನು ಪಂಚರ

ಸಮಕ್ಷಮ ಮಹಜರು ಮಾಡಿ ಅಮಾನತುಪಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:137 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 08-02-2019 ರಂದು ಚಾಸಾ-139 ಕಿರಣ್ ಇವರು ನೀವು 3, 5 ಮತ್ತು 6 ನೇ ಆರೋಪಿತರನ್ನು ವಶಕ್ಕೆ ಪಡೆದು ವರದಿ ಮತ್ತು ಸ್ವತ್ತಿನೊಂದಿಗೆ ಬೆಳಿಗ್ಗೆ 8 ಗಂಟೆಗೆ ತನ್ನ ಮುಂದೆ ಹಾಜರುಪಡಿಸಿದ್ದು ತಾನು ಅವರನ್ನು ವಶಕ್ಕೆ ಪಡೆದು ಅವರ ಸ್ವಇಚ್ಚಾ ಹೇಳಿಕೆಯನ್ನು ಪಡೆದು ಅವರ ಬಗ್ಗೆ ತನಿಖೆ ಮಾಡಿ ವರದಿ ನೀಡುವಂತೆ ಚಾಸಾ-142 ಶ್ರೀಕಾಂತ್ ಇವರಿಗೆ ನಿರ್ದೇಶನ ನೀಡಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:138 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 08-02-2019 ರಂದು 1 ಮತ್ತು 8 ನೇ ಆರೋಪಿತರಾದ ನೀವು ನಿಮ್ಮ ಸ್ವಇಚ್ಚಾ ಹೇಳಿಕೆಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಆಯುಧವನ್ನು ತೋರಿಸುವುದಾಗಿ ಹೇಳಿದ ಮೇರೆಗೆ ಪಂಚರಿಗೆ ನೋಟಿಸು ಕೊಟ್ಟು ಅವರನ್ನು ಬರ ಮಾಡಿಕೊಂಡು ನಂತರ ತಮ್ಮ ಸಿಬ್ಬಂದಿ ಮತ್ತು ಪಂಚರು, ನೀವು 1 ಮತ್ತು 8 ನೇ ಆರೋಪಿತರೊಂದಿಗೆ ವಾಹನ ಸಂಖ್ಯೆ ಕೆಎ-20-ಜಿ-325 ರಲ್ಲಿ ಹೋದೆವು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:139 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಆರೋಪಿತರು ತೋರಿಸಿದಂತೆ ಮಣೂರು ಗ್ರಾಮದ ಬಾಳಬೆಟ್ಟು ಎಂಬಲ್ಲಿರುವ ಅಮೃತೇಶ್ವರಿ ಸ್ಟೋರ್ ಬಳಿ ವಾಹನ ನಿಲ್ಲಿಸಲು ಹೇಳಿದರು , ಅಲ್ಲಿಂದ ಸ್ವಲ್ಪ ದೂರದಲ್ಲಿ ಕೃತ್ಯಕ್ಕೆ ಬಳಸಿದ ಆಯುಧಗಳನ್ನು ಬಿಸಾಡಿರುವುದಾಗಿ ತಿಳಿಸಿದ ಮೇರೆಗೆ ವಾಹನವನ್ನು ಅಲ್ಲೇ ನಿಲ್ಲಿಸಿ ನೀನು 8 ನೇ ಆರೋಪಿ ವಾಹನದಿಂದ ಇಳಿದು ತಮ್ಮನ್ನು ಹೋಟೆಲ್ ಇಂದ್ರಪ್ರಸ್ಥ ಬೋರ್ಡ್ ಹತ್ತಿರ

ಕರೆದುಕೊಂಡು ಹೋಗಿ ಕೃತ್ಯಕ್ಕೆ ಬಳಸಿದ ಕಬ್ಬಿಣದ ರಾಡ್ ಮತ್ತು ತಲವಾರುಗಳನ್ನು ತಮ್ಮ ಹಾಗೂ ಪಂಚರ ಸಮಕ್ಷಮ ಪೊದೆಗಳಿಂದ ತೆಗೆದು ಹಾಜರುಪಡಿಸಿದೆ, ಅದನ್ನು ಪಂಚರ ಸಮಕ್ಷಮ ಮಹಜರು ಮಾಡಿ, ಫೋಟೋ ತೆಗೆದು ಅಮಾನತುಪಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ140 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ನೀನು 1 ನೇ ಆರೋಪಿ ವಾಹನದಿಂದ ಇಳಿದು 8 ನೇ ಆರೋಪಿ ತೋರಿಸಿದ ಅದೇ ಸ್ಥಳಕ್ಕೆ ಕರೆದುಕೊಂಡು ಹೋಗಿ ಕೃತ್ಯಕ್ಕೆ ಬಳಸಿದ ತಲವಾರು ಮತ್ತು ರಾಡ್ ಅನ್ನು ಬಿಸಾಡಿದ ಸ್ಥಳ ಎಂದು ತೋರಿಸಿದೆ, ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಮಾಡಿ ಫೋಟೋ ತೆಗೆದು, ನಂತರ 1, 8 ಮತ್ತು 9 ನೇ ಆರೋಪಿತರ ವೈದ್ಯಕೀಯ ಪರೀಕ್ಷೆ ಮಾಡಿಸಿ ನ್ಯಾಯಾಲಯದ ಮಂದೆ ಹಾಜರುಪಡಿಸಿದೆ ಹಾಗೂ ಪುನಃ ನಿಮ್ಮನ್ನು ಪೊಲೀಸ್ ವಶಕ್ಕೆ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದೆ. ನ್ಯಾಯಾಲಯದ ಆದೇಶದಂತೆ ನಿಮ್ಮನ್ನು ಪೊಲೀಸ್ ವಶಕ್ಕೆ ಪಡೆದುಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ141 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 09.02.2019 ರಂದು ಅರಣ್ಯಾಧಿಕಾರಿ ಆಗುಂಬೆ ಇವರಿಗೆ ನೀವು ಆರೋಪಿತರು ದಿನಾಂಕ 27.01.2019 ರಂದು ರಾತ್ರಿ 7 ಗಂಟೆಯಿಂದ 10 ಗಂಟೆಯವರೆಗೆ ಆಗುಂಬೆ ಚೆಕ್‌ಪೋಸ್ಟ್ ದಾಟಿ ಪ್ರಯಾಣಿಸಿದ ಬಗ್ಗೆ ಸಿಸಿ ಕ್ಯಾಮೆರಾದಲ್ಲಿ ದಾಖಲಾದ ದ್ರಶ್ಯಗಳನ್ನು ನೀಡುವಂತೆ ಕೋರಿಕೆ ಪತ್ರ ಸಲ್ಲಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:142 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ನೀನು 1 ನೇ ಆರೋಪಿ ಕೃತ್ಯ ನಡೆದ ಸ್ಥಳವನ್ನು ತೋರಿಸುವುದಾಗಿ ಹೇಳಿದ ಮೇರೆಗೆ ಪಂಚರನ್ನು ಕಚೇರಿಗೆ ಬರಮಾಡಿಕೊಂಡು ಪಂಚರಾಗಿ ಸಹಕರಿಸಲು ನೋಟಿಸು ಕೊಟ್ಟೆನು, ನಂತರ 1 ನೇ ಅರೋಪಿ, ಪಂಚರು ಮತ್ತು ಸಿಬ್ಬಂದಿಯವರೊಂದಿಗೆ 10-45 ಗಂಟೆಗೆ ಠಾಣೆಯಿಂದ ಹೊರಟು 1 ನೇ ಆರೋಪಿ ತೋರಿಸಿದ ಮಣೂರು ಗ್ರಾಮದ ಚಿಕ್ಕನಕೆರೆ ಎಂಬಲ್ಲಿರುವ ಚಾಸಾ-1 ಇವರ ಮನೆಗೆ ಕರೆದುಕೊಂಡು ಹೋಗಿ ಕೃತ್ಯ ನಡೆಸಿದ ಸ್ಥಳವನ್ನು ತೋರಿಸಿದ್ದು, ಸದ್ರಿ ಸ್ಥಳದ ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿ, ಪೋಟೋ ತೆಗೆದಿದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:143 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ನೀನು 1 ನೇ ಆರೋಪಿ ನಮ್ಮನ್ನು ಕೃತ್ಯ ನಡೆಸಲು ಸಂಚು ರೂಪಿಸಿದ ಸ್ಥಳವನ್ನು ತೋರಿಸುವುದಾಗಿ ಹೇಳಿದ ಮೇರೆಗೆ ಅಲ್ಲಿಂದ ಮಣೂರು ಗ್ರಾಮದ ಚಿಕ್ಕನಕೆರೆ ಎಂಬಲ್ಲಿರುವ ನಿನ್ನ ಮನೆಗೆ ಕರೆದುಕೊಂಡು ಹೋಗಿ ಸದ್ರಿ ಸ್ಥಳದಲ್ಲಿ ಸಂಚು ರೂಪಿಸಿರುವುದಾಗಿ ತಿಳಿಸಿದ ಮೇರೆಗೆ ಸದ್ರಿ ಸ್ಥಳವನ್ನು ಪರಿಶೀಲಿಸಿ ಪಂಚರ ಸಮಕ್ಷಮ ಮಹಜರು ತಯಾರಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:144 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ನೀನು 1 ನೇ ಅರೋಪಿ ತಮ್ಮನ್ನು ಮನೆಯ ಹಿಂಭಾಗಕ್ಕೆ ಕರೆದುಕೊಂಡು ಹೋಗಿ ಶೌಚಾಲಯದ ಪಿಟ್ ಅನ್ನು ತೋರಿಸಿ ಇದೇ ಜಾಗಕ್ಕೆ ಸಂಬಂಧಿಸಿದಂತೆ ಗಲಾಟೆಯಾಗಲು ಕಾರಣವಾಗಿರುತ್ತದೆ ಎಂದು ತಿಳಿಸಿದೆ ಹಾಗೂ ಪಕ್ಕದಲ್ಲಿದ್ದ ಚಾಸಾ-1 ಲೋಹಿತ್ ಪೂಜಾರಿ ಈತನ ಜಾವನ್ನು ತೋರಿಸಿ ಪಕ್ಕದಲ್ಲಿದ ಕುಡಿಯುವ ನೀರಿನ ಬಾವಿಯನ್ನು ತೋರಿಸಿದೆ ಆ ಬಗ್ಗೆ

ಜಾಗವನ್ನು ಪರಿಶೀಲನೆ ಮಾಡಿ ಪೋಟೋ ತೆಗೆದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:145 ಪ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 09-02-2019 ರಂದು ನೀನು 1 ನೇ ಆರೋಪಿ ತನ್ನ ಜೊತೆ ಬಂದರೆ ಕೃತ್ಯಕ್ಕೆ ಬಳಸಿದ್ದ ಮೋಟಾರ್ ಸೈಕಲ್ ಗಳನ್ನು ತೋರಿಸುವುದಾಗಿ ಹೇಳಿದ ಮೇರೆಗೆ ತನ್ನನ್ನು, ಪಂಚರು ಮತ್ತು ಸಿಬ್ಬಂದಿಯನ್ನು ಕುಂದಾಪುರ ತಾಲೂಕು ವಕ್ವಾಡಿ ಗ್ರಾಮದ ಅಶೋಕ ನಗರದಲ್ಲಿರುವ ಗೋಲ್ಡನ್ ಚಾಯ್ಸ್ ಫ್ಯಾಕ್ಟರಿ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿ ನಿಲ್ಲಿಸಿದ್ದ ಎರಡು ಮೋಟಾರ್ ಸೈಕಲ್ ಸಂಖ್ಯೆ: ಕೆಎ-22-ಇಕ್ಯೂ-7330 ಮತ್ತು ಕೆಎ-19-ಇಡಿ-952 ತೋರಿಸಿದ್ದು, ಸದರಿ ಎರಡು ಮೋಟಾರ್ ಸೈಕಲ್ ಗಳನ್ನು ಪಂಚರ ಸಮಕ್ಷಮ ಮಹಜರು ಮಾಡಿ, ಪೋಟೋ ತೆಗೆದು ಅಮಾನತುಪಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:146 ಪ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ನೀನು 1 ನೇ ಆರೋಪಿ ಕೃತ್ಯ ನಡೆಸಿದ ನಂತರ ತಲೆಮರೆಸಿಕೊಂಡಿದ್ದ ಜಾಗವನ್ನು ತೋರಿಸುವುದಾಗಿ ತಿಳಿಸಿದ ಮೇರೆಗೆ ತನ್ನನ್ನು, ಪಂಚರನ್ನು ಮತ್ತು ಸಿಬ್ಬಂದಿಯನ್ನು ಹೆಬ್ರಿ ತಾಲೂಕು ಕುಚ್ಚೂರು ಗ್ರಾಮದ ಕಾನ್ಬೆಟ್ಟುವಿನಲ್ಲಿರುವ ಕೃಷ್ಣ ಮರಕಾಲ ಈತನ ಮನೆಗೆ ಕರೆದುಕೊಂಡು ಹೋದನು. ಸದರಿ ಮನೆಯಲ್ಲಿದ್ದ ಕೃಷ್ಣ ಮರಕಾಲ 1 ನೇ ಆರೋಪಿಯನ್ನು ನೋಡಿ ಗುರುತಿಸಿ, ಈತನು ಇತರರೊಂದಿಗೆ ತನ್ನ ಮನೆಯಲ್ಲಿ ಉಳಿದುಕೊಂಡಿರುವುದಾಗಿ ಹಾಗೂ ಸದರಿ ಸಮಯ ಆರೋಪಿತರು ತನ್ನ ಪೋನ್ ಅನ್ನು ಉಪಯೋಗಿಸಿರುವನು ಎಂದು ತಿಳಿಸಿದ ಮೇರೆಗೆ ಸದರಿ ಸ್ಥಳವನ್ನು ಪರಿಶೀಲಿಸಿ ಪಂಚರ ಸಮಕ್ಷಮ ಮಹಜರು ಮಾಡಿ, ಪೋಟೋ ತೆಗೆದು, ಕೃಷ್ಣ ಮರಕಾಲ ಹಾಜರುಪಡಿಸಿದ ಮೊಬೈಲ್ ಪೋನ್ ಅನ್ನು

ಅಮಾನತುಪಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ147 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 09.02.2019 ರಂದು ಚಾಸಾ-142 ಶ್ರೀಕಾಂತ್ ಇವರು 3 ನೇ ಆರೋಪಿ ಕೊಲೆ ಮಾಡಲು ಉಪಯೋಗಿಸಿದ ತಲವಾರು, ಸ್ಟೀಲ್ ರಾಡ್ ಮತ್ತು ಕಬ್ಬಿಣದ ರಾಡ್, 5 ಮತ್ತು 6 ನೇ ಅರೋಪಿತರು ತೋರಿಸಿದ ಸ್ಥಳದ ಮಹಜರು, ಫೋಟೋಗಳನ್ನು ವರದಿಯೊಂದಿಗೆ ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡೆನು ಹಾಗೂ ಮುದ್ದೆಮಾಲುಗಳನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ148 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ 1 ನೇ ಆರೋಪಿ ತಲೆಮರೆಸಿಕೊಂಡಿದ್ದ ಜಾಗವನ್ನು ತೋರಿಸುವುದಾಗಿ ಹೇಳಿದ ಮೇರೆಗೆ, ತನ್ನನ್ನು, ಪಂಚರನ್ನು ಮತ್ತು ಸಿಬ್ಬಂದಿಯವರನ್ನು ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲೂಕಿನ ಸೀತೂರು ಗ್ರಾಮದ ಕಂಕಳೆ ಎಂಬಲ್ಲಿರುವ ಈರ ಮರಕಾಲ ಈತನ ಮನೆಗೆ ಕರೆದುಕೊಂಡು ಹೋಗಿದ್ದು ಆ ಸಮಯ ಈರ ಮರಕಾಲ ಮನೆಯಲ್ಲಿ ಇದ್ದು, ನೀನು 1 ನೇ ಆರೋಪಿ ಮತ್ತು ಇತರ ಆರೋಪಿತರು ತನ್ನ ಮನೆಗೆ ಬಂದಿರುವ ಬಗ್ಗೆ ತಿಳಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಮಾಡಿ, ಫೋಟೋ ತೆಗೆದು, ಈರ ಮರಕಾಲ ಈತನ ಹೇಳಿಕೆಯನ್ನು ದಾಖಲಿಸಿಕೊಂಡು ಮರಳಿ ಆರೋಪಿಯೊಂದಿಗೆ ಬ್ರಹ್ಮಾವರ ವೃತ್ತ ಕಚೇರಿಗೆ ಬಂದಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:149 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 10.02.2019 ರಂದು ರಾತ್ರಿ 8-30 ಗಂಟೆಗೆ ಚಾಸಾ-143, 3 ನೇ ಆರೋಪಿ ತೋರಿಸಿಕೊಟ್ಟ ಸ್ಥಳದಲ್ಲಿ ವಶಪಡಿಸಿಕೊಂಡ ಬಟ್ಟೆ ಮತ್ತು ಮಹಜರನ್ನು ವರದಿಯೊಂದಿಗೆ ಹಾಜರುಪಡಿಸಿದರು ಅದನ್ನು ಕಡತಕ್ಕೆ ಅಳವಡಿಸಿಕೊಂಡೆನು ಹಾಗೂ ಮುದ್ದೆಮಾಲುಗಳನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:150 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 11.02.2019 ರಂದು ಚಾಸಾ-139 ನೀನು 15 ನೇ ಆರೋಪಿ ತೋರಿಸಿಕೊಟ್ಟ ಮನೆಯಲ್ಲಿ ಮಾಡಿದ ಮಹಜರು, ನಿನ್ನಿಂದ ವಶಪಡಿಸಿಕೊಂಡ ಮೂರು ಮೊಬೈಲ್ ಗಳನ್ನು ವರದಿಯೊಂದಿಗೆ ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡೆನು ಹಾಗೂ ಮುದ್ದೆಮಾಲುಗಳನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:151 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 11.02.2019 ರಂದು ಚಾಸಾ-141 ನೀನು 14 ನೇ ಆರೋಪಿಯನ್ನು ದಸ್ತಗಿರಿ ಮಾಡಿ ಮಹಜರು ಸಮಯದಲ್ಲಿ ಅಮಾನತುಪಡಿಸಿಕೊಂಡಿದ್ದ ಮೊಬೈಲ್, ಆರೋಪಿಗಳಿಗೆ ಸಹಕರಿಸಿದ ಕೆಎ-14-ಇಎಫ್-8765 ನೊಂದಣಿ ಸಂಖ್ಯೆಯ ಆಕ್ಟೀವಾ ವಾಹನವನ್ನು ಪಂಚನಾಮೆ ಮತ್ತು ವರದಿಯೊಂದಿಗೆ ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡೆನು ಹಾಗೂ ಮುದ್ದೆಮಾಲುಗಳನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ

ನಿವೇದಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ152 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ಚಾಸಾ-140 ತನಿಖೆ ಮಾಡಿ ವರದಿಯೊಂದಿಗೆ ಸ್ವತ್ತುಗಳಾದ 3 ಮೊಬೈಲ್ ಗಳು, ಇಕೋ ಕಾರು ಸಂಖ್ಯೆ ಕೆಎ-20-ಡಿ-4819, 7 ನೇ ಅರೋಪಿ ಹಾಜರುಪಡಿಸಿದ ಬಟ್ಟೆಗಳು, ಕೆಎ-19-ಜೆ-0038 ಸಂಖ್ಯೆ ಯಮಹಾ ಬೈಕ್, 2 ಕಬ್ಬಿಣದ ರಾಡ್ ಗಳು ಗಳನ್ನು ವರದಿಯೊಂದಿಗೆ ಹಾಜರುಪಡಿಸಿದರು ಹಾಗೂ ನೀವು 7, 12, 13 ಮತ್ತು 14 ನೇ ಆರೋಪಿತರ ವೈದ್ಯಕೀಯ ಪರೀಕ್ಷೆ ಮಾಡಿಸಿ ರಿಮಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ153 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ 12.02.2019 ರಂದು ನೀನು 1 ನೇ ಆರೋಪಿ ತನ್ನ ಜೊತೆ ಬಂದರೆ ಘಟನೆ ನಡೆದ ನಂತರ ತಂಗಿರುವ ಮನೆ, ಘಟನೆ ಸಮಯ ಧರಿಸಿದ್ದ ಬಟ್ಟೆಗಳು ಮತ್ತು ಮೊಬೈಲ್ ಅನ್ನು ಹಾಜರುಪಡಿಸುವುದಾಗಿ ತಿಳಿಸಿದ ಮೇರೆಗೆ ತನ್ನನ್ನು, ಪಂಚರನ್ನು ಮತ್ತು ಸಿಬ್ಬಂದಿಯನ್ನು ಕೊಡಗು ಜಿಲ್ಲೆಯ ಸೋಮವಾರಪೇಟೆಯಲ್ಲಿರುವ ಸೂರ್ಲಬ್ಬಿ ಗ್ರಾಮದಲ್ಲಿದ್ದ ಮನೀಷ ಎಂಬವರ ಮನೆಗೆ ಕರೆದುಕೊಂಡು ಹೋಗಿ ಬಟ್ಟೆಗಳನ್ನು ಮತ್ತು ಮೊಬೈಲ್ ಅನ್ನು ಸದರಿ ಮನೆಯಿಂದ ತಂದು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಮಹಜರು ಮಾಡಿ ಅಮಾನತುಪಡಿಸಿಕೊಂಡೆನು ಹಾಗೂ ಸ್ಥಳದಲ್ಲಿ ಹಾಜರಿದ್ದ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:154 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 12.02.2019 ರಂದು ಚಾಸಾ-142 ಇವರು ನೀವು 3,5 ಮತ್ತು 6 ನೇ ಆರೋಪಿತರೊಂದಿಗೆ ಬಟ್ಟೆ ಖರೀದಿ ಮಾಡಿದ ಅಂಗಡಿಗೆ ಹೋಗಿ ಅಲ್ಲಿ ವಿಚಾರಣೆ ಮಾಡಿದ ಮಹಜರನ್ನು ತನ್ನ ಸಮಕ್ಷಮ ವರದಿಯೊಂದಿಗೆ ಹಾಜರುಪಡಿಸಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:155 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಚಾಸಾ-139 ನೀನು 16 ನೇ ಆರೋಪಿ ನಿನ್ನನ್ನು ದಸ್ತಗಿರಿ ಮಾಡಿ ನಿನ್ನಿಂದ ಸ್ವಾಧೀನಪಡಿಸಿಕೊಂಡಿದ್ದ ಮೊಬೈಲ್ ಪಂಚನಾಮೆ ಮಾಡಿ ವರದಿಯೊಂದಿಗೆ ತನ್ನ ಸಮಕ್ಷಮ ಹಾಜರುಪಡಿಸಿದ್ದರು ಹಾಗೂ ಸದ್ರಿ ಮೊಬೈಲ್ ಅನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು ಹಾಗೂ ಅದೇ ಸಾಕ್ಷಿದಾರ ನಾಗರಾಜ ಈತನ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:156 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 13.02.2019 ರಂದು ನೀನು 9 ನೇ ಆರೋಪಿ ತನ್ನ ಜೊತೆ ಬಂದರೆ ಕೃತ್ಯಕ್ಕೆ ಬಳಸಿದ ಮೊಬೈಲ್ ಅನ್ನು ಹಾಜರುಪಡಿಸುವುದಾಗಿ ಹೇಳಿದ ಮೇರೆಗೆ, ತಾನು, ಪಂಚರು ಮತ್ತು ಸಿಬ್ಬಂದಿಯೊಂದಿಗೆ ಇಲಾಖಾ ವಾಹನದಲ್ಲಿ ಕೋಟ ಗ್ರಾಮದ ಹಂದಟ್ಟು ಬಾರಿಕೆರೆ ಎಂಬಲ್ಲಿರುವ ನಿನ್ನ ಮನೆಗೆ ಕರೆದುಕೊಂಡು ಹೋಗಿ ಮೊಬೈಲ್ ಅನ್ನು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಮಹಜರು ಮಾಡಿ, ಫೋಟೋ ತೆಗೆದು ಅಮಾನತುಪಡಿಸಿಕೊಂಡೆನು ಹಾಗೂ ಸ್ಥಳದಲ್ಲಿದ್ದ 9 ನೇ ಆರೋಪಿಯ ಸಹೋದರ ಸುರೇಶ್ ಕಾಂಚನ್ ಈತನ

ಹೇಳಿಕೆಯನ್ನು ದಾಖಲಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:157 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನೀನು 1 ನೇ ಆರೋಪಿ ತನ್ನ ಜೊತೆ ಬಂದಲ್ಲಿ ಕೊಲೆ ನಡೆಸಿದ ನಂತರ ತನಗೆ ಮತ್ತು 8 ನೇ ಆರೋಪಿಗೆ ಅಶ್ರಯ ಕೊಟ್ಟ ಶಂಕರ ಮೊಗವೀರ ಈತನ ಮನೆಯನ್ನು ತೋರಿಸುವುದಾಗಿ ಹೇಳಿದ ಮೇರೆಗೆ ತಾನು, ಪಂಚರು ಮತ್ತು ಸಿಬ್ಬಂದಿಗಳು 2-45 ಗಂಟೆಗೆ ಠಾಣೆಯಿಂದ ಹೊರಟು ಕುಂದಾಪುರ ತಾಲೂಕು ಕಟ್ಟೆಮಕ್ಕಿ ಎಂಬಲ್ಲಿರುವ ಶಂಕರ ಮೊಗವೀರ ಈತನ ಮನೆಯನ್ನು ತೋರಿಸಿದ್ದು ಸದ್ರಿ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಮಾಡಿ, ಪೋಟೋ ತೆಗೆದೆ ಹಾಗೂ ಸ್ಥಳದಲ್ಲಿ ಹಾಜರಿದ್ದ ನೆರಮನೆಯ ಮಹೇಶ ಈತನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:158 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ನೀನು 1 ನೇ ಆರೋಪಿ ತಾನು ಮತ್ತು ಇತರರು ಕೃತ್ಯ ನಡೆಸಿದ ನಂತರ ಆಶ್ರಯ ಪಡೆದುಕೊಂಡಿದ್ದ ಇನ್ನೊಂದು ಸ್ಥಳ ಬ್ರಹ್ಮಾವರ ತಾಲೂಕು ಚೇರ್ಕಾಡಿ ಗ್ರಾಮದ ಪೇತ್ರಿ ನಡೂರುಬೈಲು ಎಂಬಲ್ಲಿರುವ ಗೋಪಾಲ ಶೆಟ್ಟಿ ಇವರ ಹಾಡಿಯಲ್ಲಿರುವ ರೊಟ್ಟಿ ಪ್ಯಾಕ್ಟರಿ ಘಟಕಕ್ಕೆ ತ ಕರೆದುಕೊಂಡು ಹೋಗಿ ಸದರಿ ಸ್ಥಳದಲ್ಲಿ ಆಶ್ರಯ ಪಡೆದಿರುವುದಾಗಿ ತಿಳಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಮಾಡಿ, ಪೋಟೋ ತೆಗೆದು, ಸ್ಥಳದಲ್ಲಿದ್ದ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:159 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ಚಾಸಾ-139 ನೀನು 16 ನೇ ಆರೋಪಿಯನ್ನು ವಶಕ್ಕೆ ಪಡೆದು ತನ್ನ ಸಮಕ್ಷಮ ಹಾಜರುಪಡಿಸಿದ್ದು, ಆತನ ವೈದ್ಯಕೀಯ ಪರೀಕ್ಷೆ ಮಾಡಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದೆ. ಅದೇ ದಿನ ತಾನು ಬ್ರಹ್ಮಾವರ ವೃತ್ತ ಕಚೇರಿಯಲ್ಲಿದ್ದಾಗ ಮೃತ ಭರತ್ ಮತ್ತು ಮೃತ ಯತೀಶ ಈತನ ಮರಣೋತ್ತರ ಪರೀಕ್ಷೆ ಮಾಡಿದ ಕೆಎಂಸಿ ಆಸ್ಪತ್ರೆಯ ವೈದ್ಯರು ತೆಗೆದು ಇಟ್ಟಿದ್ದ 8 ಸ್ವತ್ತುಗಳನ್ನು ತನ್ನ ಸಮಕ್ಷಮ ಹಾಜರುಪಡಿಸಿದ್ದು ಅದನ್ನು ಮಹಜರು ಮಾಡಿ ಅಮಾನತುಪಡಿಸಿಕೊಂಡೆನು ಹಾಗೂ ಅದನ್ನು ಸ್ವತ್ತುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:160 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಫಾರೆನ್ಸಿಕ್ ವಿಭಾಗದವರು ನೀಡಿದ ಮೃತರ ವಿಸೆರಾಗಳನ್ನು ಪಡೆದುಕೊಂಡೆನು ಮತ್ತು ಮೃತರ ಮರಣೋತ್ತರ ಪರೀಕ್ಷಾ ವರದಿಗಳನ್ನು, ಚಾಸಾ -6 ಮತ್ತು 2 ಇವರ ಕಲಂ 164 ರಡಿಯಲ್ಲಿ ನೀಡಿದ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:161 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 15.02.2019 ರಂದು ನೀನು 9 ನೇ ಅರೋಪಿ ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳವನ್ನು ತೋರಿಸುವುದಾಗಿ ತಿಳಿಸಿದ ಮೇರೆಗೆ ತಾನು, ಪಂಚರು ಮತ್ತು ಸಿಬ್ಬಂದಿಯೊಂದಿಗೆ ಇಲಾಖಾ ವಾಹನದಲ್ಲಿ ಬೆಳಿಗ್ಗೆ 11 ಗಂಟೆಗೆ ಹೊರಟು ಮಣೂರು ಗ್ರಾಮದ ಚಿಕ್ಕನಕೆರೆ ಎಂಬಲ್ಲಿರುವ 1 ನೇ ಆರೋಪಿಯ ಮನೆಯ ಮುಂಭಾಗದ ಸ್ಥಳವನ್ನು ತೋರಿಸಿ ಸದರಿ ಸ್ಥಳದಲ್ಲಿ ಸಂಚು ರೂಪಿಸಿರುವುದಾಗಿ ತಿಳಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪಂಚರ

ಸಮಕ್ಷಮ ಮಹಜರು ಮಾಡಿ ಫೋಟೋ ತೆಗೆದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:162 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ನೀವು 2 ಮತ್ತು 4 ನೇ ಆರೋಪಿತರಾದ ನಿಮ್ಮನ್ನು ತನಿಖೆ ಸಲುವಾಗಿ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಿ ಪೊಲೀಸ್ ವಶಕ್ಕೆ ನೀಡುವಂತೆ ಕೋರಿದೆನು, ನ್ಯಾಯಾಲಯವು ಷದ್ರಿ ಆರೋಪಿತರನ್ನು 6 ದಿನಗಳ ಕಾಲ ಪೊಲೀಸ್ ವಶಕ್ಕೆ ನೀಡಿರುತ್ತದೆ. ಅದೇ ದಿನ 1, 3, 5, 8 ಮತ್ತು 9 ನೇ ಆರೋಪಿತರಾದ ನಿಮ್ಮನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ರಿಮಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:163 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 16.02.2019 ರಂದು ಚಾಸಾ-142, ನೀನು 2 ನೇ ಆರೋಪಿಯನ್ನು ವಿಚಾರಣೆ ಮಾಡಿ, ತನಿಖೆ ನಡೆಸಿ, ಹಾಜರುಪಡಿಸಿದ್ದ ಕೃತ್ಯಕ್ಕೆ ಬಳಸಿದ ಆಯುಧಗಳು, ಬಟ್ಟೆಗಳು ಮತ್ತು ವಾಹನವನ್ನು ವಶಕ್ಕೆ ಪಡೆದು ಮಹಜರು ಮತ್ತು ವರದಿಯೊಂದಿಗೆ ತನ್ನ ಮುಂದೆ ಹಾಜರುಪಡಿಸಿದ್ದರು. ತಾನು ಸ್ವತ್ತುಗಳನ್ನು ಸ್ವತ್ತುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:164 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 16.02.2019 ರಂದು ನೀನು 4 ನೇ ಆರೋಪಿ ತನ್ನ ಜೊತೆ ಬಂದರೆ ಕೃತ್ಯಕ್ಕೆ ಬಳಸಿದ ಮೊಬೈಲ್ ಅನ್ನು ತೋರಿಸುವುದಾಗಿ ತಿಳಿಸಿದ ಮೇರೆಗೆ ತಾನು, ಪಂಚರು ಮತ್ತು ಸಿಬ್ಬಂದಿಯೊಂದಿಗೆ ಇಲಾಖಾ ವಾಹನದಲ್ಲಿ 3 ಗಂಟೆಗೆ ಹೊರಟು ಮಣೂರು ಗ್ರಾಮದ ಚಿಕ್ಕನಕೆರೆ ಎಂಬಲ್ಲಿರುವ ತನ್ನ ಮನೆಗೆ

ಕರೆದುಕೊಂಡು ಹೋಗಿ ಮೊಬೈಲ್ ಅನ್ನು ಹಾಜರುಪಡಿಸಿದ್ದು, ಅದನ್ನು ಪಂಚರ ಸಮಕ್ಷಮ ಮಹಜರು ಮಾಡಿ ಪೋಟೋ ತೆಗೆದು ಅಮಾನತುಪಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:165 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 17.02.2019 ರಂದು ನೀವು 1, 9, 10, 11 ಮತ್ತು 14 ನೇ ಆರೋಪಿತರ ಮ ಮೊಬೈಲ್ ಸಂಖ್ಯೆಗೆ ಒಳ ಮತ್ತು ಹೊರ ಕರೆಗಳ ವಿವರಗಳ ಬಗ್ಗೆ ಕರೆ ಮಾಡಿದ ಚಂದಾದಾರರ ವಿಳಾಸದ ಬಗ್ಗೆ ಮಾಹಿತಿ ನೀಡುವಂತೆ ಮೊಬೈಲ್ ಕಂಪೆನಿಯ ಸರ್ವಿಸ್ ಪ್ರೊವೈಡರ್ ಇವರಿಗೆ ಕೋರಿಕೆ ಪತ್ರ ಸಲ್ಲಿಸಿದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:166 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 18.02.2019 ರಂದು 2 ಮತ್ತು 4 ನೇ ಆರೋಪಿತರಾದ ನಿಮ್ಮನ್ನು ವೈದ್ಯಕೀಯ ಪರೀಕ್ಷೆ ಮಾಡಿಸಿ ರಿಮಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದೆನು. ಅದೇ ದಿನ ಚಾಸಾ-139, 17 ನೇ ಆರೋಪಿಯನ್ನು ದಸ್ತಗಿರಿ ಮಾಡಿದ ಬಗ್ಗೆ ತಿಳಿಸಿದ್ದು ತಾನು ಸೂಕ್ತ ರೀತಿಯಲ್ಲಿ ವಿಚಾರಣೆ ಮಾಡಿ ತನಿಖೆ ಮಾಡುವಂತೆ ಸೂಚಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:167 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ತಾನು ಮತ್ತು ಸಹಾಯಕ ತನಿಖಾಧಿಕಾರಿಗಳು ಸ್ವಾಧೀನಪಡಿಸಿಕೊಂಡಿದ್ದ 36 ಸ್ವತ್ತುಗಳನ್ನು ಸಿಬ್ಬಂದಿ ಮೂಲಕ ಪರೀಕ್ಷೆ ಮತ್ತು ವರದಿಗಾಗಿ ಆರ್.ಎಫ್.ಎಸ್.ಎಲ್ ಮಂಗಳೂರಿಗೆ ಕಳುಹಿಸಿಕೊಟ್ಟೆನು ಹಾಗೂ ದಿಃ 19.02-2019 ರಂದು 17 ನೇ ಅರೋಪಿಯಾದ ನಿನ್ನನ್ನು ವೈದ್ಯಕೀಯ

ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ168 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿಃ19.02.2019 ರಂದು ನ್ಯಾಯಾಂಗ ಬಂಧನದಲ್ಲಿದ್ದ 10 ನೇ ಆರೋಪಿಯನ್ನು ತನಿಖೆಗೆ ಸಲುವಾಗಿ ಪೊಲೀಸ್ ವಶಕ್ಕೆ ನೀಡುವಂತೆ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಿ ನ್ಯಾಯಾಲಯದ ಆದೇಶದಂತೆ ಪೊಲೀಸ್ ವಶಕ್ಕೆ ಪಡೆದುಕೊಂಡು ಚಾಸಾ-141 ಇವರಿಗೆ 10 ನೇ ಆರೋಪಿಯನ್ನು ವಿಚಾರಣೆ ಮಾಡಿ ವರದಿ ನೀಡುವಂತೆ ಆದೇಶ ಮಾಡಿದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ169 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ಚಾಸಾ-141 ನೀನು 10 ನೇ ಆರೋಪಿಯನ್ನು ತನಿಖೆ ಮಾಡಿ, ವರದಿಯೊಂದಿಗೆ ತನ್ನ ಸಮಕ್ಷಮ ಹಾಜರುಪಡಿಸಿದರು. ತಾನು 10 ನೇ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದೆ ಹಾಗೂ ಸಾಕ್ಷಿದಾರರಾದ ಚಾಸಾ-2 ರಿಂದ 10 ಮತ್ತು ಚಾಸಾ-27 ಇವರ ಮರುಹೇಳಿಕೆಗಳನ್ನು ಪಡೆದುಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ170 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ 1 ನೇ ಆರೋಪಿ ರಾಜಶೇಖರ ರೆಡ್ಡಿ ಮನೆಯ ಟಾಯ್ಲೆಟ್ ಪಿಟ್ ವಿಚಾರಣದಲ್ಲಿ ಚಾಸಾ-1 ಆಕ್ಷೇಪಣೆ ಮಾಡಿದ ವರದಿ ಹಾಗೂ ದಾಖಲೆಗಳನ್ನು ಒದಗಿಸಿಕೊಡುವಂತೆ ವೈದ್ಯಾಧಿಕಾರಿ , ಸಿಹೆಚ್.ಸಿ ಕೋಟ ಹಾಗೂ ಕೋಟ ಗ್ರಾಮ ಪಂಚಾಯಿತಿ ಪಿಡಿಓ ಇವರಿಗೆ ಕೋರಿಕೆ ಪತ್ರ ಸಲ್ಲಿಸಿದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:171 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಚಾಸಾ-1 ಖರೀದಿ ಮಾಡಿದ ಮನೆಯ ದಾಖಲಾತಿ ಒದಗಿಸುವಂತೆ ನೊಂದಣಾಧಿಕಾರಿ ಬ್ರಹ್ಮಾವರ, ಬಾರಿಕೇರಿ ಯುವಕ ಮಂಡಲ, ಬಾಳೆಬೆಟ್ಟು ಫ್ರೆಂಡ್ಸ್ , ಭಗತ್‌ಸಿಂಗ್ ಯುವ ವೇದಿಕೆ, ಕಲ್ಮಾಡಿ ಯುವಕ ಮಂಡಲ ಕೋಟ ಈ ಸಂಘಗಳು ನೊಂದಣಿಯಾದ ಬಗ್ಗೆ ವರದಿ ನೀಡುವಂತೆ ಜಿಲ್ಲಾ ಸಹಕಾರ ಸಂಘಗಳ ನೊಂದಣಾಧಿಕಾರಿಗೆ ಕೋರಿಕೆ ಪತ್ರಗಳನ್ನು ಸಲ್ಲಿಸಿದೆನು ಹಾಗೂ ವಶಪಡಿಸಿಕೊಂಡಿದ್ದ ವಾಹನಗಳ ಬಿ ಎಕ್ಸಟ್ರಾಕ್‌ಟ್ ಒದಗಿಸುವಂತೆ ಆರ್ ಟಿ .ಓ ಉಡುಪಿ ಇವರಿಗೆ ಕೋರಿಕೆ ಪತ್ರ ಸಲ್ಲಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ:172 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 22.02.2019 ರಂದು ಆರೋಪಿತರು ತಲೆಮರೆಸಿಕೊಂಡಿದ್ದ 15 ನೇ ಆರೋಪಿ ಈತನ ಮನೆಯ ದಾಖಲಾತಿ, ಈರ ಮರಕಾಲ ಈತನ ಮನೆಯ ದಾಖಲಾತಿ, ರೊಟ್ಟಿ ಫ್ಯಾಕ್ಟರಿ ಯಾರ ಹೆಸರಿನಲ್ಲಿದೆ ಎನ್ನುವ ಬಗ್ಗೆ ಮತ್ತು ಕೃಷ್ಣ ಮರಕಾಲ ಈತನ ಮನೆಯ ದಾಖಲಾತಿಗಳನ್ನು ನೀಡುವಂತೆ ಶಂಕರನಾರಾಯಣ, ಚೇರ್ಕಾಡಿ ಮತ್ತು ಕಚ್ಚೂರು ಗ್ರಾಮಪಂಚಾತಿಗೆ ಕೋರಿಕೆ ಪತ್ರ ಸಲ್ಲಿಸಿದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:173 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿಃ 22.02.2019 ರಂದು ಚಾಸಾ-1 ಈತನ ಗಾಯದ ಪ್ರಮಾಣ ಪತ್ರವನ್ನು ಕೆಎಂಸಿ ಆಸ್ಪತ್ರೆಯಿಂದ ಮತ್ತು ದಿಃ 23.02.2019 ರಂದು ಕೋಟ ವೈದ್ಯಾಧಿಕಾರಿಗಳಿಂದ ಚಾಸಾ-8 ಮತ್ತು 9 ಇವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ದಿನಾಂಕ

25.02.2019 ರಂದು ಚಾಸಾ-137 ಆಗುಂಬೆ ಫಾರೆಸ್ಟ್ ಚೆಕ್‌ಪೋಸ್ಟಗೆ ಹೋಗಿ ಸಿಸಿ ಕ್ಯಾಮೆರಾದಲ್ಲಿ ಕಂಡು ಬಂದ ದ್ರಶ್ಯಗಳಿಗೆ ಸಂಬಂಧಿಸಿದ ಸಿಡಿಯನ್ನು ಪಡೆದುಕೊಂಡು ತನ್ನ ಸಮಕ್ಷಮ ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಕಂಪ್ಯೂಟರ್ ನಲ್ಲಿ ಪ್ಲೇ ಮಾಡಿ ನೋಡಿದಾಗ ದಿನಾಂಕ 27.01.2019 ರಂದು 19:46:16 ಗಂಟೆಗೆ ಸಿಲ್ವರ್ ಬಣ್ಣದ ಇಕೋ ಕಾರು, 19:48:34 ಗಂಟೆಗೆ ಬಿಳಿ ಬಣ್ಣದ ಸ್ವಿಫ್ಟ್ ಕಾರು, 20:02:22 ಗಂಟೆಗೆ ನೀಲಿ ಬಣ್ಣದ ಸಿಯಾಜ್ ಕಾರು, 20:02:35 ಗಂಟೆಗೆ ಬಿಳಿ ಬಣ್ಣದ ಪೋಲೋ ಕಾರು ರಸ್ತೆಯಲ್ಲಿ ಸಂಚರಿಸಿರುವುದು ಕಂಡುಬಂದಿತು. ಸದರಿ ಸಿಡಿಯನ್ನು ಪಂಚರ ಸಮಕ್ಷಮ ಮಹಜರು ಮಾಡಿ ಅಮಾನತುಪಡಿಸಿಕೊಂಡೆನು ಹಾಗೂ ಸದ್ರಿ 4 ವಾಹನಗಳ ನೊಂದಣಿ ಮಾಲೀಕರ ಮಾಹಿತಿ ನೀಡುವಂತೆ ಆರ್ ಟಿ.ಓ ಕಚೇರಿಗೆ ಕೋರಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ174 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 25.02.2019 ರಂದು ಬಾರಿಕೇರಿ ಯುವಕ ಮಂಡಲದ ಅಧ್ಯಕ್ಷರು ದಿನಾಂಕ 16.02.2018 ರಂದು ಕೋಟತಟ್ಟುವಿನಲ್ಲಿ ಹಮ್ಮಿಕೊಂಡಿದ್ದ ನಿನಾದ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ತಂದು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಮಹಜರು ಮಾಡಿ ಅಮಾನತುಪಡಿಸಿಕೊಂಡೆನು ಹಾಗೂ ದಿಃ 27.02.2019 ರಂದು ಚಾಸಾ-8, 10, 7, 3, 9, ಇವರು ನ್ಯಾಯಾಲಯದಲ್ಲಿ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಗಳನ್ನು ಪಡೆದು ಕಡತಕ್ಕೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ175 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 07.03.2019 ರಂದು ಕೋಟ ಪಿಡಿಓ ಇವರಿಂದ ಚಾಸಾ-1

ಖರೀದಿ ಮಾಡಿದ ಮನೆಯ ದಾಖಲಾತಿ, 1 ನೇ ಅರೋಪಿಯ ಮನೆಯ ದಾಖಲಾತಿ, ಟಾಯ್ಲೆಟ್ ಪಿಟ್ ನ ನಿರ್ಮಾಣದ ಬಗ್ಗೆ ವರದಿ ಮತ್ತು ದಾಖಲಾತಿಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ದಿನಾಂಕ 08.03.2019 ರಂದು ಸಾಕ್ಷಿದಾರರಾದ ಚಾಸಾ-70, 78 ಇವರ ಹೇಳಿಕೆಗಳನ್ನು ದಾಖಲಿಸಿಕೊಂಡೆನು. ಚಾಸಾ-70 ನಿನಾದ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ, ಬಾರಿಕೆರೆ ಯುವಕ ಮಂಡಳ ನೊಂದಣಿಯಾದ ಬಗ್ಗೆ ಪ್ರಮಾಣ ಪತ್ರ ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡೆನು. ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:176 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 11.03.2019 ರಂದು ತಲೆಮರೆಸಿಕೊಂಡಿದ್ದ 18 ನೇ ಆರೋಪಿಯಾದ ನಿನ್ನನ್ನು ಕೋಟ ಠಾಣೆಯ ಸಿಬ್ಬಂದಿ 4-18 ಗಂಟೆಗೆ ವರದಿಯೊಂದಿಗೆ ಹಾಜರುಪಡಿಸಿದ್ದು, ನಿನ್ನನ್ನು ದಸ್ತಗಿರಿ ಮಾಡಿ, ವಿಚಾರಣೆ ನಿನ್ನ ಸ್ವಇಚ್ಛಾ ಹೇಳಿಕೆ ದಾಖಲಿಸಿಕೊಂಡೆನು. ನೀನು 18 ನೇ ಆರೋಪಿ ನಿನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಆರೋಪಿತರಿಗೆ ತಲೆಮರೆಸಿಕೊಳ್ಳಲು ಸಹಕರಿಸಿರುವುದಾಗಿ ಹೇಳಿರುತ್ತೀಯಾ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:177 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಪಂಚರ ಸಮಕ್ಷಮ ನೀನು 18 ನೇ ಆರೋಪಿಯ ಅಂಗಜಪ್ತಿ ಮಾಡಿದಾಗ ನಿನ್ನ ಕಿಸೆಯಲ್ಲಿದ್ದ ನೋಕಿಯಾ ಮೊಬೈಲ್ ಅನ್ನು ಮಹಜರು ಮಾಡಿ ಅಮಾನತುಪಡಿಸಿಕೊಂಡೆನು. ದಿನಾಂಕ 11.03.2019 ರಂದು ಅರ್.ಎಫ್.ಎಸ್.ಎಲ್ ಮಂಗಳೂರು ಇವರಿಂದ ಪರೀಕ್ಷೆ ಮಾಡಲು ಕಳುಹಿಸಿದ್ದ ಸ್ವತ್ತುಗಳನ್ನು ವರದಿಯೊಂದಿಗೆ ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡೆನು. 12.03.2019 ರಂದು ಆರ್.ಎಫ್.ಎಸ್.ಎಲ್

ನಿಂದ ಬಂದ ಆಯುಧಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯಾಧಿಕಾರಿಗಳಿಗೆ ಕೋರಿಕೊಂಡೆನು ಹಾಗೂ ಅದೇ ದಿನ ತಕ್ಷೀರು ಸ್ಥಳದ ನಕಾಶೆ ತಯಾರಿಸಿಕೊಡುವಂತೆ ಪಿ.ಡಬ್ಲ್ಯು.ಡಿ ಇಂಜಿನಿಯರ್ ರವರಿಗೆ ಕೋರಿಕೆ ಪತ್ರ ಸಲ್ಲಿಸಿದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:178 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 13.03.2019 ರಂದು ಸಾಕ್ಷಿದಾರರಾದ ಚಾಸಾ-79, 80, 81, 83, 82 ಇವರ ಹೇಳಿಕೆಗಳನ್ನು ಪಡೆದುಕೊಂಡೆನು ಹಾಗೂ ಪಿಡಿಓ ಕಚ್ಚೂರು ಇವರಿಂದ ಕೃಷ್ಣ ಮರಕಾಲ ಈತನ ಮನೆಯ ದಾಖಲಾತಿ, ಪಿಡಿಓ ಚೇರ್ಕಾಡಿ ಗ್ರಾಮ ಪಂಚಾಯಿತಿಯಿಂದ ರೊಟ್ಟಿ ಪ್ಯಾಕ್ಟರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ: 179 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 19.03.2019 ರಂದು ಮಡಿಕೇರಿ ತಹಶೀಲ್ದಾರ್ ರವರಿಂದ ಜಯಂತಿಯವರ ಮನೆಯ ದಾಖಲಾತಿ, ದಿನಾಂಕ 21.03.2019 ರಂದು ಪಿ.ಡಬ್ಲ್ಯುಡಿ ಇಂಜಿನಿಯರ್ ನೀಡಿದ ಘಟನಾ ಸ್ಥಳದ ನಕಾಶೆ, ದಿನಾಂಕ 02.04.2019 ರಂದು ಫಾರನಿಕ್ಸ್ ವಿಭಾಗದ ಮುಖ್ಯಸ್ಥರಿಂದ ಕೃತ್ಯಕ್ಕೆ ಬಳಸಿದ ತಲವಾರು ಮತ್ತು ರಾಡ್ ನಿಂದ ಮೃತರಿಗೆ ಉಂಟಾಗಿದ ಗಾಯದ ಬಗ್ಗೆ ಅಭಿಪ್ರಾಯ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ದಿನಾಂಕ 25.03.2019 ರಂದು ಚಾಸಾ-10 ಹಾಜರುಪಡಿಸಿದ ಸ್ಪರ್ಶ ಕಾರ್ಯಕ್ರಮದ ಅಮಂತ್ರಣ ಪತ್ರಿಕೆಯನ್ನು ಪಂಚರ ಸಮಕ್ಷಮ ಮಹಜರು ಮಾಡಿ ಅಮಾನತುಪಡಿಸಿಕೊಂಡೆನು ಹಾಗೂ ಹಾಗೂ ದಿನಾಂಕ 09.04.2019 ರಂದು ಎಫ್.ಎಸ್.ಎಲ್ ಮಂಗಳೂರಿನಿಂದ ಬಂದ

ವಿಸೆರಾಕ್ಕೆ ಸಂಬಂಧಿಸಿದ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:180 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 14.04.2019 ರಂದು 1, 3, 9 ರಿಂದ 11 ನೇ ಆರೋಪಿತರ ಫೋನ್ ಕರೆಗೆ ಸಂಬಂಧಿಸಿದ ದಾಖಲಾತಿಗಳನ್ನು ಬಿ.ಎಸ್.ಎನ್.ಎಲ್, ಏರ್ಟೆಲ್, ವೊಡಾಫೋನ್ ಕಂಪೆನಿಯ ನೋಡಲ್ ಅಫೀಸರ್ ರವರಿಂದ 65 ಬಿ ಪ್ರಮಾಣ ಪತ್ರದೊಡನೆ ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ದಿನಾಂಕ 22.04.2019 ರಂದು 10 ನೇ ಆರೋಪಿ ಎಪಿಸಿ 1432 ಮತ್ತು ಎಪಿಸಿ 1423 11 ನೇ ಆರೋಪಿತರಾದ ನಿಮ್ಮ ವಿರುದ್ದ ಆರೋಪಿ ಕಂಡುಬಂದಿದ್ದರಿಂದ ಅಭಿಯೋಜನೆಗೆ ಅನುಮತಿ ನೀಡುವಂತೆ ಎಸ್.ಪಿ ಉಡುಪಿ ಇವರಿಗೆ ಕೋರಿಕೆ ಪತ್ರ ಸಲ್ಲಿಸಿದೆನು ಹಾಗೂ ದಿನಾಂಕ 24.04.2019 ರಂದು ಎಸ್.ಪಿ ಉಡುಪಿ ಇವರಿಂದ ತನಿಖೆಗೆ ಒಳಪಡಿಸಲು ಬಂದ ಅನುಮತಿ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:181 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 24.04.2019 ರಂದು ಕೆಎ-20-ಇಕ್ಯೂ-7330 ಮೋಟಾರ್ ಸೈಕಲ್ ನ ಬಿ ಎಕ್ಸಟ್ರಾಕ್ಟ್ ಅನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು ಹಾಗೂ ಅದರ ಮಾಲೀಕ ಚಾಸಾ-85 ಈತನ ಹೇಳಿಕೆಯನ್ನು ದಾಖಲಿಸಿಕೊಂಡೆನು. ದಿನಾಂಕ 25.04.2019 ರಂದು ಮೃತ ಭರತ್ ಮತ್ತು ಯತೀಶ್ ಇವರ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:182 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 27.04.2019 ರಂದು ಈ ಪ್ರಕರಣದ ತನಿಖೆಯನ್ನು ಪೂರೈಸಿ ದೋಷರೋಪಣಾ ಪತ್ರವನ್ನು ಸಲ್ಲಿಸಲು ಅನುಮತಿ ಕೋರಿ ಮೇಲಾಧಿಕಾರಿಗಳಿಗೆ ಕೋರಿಕೆ ಸಲ್ಲಿಸಿ ಅವರಿಂದ ಅನುಮತಿ ಪಡೆದು ದಿನಾಂಕ 04.05.2019 ರಂದು ದೋಷರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಹೆಚ್ಚಿನ ತನಿಖೆಯನ್ನು ಮುಂದುವರಿಸಲು ನ್ಯಾಯಾಲಯಕ್ಕೆ ಕೋರಿಕೆ ಪತ್ರ ಸಲ್ಲಿಸಿದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:183 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 10.05.2019 ರಂದು ತನಿಖೆಯನ್ನು ಮುಂದುವರಿಸಿ ಸಾಕ್ಷಿದಾರರಾದ ಚಾಸಾ-144 ಇವರ ಹೇಳಿಕೆ ಪಡೆದುಕೊಂಡೆನು. ದಿನಾಂಕ 13.05.2019 ರಂದು ನೀವು 1 ರಿಂದ 18 ನೇ ಆರೋಪಿತರಾದ ನಿಮ್ಮ ಮೊಬೈಲ್ ನ ಒಳ ಮತ್ತು ಹೊರ ಹೋಗುವ ಕರೆಗಳ ಮಾಹಿತಿ ನೀಡುವಂತೆ ಉಡುಪಿ ಎಸ್.ಪಿ ಇವರಿಗೆ ಕೋರಿಕೆ ಪತ್ರ ಸಲ್ಲಿಸಿದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:184 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 15.06.2019 ರಂದು ಸಾಕ್ಷಿದಾರರಾದ ಚಾಸಾ-146, 147, ದಿನಾಂಕ 01.07.2019 ರಂದು ಚಾಸಾ-148, ಚಾಸಾ-149, ದಿನಾಂಕ 03.07.2019 ರಂದು ಚಾಸಾ-150, ದಿನಾಂಕ 06.07.2019 ರಂದು ಚಾಸಾ-153 ಮತ್ತು ದಿ: 21.08.2019 ರಂದು ಚಾಸಾ-157 ಮತ್ತು 159 ಇವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:185 ಫ್ರಾಸಾ-104 ಇವರು ತಮ್ಮ ಮುಂದುವರಿದ ಸಾಕ್ಷಿವಿಚಾರಣೆಯಲ್ಲಿ ದಿಃ 01.11.2019 ರಂದು ಸಿಡಿಆರ್ ಕರೆಗಳಿಗೆ ಸಂಬಂಧಿಸಿದಂತೆ ಕಲಂ 65 ಬಿ ಅಡಿಯಲ್ಲಿ ಕಾಲ್ ಡಿಟೇಲ್ಸ್ ಮತ್ತು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ನಂತರ ತನಿಖೆ ಪೂರ್ಣಗೊಳಿಸಿ ನೀವು ಆರೋಪಿತರ ವಿರುದ್ಧ ಕಲಂ 173(8) ಅಡಿಯಲ್ಲಿ ನ್ಯಾಯಾಲಯಕ್ಕೆ ದೋಷರೋಪಣಾ ಪತ್ರವನ್ನು ಸಲ್ಲಿಸಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ: 186 ನಿನ್ನ ಪರವಾಗಿ ಯಾರನ್ನಾದರೂ ವಿಚಾರಣೆ ಮಾಡುತ್ತೀರಾ?

ಉತ್ತರಃ ಹೌದು, ಸಾಕ್ಷಿ ಕೊಡುವುದಿದೆ

ಪ್ರಶ್ನೆ: 187 ನಿನಗೆ ಇನ್ನೇನಾದರೂ ಹೇಳುವುದು ಇದೆಯೇ?

ಉತ್ತರಃ ಈ ಕೇಸಿಗೂ ನಮಗೂ ಸಂಬಂಧ ಇಲ್ಲ

(ಆರೋಪಿತನಿಗೆ ಈ ಮೇಲಿನ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು. ಆರೋಪಿತನಿಂದ ಬಂದಂತಹ ಉತ್ತರಗಳನ್ನು ಸ್ವತಃ ಬರೆದುಕೊಳ್ಳ ಲಾಯಿತು ಎಂದು ದೃಢೀಕರಿಸುತ್ತೇನೆ)

ದಿನಾಂಕಃ 04-10-25

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ